ಜನಮನದ ದನಿ

ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

22 ಸೆಪ್ಟೆಂಬರ್, 2026 ಮಂಗಳವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ -191 ಪುಟ-4 ಹಾಸನ E-mail : prajodayahsn@gmail.com RNI NO: KARKAN/2007/22629

ಮುಂದಿನ ಐಪಿಎಲ್ ಅವೃತ್ತಿಗೆ ಮುಖ್ಯ ಕೋಚ್ ಆಗಿ ಭಾರತ ಕ್ರಿಕೆಟ್ ತಂಡದ ಆಟಗಾರ ಜಹೀರ್ ಖಾನ್ ಅವರನ್ನು ಸಿಎಸ್‌ಕೆ ತಂಡವು ಸೋಮವಾರ ನೇಮಕ ಮಾಡಲಾಗಿದೆ.

ವಯಸ್ಸು ಚಿಕ್ಕದಾದರೂ ಆಲೋಚನೆ ದೊಡ್ಡದು ! » 2

ರೈತರಿಗೆ ಸಮರ್ಪಕ ಪರಿಹಾರಕ್ಕೆ ಆಗ್ರಹ » 3

1440 ಹಳ್ಳಿಗಳನ್ನು ಕಸ್ತೂರಿ ರಂಗನ್ ವರದಿಯಿಂದ ಕೈ ಬಿಡಲು ಸೂಚನೆ » 4

ಅಧಿವೇಶನ: ಕಸ್ತೂರಿ ರಂಗನ್ ವರದಿ ಚರ್ಚೆ

ದೆಹಲಿಗೆ ಸರ್ವಪಕ್ಷ ನಿಯೋಗ ಕರೆದೊಯ್ಯಿರಿ ಎಂದ ಬಿಜೆಪಿ | ಭೌತಿಕ ಸಮೀಕ್ಷೆಗೆ ಆಗ್ರಹ

- ಪ್ರಜೋದಯ ವರದಿ

ಬೆಂಗಳೂರು: ಪಶ್ಚಿಮ ಘಟ್ಟದ ಜನರ ಪಾಲಿಗೆ ಮರಣ ಶಾಸನ ಎಂದೇ ಪರಿಗಣಿಸಲ್ಪಟ್ಟಿರುವ ಕಸ್ತೂರಿ ರಂಗನ್ ವರದಿ ಸಾಧಕ-ಬಾಧಕಗಳ ಕುರಿತು ಚರ್ಚಿಸಲು ಕರೆದಿರುವ ಮೂರು ದಿನಗಳ ವಿಶೇಷ ಅಧಿವೇಶನದಲ್ಲಿ ಮೊದಲ ದಿನವಾದ ಸೋಮವಾರ ಸುದೀರ್ಘ ಚರ್ಚೆ ನಡೆಸಲಾಯಿತು.

ಆಡಳಿತ ಹಾಗು ವಿಪಕ್ಷಗಳ ಶಾಸಕರು ದಿನವಿಡೀ ವರದಿಯಿಂದ ರಾಜ್ಯಕ್ಕೆ ಆಗುವ ತೊಂದರೆ ಬಗ್ಗೆ ವಿಸ್ತಾರವಾಗಿ ಮಾತನಾಡಿದರು. ಬಾಧಿತ ಪ್ರದೇಶಗಳಲ್ಲಿ ಮೂರು ದಿನ ಸ್ಥಳೀಯರೊಂದಿಗೆ ಸಭೆ ನಡೆಸಿರುವ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ವಿಷಯ ಪ್ರಸ್ತಾಪಿಸಿ, ಈ ವಿಷಯದಲ್ಲಿ ರಾಜಕಾರಣ ಮಾಡುವ ಅಗತ್ಯವಿಲ್ಲ. ನಾವೂ ರಾಜಕಾರಣ ಮಾಡುವುದಿಲ್ಲವೆಂದರು. ಮಲೆನಾಡು ಹಾಗು ಪಶ್ಚಿಮ ಘಟ್ಟ ವ್ಯಾಪ್ತಿಯ ರೈತರು ಮತ್ತು ಸಾರ್ವಜನಿಕರಿಗೆ ತೊಂದರೆಯಾಗದಂತೆ ನೋಡಿಕೊಳ್ಳುವುದು ನಮ್ಮ ಆದ್ಯತೆ. ವಿಪಕ್ಷಗಳು ಸೂಕ್ತ ಸಲಹೆಗಳನ್ನು ನೀಡಲಿ, ಎಲ್ಲರೂ ಸೇರಿ ರಾಜ್ಯದ ಹಿತದೃಷ್ಟಿಯಿಂದ ಸರ್ವಪಕ್ಷ ನಿಯೋಗ ಕೊಂಡೊಯ್ಯೋಣವೆಂದರು.

ಡಿ.ಕೆ.ಶಿ.-ವಿಜಯೇಂದ್ರ ವಾಕ್ಸಮರ

ಕಸ್ತೂರಿ ರಂಗನ್ ವರದಿ ವಿಚಾರದಲ್ಲಿ ರಾಜ್ಯದ ಸರ್ಕಾರ ರಾಜಕೀಯ ಮಾಡುತ್ತಿದೆ ಎಂಬ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆರೋಪಕ್ಕೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕೆಂಡಾಮಂಡಲರಾದರು. ಈ ವೇಳೆ ಇಬ್ಬರ ನಡುವೆ ಮಾತಿನ ಸಮರ ನಡೆಯಿತು. ಕಸ್ತೂರಿ ರಂಗನ್ ವರದಿ ವಿಚಾರದಲ್ಲಿ ಸಚಿವರು, ಶಾಸಕರು ರಾಜಕಾರಣ ಮಾಡುತ್ತಿದ್ದಾರೆ. ಜನರನ್ನು ಬೀದಿಗೆ ತರುವ ಕೆಲಸ ಮಾಡುತ್ತಿದ್ದಾರೆಂದು ವಿಜಯೇಂದ್ರ ಆರೋಪಿಸಿದರು. ಅದಕ್ಕೆ ತಿರುಗೇಟು ನೀಡಿದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, ಈ ವರೆಗೆ ಯಾರೂ ನಿಮ್ಮಂತೆ ಆಡಳಿತ ಪಕ್ಷದವರು ರಾಜಕೀಯ ಮಾಡ್ತಿದ್ದಾರೆಂದು ಹೇಳಲಿಲ್ಲ. ಯಾರು ಯಾರನ್ನೂ ಎತ್ತಿ ಕಟ್ಟಿಲ್ಲ. ಈಗ ನೀವೇ ಎತ್ತಿ ಕಟ್ಟುತ್ತಿದ್ದೀರಿ, ರಾಜಕಾರಣ ಮಾಡುತ್ತಿದ್ದೀರಿ ಎಂದು ಹರಿಹಾಯ್ದರು.

ಸರ್ಕಾರಕ್ಕೆ ಆರ್.ಅಶೋಕ್ ಸಲಹೆ

ವಿಪಕ್ಷ ನಾಯಕ ಆರ್.ಅಶೋಕ್ ಅವರು ಮಾತನಾಡಿ, ಕೇರಳ ರಾಜ್ಯದ ಮಾದರಿಯಲ್ಲಿ ನಮ್ಮ ರಾಜ್ಯದಲ್ಲೂ ಭೌತಿಕ ಸರ್ವೆ ನಡೆಸಿ ನೈಜ ವರದಿ ಸಿದ್ಧಪಡಿಸಬೇಕು. ಕಸ್ತೂರಿ ರಂಗನ್ ವರದಿ ಜಾರಿಯನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಬಲವಾದ ಕಾನೂನು ಹೋರಾಟ ನಡೆಸಲು ತಜ್ಞ ವಕೀಲರ ತಂಡವನ್ನು ರಚಿಸಬೇಕು ಮತ್ತು ಕೇಂದ್ರ ಸರ್ಕಾರದ 7ನೇ ಅಧಿ ಸೂಚನೆ ತಿರಸ್ಕರಿಸಲು ಕೇಂದ್ರದ ಬಳಿಗೆ ಸರ್ವ ಪಕ್ಷ ನಿಯೋಗ ತೆರಳಲು ವಿಪಕ್ಷಗಳು ಸಿದ್ಧವಿರುವುದಾಗಿ ತಿಳಿಸಿದರು.

ಕಸ್ತೂರಿ ರಂಗನ್ ವರದಿ ಅನ್ವಯ ರಾಜ್ಯದ ಹತ್ತು ಜಿಲ್ಲೆಗಳ 1,500ಕ್ಕೂ ಹೆಚ್ಚು ಗ್ರಾಮ ಮತ್ತು 20,668 ಚದರ ಕಿ.ಮೀ.ಗೂ ಹೆಚ್ಚಿನ ಭೂಪ್ರದೇಶ ಪರಿಸರ ಸೂಕ್ಷ್ಮ ವಲಯದ ವ್ಯಾಪ್ತಿಗೆ ಬರಲಿದೆ. ಅದರಿಂದ ಆ ಭಾಗದಲ್ಲಿ ಕೃಷಿ ಚಟುವಟಿಕೆಗಳು, ರಸ್ತೆ, ವಿದ್ಯುತ್‌ನಂತಹ ಮೂಲಭೂತ ಅಭಿವೃದ್ಧಿ ಕಾಮಗಾರಿಗಳು ಹಾಗು ಸಾರ್ವಜನಿಕರ ದೈನಂದಿನ ಜೀವನದ ಮೇಲೆ ಭಾರೀ ಹೊಡೆತ ಬೀಳಲಿದೆ ಎಂದರು.

ಪಶ್ಚಿಮ ಘಟ್ಟದ ಸಂಪೂರ್ಣ ಪ್ರದೇಶವನ್ನು ಒಂದೇ ನಿಯಮದಡಿ ತರುವ ಬದಲು, ದಟ್ಟ ಅರಣ್ಯ ಪ್ರದೇಶಗಳಿಗೆ ಮಾತ್ರ ಕಠಿಣ ಪರಿಸರ ಸಂರಕ್ಷಣಾ ಕ್ರಮ ರೂಪಿಸಬೇಕು. ಈ ಕುರಿತು ರಾಜ್ಯ ಸರ್ಕಾರವೇ ತಜ್ಞರ ಸಮಿತಿ ರಚಿಸಿ ಸಮಗ್ರ ಅಧ್ಯಯನ ನಡೆಸಿ ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಬೇಕೆಂದು ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಅವರು ಒತ್ತಾಯಿಸಿದರು.

ಪರಿಸರವಾದಿಗಳ ಹೋರಾಟದ ಹಿನ್ನಲೆಯಲ್ಲಿ ಮಾಧವ್ ಗಾಡ್ಗಿಳ್ ಹಾಗು ಕಸ್ತೂರಿ ರಂಗನ್ ವರದಿಗಳು ರೂಪುಗೊಂಡಿವೆ. ಗುಜರಾತ್‌ನಿಂದ ಕೇರಳದವರೆಗೆ ಪಶ್ಚಿಮಘಟ್ಟ ವ್ಯಾಪಿಸಿದ್ದು, ವರದಿಗಳ ಪರಿಣಾಮ ಈ ವ್ಯಾಪ್ತಿಯ ಎಲ್ಲಾ ರಾಜ್ಯಗಳ ಮೇಲೂ ಬೀರಲಿದೆ. ಕರ್ನಾಟಕದ ಉತ್ತರ ಕನ್ನಡ, ಹಾಸನ, ಉಡುಪಿ ಹಾಗು ಶಿವಮೊಗ್ಗಾ ಜಿಲ್ಲೆಗಳ ಹಲವು ಗ್ರಾಮಗಳಿಗೆ ವರದಿಯಿಂದ ಆತಂಕ ಎದುರಾಗಿದೆ. ಪಶ್ಚಿಮ ಘಟ್ಟದ ಪರಿಸರ ಸಂರಕ್ಷಣೆಯ ಜೊತೆಗೆ ಅಲ್ಲಿನ ಜನರ ಬದುಕು ಮುಖ್ಯ. ಕಸ್ತೂರಿ ರಂಗನ್ ವರದಿಯ ಉಪಗ್ರಹ ಆಧಾರಿತ ಸಮೀಕ್ಷೆಯನ್ನು ಒಪ್ಪಲು ಸಾಧ್ಯವಿಲ್ಲ. ಸ್ಯಾಟ್‌ಲೈಟ್‌ನಲ್ಲಿ ಹಸಿರು ಕಾಣುತ್ತದೆಂದ ಮಾತ್ರಕ್ಕೆ ಅದು ಸಂಪೂರ್ಣ ಕಾಡು ಎಂದು ಹೇಳಲು ಸಾಧ್ಯವಿಲ್ಲ. ಸ್ಥಳೀಯ ಪರಿಸ್ಥಿತಿ, ಜನಜೀವನ ಹಾಗು ಭೌಗೋಳಿಕ ವಾಸ್ತವಾಂಶಗಳನ್ನು ಪರಿಗಣಿಸಬೇಕೆಂದರು.

ಸಚಿವ ಶಿವಲಿಂಗೇಗೌಡ ವಿರುದ್ಧ ರಾಜ್ಯಪಾಲ, ಲೋಕಾಯುಕ್ತಕ್ಕೆ ದೂರು

- ಪ್ರಜೋದಯ ವರದಿ

ಬೆಂಗಳೂರು: ಸಕಲೇಶಪುರದಲ್ಲಿ ಇತ್ತೀಚೆಗೆ ನಡೆದ ಪ್ರಜಾಸೇವೆ ಆಂದೋಲನ ಸಭೆಯಲ್ಲಿ ಅಧಿಕಾರಿಗಳಿಗೆ ಗೌರವಯುತವಾಗಿ ಕೊಡುವುದು ನಿಮ್ಮ ಧರ್ಮವೆಂಬ ಸಚಿವ ಕೆ.ಎಂ. ಶಿವಲಿಂಗೇಗೌಡ ಅವರ ವಿವಾದಾತ್ಮಕ ಹೇಳಿಕೆ ವಿಚಾರವೀಗ ರಾಜ್ಯಪಾಲರ ಅಂಗಳ ತಲುಪಿದೆ.

ಭ್ರಷ್ಟಾಚಾರಕ್ಕೆ ಉತ್ತೇಜನದ ಆರೋಪದ ಹಿನ್ನಲೆ ಅಬಕಾರಿ ಹಾಗು ಹಾಸನ ಜಿಲ್ಲಾ ಉಸ್ತುವಾರಿ ಸಚಿವ ಶಿವಲಿಂಗೇಗೌಡ ವಿರುದ್ಧ ಸಾಮಾಜಿಕ ಕಾರ್ಯಕರ್ತ ದಿನೇಶ್ ಕಲ್ಲಹಳ್ಳಿ ರಾಜ್ಯಪಾಲರಿಗೆ ಇಮೇಲ್ ಮೂಲಕ ದೂರು ಸಲ್ಲಿಸಿದ್ದಾರೆ. ವಕೀಲ ಗೋಪಾಲ್ ಅವರು ಲೋಕಾಯುಕ್ತ ಡಿವೈಎಸ್‌ಪಿ ಸುರೇಶ್ ಅವರಿಗೆ ದೂರು ನೀಡಿದ್ದಾರೆ.

ಸಚಿವರ ಈ ಹೇಳಿಕೆಯು ಭ್ರಷ್ಟಾಚಾರಕ್ಕೆ ಪ್ರೋತ್ಸಾಹಿಸಿದಂತಿದೆ. ಸಂವಿಧಾನದ ಪರಿಚ್ಛೇದ 14 (ಸಮಾನತೆಯ ಹಕ್ಕು) ಹಾಗು ಭ್ರಷ್ಟಾಚಾರ ತಡೆ ಕಾಯ್ದೆ 1988ರ (Prevention of Corruption Act) ಸೆಕ್ಷನ್ 7, 8 ಮತ್ತು 12ರ (ಲಂಚ ಸ್ವೀಕಾರ, ನೀಡಿಕೆ ಹಾಗು ಪ್ರಚೋದನೆ) ಅಡಿಯಲ್ಲಿ ಇದು ಗಂಭೀರ ಪರಿಶೀಲನೆಗೆ ಒಳಪಡಬೇಕೆಂದು ಆಗ್ರಹಿಸಿ, ಸಚಿವ ಸ್ಥಾನದಿಂದ ಶಿವಲಿಂಗೇಗೌಡ ಅವರನ್ನು ವಜಾಗೊಳಿಸುವಂತೆಯೂ ಮನವಿ ಮಾಡಿದ್ದಾರೆ.



ದೂರು ಸಂಬಂಧ ಪ್ರತಿಕ್ರಿಯಿಸಿರುವ ಸಚಿವ ಶಿವಲಿಂಗೇಗೌಡ ಅವರು, ನಾನೇನು ನೇರವಾಗಿ ಹಣ ಕೋಡೋಕೆ ಹೇಳಿಲ್ಲ. ಅಧಿಕಾರಿಗಳ ಜೊತೆ ಗೌರವಯುತವಾಗಿ ನಡೆದುಕೊಳ್ಳಿ ಎಂದಿದ್ದೇನೆ ಅಷ್ಟೇ. ಏಕೆ ಅದನ್ನು ದೊಡ್ಡ ವಿಚಾರ ಮಾಡುತ್ತಿದ್ದಾರೆ. ರೈತರ ಸಮಸ್ಯೆ ಬಗ್ಗೆ ಯಾರು ಕೇಳ್ತಾರೆ, ಅದರ ಬಗ್ಗೆ ಯಾರು ಬರೆಯಲ್ಲ, ರಾಜ್ಯಪಾಲರಿಗೆ ಹೇಳ್ತಾರಾ, ಅಲ್ಲಿ ಅಧಿಕಾರಿಗಳು ಮತ್ತು ರೈತರ ನಡುವೆ ಘರ್ಷಣೆ ನಡೀತಾ ಇತ್ತು. ನಮ್ಮ ಮೇಲೆ ಗಲಾಟೆ ಮಾಡುತ್ತಾರೆ ಅಂತ ಅಧಿಕಾರಿ ಹೇಳಿದ್ದ. ಹೀಗಾಗಿ ನಿಮ್ಮ ಕೆಲಸ ಆದ ಮೇಲೆ ಸರಿಯಾಗಿ ಮಾತಾಡೋದು, ಸರಿಯಾಗಿ ಗೌರವ ನೀಡೋದು ಮಾಡಿ ಎಂದಿರೋದಾಗಿ ಅವರು ಸ್ಪಷ್ಟಪಡಿಸಿದ್ದಾರೆ.

ವಿವಾದ ಏನು ?

ಸಕಲೇಶಪುರ ತಹಶೀಲ್ದಾರ್ ಕಚೇರಿ ಆವರಣದಲ್ಲಿ ನಡೆದ ಪ್ರಜಾಸೇವೆ ಆಂದೋಲನ ಸಭೆಯಲ್ಲಿ ಉಸ್ತುವಾರಿ ಸಚಿವ ಶಿವಲಿಂಗೇಗೌಡ ಅವರು ಕೆಲಸ ಮಾಡಿಕೊಟ್ಟ ಅಧಿಕಾರಿಗಳಿಗೆ ಗೌರವಯುತವಾಗಿ ಕೊಡುವುದು ಧರ್ಮ. ಬಲತ್ಕಾರವಾಗಿ ದುಡ್ಡು ಕಿತ್ತುಕೊಳ್ಳೋದು ಸರಿಯಲ್ಲವೆಂದು ಹೇಳಿದ್ದರು. ಸಚಿವರ ಮಾತಿಗೆ ಸ್ಥಳದಲ್ಲಿದ್ದ ಜನರು ಕೆರಳಿದ್ದು, ಗೌರವಯುತವಾಗಿ ಏಕೆ ಕೊಡಬೇಕು, ಅವರಿಗೆ ಸಂಬಳ ಕೊಡಲ್ವಾ ಎಂದು ಪ್ರಶ್ನಿಸಿದ್ದರು. ಈ ವಿಡಿಯೋ ಭಾರೀ ವೈರಲ್ ಆಗಿದ್ದು, ಸಚಿವರ ಹೇಳಿಕೆ ಸಾಮಾಜಿಕ ಜಾಲತಾಣಗಳಲ್ಲಿ ಟೀಕೆಗೆ ಗ್ರಾಸವಾಗಿತ್ತು.

ಹಾಸನದಲ್ಲೂ ನಾಟಕ ತರಬೇತಿ ಸಂಸ್ಥೆ ಸ್ಥಾಪನೆಯಾಗಲಿ

ರಂಗಸಿರಿಗೆ ನಾಟಕ ಅಕಾಡೆಮಿ ಪ್ರಶಸ್ತಿ ಅರ್ಪಣೆ | ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು

- ಪ್ರಜೋದಯ ವರದಿ

ಹಾಸನ: ಹಾಸನ ಎಂದರೆ ಕೇವಲ ರಾಜಕಾರಣ ಎಂಬ ಮಾತಿದೆ. ರಂಗಾಯಣ, ನೀನಾಸಂನಂತಹ ಸಂಸ್ಥೆಗಳು ಇಲ್ಲಿ ಹುಟ್ಟಬೇಕು. ರಾಜ್ಯ ಸರ್ಕಾರ ನೀಡಿರುವ ನಾಟಕ ಅಕಾಡೆಮಿ ಪ್ರಶಸ್ತಿಯನ್ನು ಇಲ್ಲಿನ ರಂಗಸಿರಿಗೆ ಅರ್ಪಿಸುತ್ತೇನೆಂದು ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಹಾಗು ರಂಗಭೂಮಿ ಕಲಾವಿದ ಶಿವಾನಂದ ತಗಡೂರು ಅವರು ಹೇಳಿದರು.

ನಾಟಕ ಅಕಾಡೆಮಿ ಪ್ರಶಸ್ತಿಗೆ ಭಾಜನರಾದ ಹಿನ್ನಲೆಯಲ್ಲಿ ಸೋಮವಾರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ವಂದಿತಾ ಶರ್ಮಾ, ಮಹೇಂದ್ರ ಜೈನ್ ಜಿಲ್ಲಾಧಿಕಾರಿಗಳಾಗಿದ್ದ ಸಂದರ್ಭದಲ್ಲಿ ಅಕ್ಷರ ಆಂದೋಲನ ಜಿಲ್ಲಾ ಸಂಯೋಜಕರಾಗಿ ಕಾರ್ಯನಿರ್ವಹಿಸಿದ್ದಾಗಿ ತಿಳಿಸಿದರು.

ಹೆಚ್.ಆರ್.ಸ್ವಾಮಿ, ಸಣ್ಣೇಗೌಡ, ಸೌಭಾಗ್ಯ, ಕೊಟ್ಟೂರು ಶ್ರೀನಿವಾಸ್, ಸೇರಿ ಹಲವರೊಂದಿಗೆ ಸೇರಿ ಪ್ರತಿ ತಾಲ್ಲೂಕಿನಲ್ಲಿ ಸಂಘಟನೆ ರೂಪಿಸಿ, ಪಂಚಾಯಿತಿ ವ್ಯಾಪ್ತಿಯಲ್ಲಿ ಕೆಲಸ ಮಾಡಿದ್ದೇವೆ. ಸುಮಾರು 850 ಹಳ್ಳಿಗಳನ್ನು ಸುತ್ತಿದ್ದೇವೆ. ಹಾಸನ ಜಿಲ್ಲೆಯಲ್ಲಿ ನಡೆದ ಅಕ್ಷರ ಆಂದೋಲನ ಸಾಕಷ್ಟು ಪರಿಣಾಮ ಬೀರಿತ್ತು ಎಂದರು.

ರಂಗಭೂಮಿ ತಮ್ಮ ಬದುಕಿಗೆ ಸಾಕಷ್ಟು ಕೊಡುಗೆ ನೀಡಿದೆ. ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಂದ ನಿರಂತರವಾಗಿ ನಾಟಕಗಳನ್ನು ಪ್ರದರ್ಶಿಸಲಾಗುತ್ತಿತ್ತು. ಚಿಣ್ಣರ ಮೇಳ ಸೇರಿ ಹಲವು ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಲಾಯಿತು. ರಂಗಾಯಣದ ತಂಡವನ್ನು ಹಾಸನಕ್ಕೆ ಕರೆಸಿ ಕಾರ್ಯಕ್ರಮ ನಡೆಸಿದ ಅನುಭವ ಹಂಚಿಕೊಂಡರು.

ರಥಮುಸಲ, ಸಂಗ್ಯಾ ಬಾಳ್ಯಾ ಸೇರಿ ಹಲವು ನಾಟಕಗಳು ಜನಪ್ರಿಯವಾಗಿದ್ದವು. ಬಾಗೂರುನವಿಲೆ ಹೋರಾಟದ ಕುರಿತು ನಾಟಕವನ್ನೂ ಪ್ರದರ್ಶಿಸಲಾಗಿತ್ತು. ರಂಗಭೂಮಿಯೊಂದಿಗಿನ ನಂಟು ಒಂದೇ ದಿನದಲ್ಲಿ ರೂಪುಗೊಳ್ಳುವುದಿಲ್ಲ. ನಿರಂತರ ಪರಿಶ್ರಮದಿಂದ ಅದು ಬೆಳೆಸಿಕೊಳ್ಳಬೇಕು ಎಂದರು.

ಬಾಗೂರು-ನವಿಲೆ ಹೋರಾಟ ನೆನಪು

ಅಧ್ಯಕ್ಷತೆ ವಹಿಸಿದ್ದ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಜೆ.ಆರ್.ಕೆಂಚೇಗೌಡ ಅವರು ಮಾತನಾಡಿ, 1985ರಿಂದ ಶಿವಾನಂದ ತಗಡೂರು ಅವರ ಪರಿಚಯವಿದೆ. ಬಾಗೂರು ನವಿಲೆ ಯೋಜನೆಯ ಸುರಂಗ ಕಾಮಗಾರಿಯಿಂದ ಉಂಟಾಗಬಹುದಾದ ಸಮಸ್ಯೆಗಳ ಬಗ್ಗೆ ನಿರಂತರವಾಗಿ ವರದಿ ಮಾಡುತ್ತಿದ್ದರು. ಸುಮಾರು 13 ಕಿ.ಮೀ. ಉದ್ದದ ಸುರಂಗ ಕಾಮಗಾರಿಯ ಸಂದರ್ಭದಲ್ಲಿ ಬರಪೀಡಿತ ಪ್ರದೇಶದ ಜನರ ಸಮಸ್ಯೆಗಳ ಬಗ್ಗೆ ಗಮನ ಸೆಳೆಯಲು ಅವರು ಪ್ರಮುಖ ಪಾತ್ರ ವಹಿಸಿದ್ದರು ಎಂದರು.

ಸುರಂಗ ಕಾಮಗಾರಿಯಿಂದಾಗಬಹುದಾದ ದುಷ್ಪರಿಣಾಮಗಳ ಕುರಿತು ಶಿವಾನಂದ ಅವರು ಪತ್ರಿಕೆಗಳಲ್ಲಿ ವರದಿ ಮಾಡಿದರು. ಬಳಿಕ ಹೋರಾಟ ತೀವ್ರಗೊಂಡು ಲಾಠಿ ಪ್ರಹಾರವೂ ನಡೆದಿತ್ತು. ಈ ಹೋರಾಟದಿಂದ ಸರ್ಕಾರಕ್ಕೂ ಸಮಸ್ಯೆಯ ಅರಿವಾಯಿತು. ಆ ಸಂದರ್ಭದಲ್ಲಿ ಶಿವಾನಂದ ತಗಡೂರು ಅವರಿಗೆ ಹೋರಾಟದ ಮೂಲಕ ದೊಡ್ಡ ವೇದಿಕೆ ದೊರೆಯಿತು ಎಂದರು.

1994-95ರ ಅವಧಿಯಲ್ಲಿ ಕನ್ನಡಪರ ಹಾಗು ರೈತ ಸಂಘಟನೆಗಳು ಬಲಿಷ್ಠವಾಗಿದ್ದವು. ಸರ್ಕಾರವನ್ನೇ ಬದಲಿ

» ನಾಲ್ಕನೇ ಪುಟದಲ್ಲಿ

ಸರ್ಕಾರ ದಿವಾಳಿಯಾಗಿದ್ದರೆ 10 ಎಕರೆ ಜಮೀನು ಕೊಡುವೆ

ರಾಜ್ಯ ಸರ್ಕಾರಕ್ಕೆ ರೇವಣ್ಣ ಲೇವಡಿ | ಸಾಲ ಮನ್ನಾ ಹೇಳಿಕೆಗೆ ತಿರುಗೇಟು

- ಪ್ರಜೋದಯ ವರದಿ

ಹಾಸನ: ರಾಜ್ಯ ಸರ್ಕಾರ ಆರ್ಥಿಕವಾಗಿ ದಿವಾಳಿಯಾಗಿದೆ ಎಂದು ಬಹಿರಂಗಪಡಿಸಿದರೆ ನೆಲಮಂಗಲದ ಬಳಿ ನನ್ನ ಮಗನ ಹೆಸರಿನಲ್ಲಿರುವ 10 ಎಕರೆ ಜಮೀನನ್ನು ರಾಜ್ಯದ ಜನರ ಹಿತದೃಷ್ಟಿಯಿಂದ ಬಿಟ್ಟು ಕೊಡುತ್ತೇನೆಂದು ಮಾಜಿ ಸಚಿವ ಹೆಚ್.ಡಿ. ರೇವಣ್ಣ ಅವರು ಲೇವಡಿ ಮಾಡಿದರು.

ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರ ಸಹೋದರ (ರೇವಣ್ಣ) ಆಸ್ತಿಯಲ್ಲಿ ಪಾಲು ನೀಡಿದರೆ ಸಾಲ ಮನ್ನಾಗೆ ನೆರವಾಗುತ್ತದೆಂಬ ಸಚಿವ ಹೆಚ್.ಸಿ.ಬಾಲಕೃಷ್ಣ ಅವರ ಹೇಳಿಕೆಗೆ ಸೋಮವಾರ ಸುದ್ದಿಗಾರರೊಂದಿಗೆ ಪ್ರತಿಕ್ರಿಯಿಸಿದ ಅವರು, ಸರ್ಕಾರ ತನ್ನ ಬಳಿ ದುಡ್ಡಿಲ್ಲವೆಂದು ಬಹಿರಂಗಪಡಿಸಬೇಕು. ನಮ್ಮದು ನೆಲಮಂಗಲ ಬಳಿ ಬಿಟ್ಟರೆ ಬೇರೆ ಎಲ್ಲೂ ಆಸ್ತಿ ಇಲ್ಲ, ಜನರಿಗಾಗಿ ಆಸ್ತಿ ಬಿಟ್ಟುಕೊಡುತ್ತೇನೆ. ನೆಲಮಂಗಲ ಬಿಟ್ಟು ಬೇರೆ ಕಡೆ ಆಸ್ತಿ ಇರುವುದನ್ನು ಗೊತ್ತುಮಾಡಿದರೆ ಅದನ್ನು ದಾನವಾಗಿ ಸರ್ಕಾರಕ್ಕೆ ನೀಡುತ್ತೇನೆಂದು ಟೀಕಿಸಿದರು.

ಹೊಲ ಮನೆ ಬರೆಸಿಕೊಳ್ಳಬೇಕಾ?

ಜಿಲ್ಲಾಧಿಕಾರಿ ಅವರಿಗೆ ಕಿರುಕುಳ ನೀಡಿ ನಾನು ಹೊಲ ಮನೆ ಬರೆಸಿಕೊಳ್ಳಬೇಕಾ. ಅವರಿಗೆ ಯಾರು ಕಿರುಕುಳ ನೀಡುತ್ತಿದ್ದಾರೆಂದು ಗೊತ್ತಿಲ್ಲ. ಕಳೆದ 2 ವರ್ಷಗಳಿಂದ ನಾನು ಜಿಲ್ಲಾಧಿಕಾರಿ ಕಚೇರಿಗೆ ಹೋಗಿಲ್ಲ. ಕಚೇರಿಗೆ ಯಾರು ಕರೆ ಮಾಡಿ ಕುಮ್ಮಕ್ಕು ಕೊಡುತ್ತಿದ್ದಾರೆಂದು ಗೊತ್ತಿಲ್ಲ. ಸನ್ನಿವೇಶ ಸರಿಇಲ್ಲದಿರುವುದರಿಂದ ನಾನು ಏನೂ ಮಾತನಾಡುತ್ತಿಲ್ಲ. ಅಧಿಕಾರಿಗಳಿಗೆ ಹೆದರಿಸುವ ಅವಶ್ಯಕತೆ ನನಗಿಲ್ಲ. ಜಿಲ್ಲೆಯ ಅಭಿವೃದ್ಧಿಗೆ ಸಂಬಂಧಿಸಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ಪತ್ರ ಬರೆಯುತ್ತೇನೆ ಹೊರತು ಇಲ್ಲಿನ ಅಧಿಕಾರಿಗಳನ್ನು ಸಂಪರ್ಕಿಸುವುದಿಲ್ಲ. ಸರ್ಕಾರದ ಮಟ್ಟದಲ್ಲೂ ಕೆಲಸ ಆಗದಿದ್ದರೆ ನ್ಯಾಯಾಲಯ ಮೂಲಕ ಹೋರಾಟ ಮಾಡುತ್ತೇನೆಂದರು.

ಕೆಲಸ ಮಾಡಿಕೊಟ್ಟ ಅಧಿಕಾರಿಗೆ ಗೌರವಯುತವಾಗಿ ಹಣ ನೀಡಿ ಎಂಬ ಜಿಲ್ಲಾ ಉಸ್ತುವಾರಿ ಸಚಿವರ ಹೇಳಿಕೆಯಲ್ಲಿ ಸತ್ಯವಿದೆ. ಇಂದು ಹಲವು ಇಲಾಖೆಯಲ್ಲಿ ಲಂಚ ನೀಡದೆ ಕೆಲಸ ಮಾಡಿಸಿಕೊಳ್ಳಲು ಸಾಧ್ಯವಾಗದ ಪರಿಸ್ಥಿತಿ ಇದೆ. ಹೀಗಾಗಿ ಕೈಲಾದಷ್ಟು ಕೊಟ್ಟು ಕೆಲಸ ಮಾಡಿಸಿಕೊಳ್ಳಿ ಎಂದು ಹೇಳುವ ಮೂಲಕ ಉಸ್ತುವಾರಿ ಸಚಿವರ ಆದೇಶವನ್ನೇ ಪಾಲಿಸುವಂತಾಗಿದೆ ಎಂದು ವ್ಯಂಗ್ಯವಾಡಿದರು.

ತಕ್ಷಣ ಬರ ಪರಿಹಾರ ಹಣ ನೀಡಿ

ಜಿಲ್ಲೆಯ ಏಳು ತಾಲ್ಲೂಕುಗಳನ್ನು ಬರಪೀಡಿತ ಎಂದು ಸರ್ಕಾರ ಘೋಷಿಸಿದೆ. ಆದರೆ ಇದುವರೆಗೆ ಪರಿಹಾರ ಹಣ ಬಿಡುಗಡೆಯಾಗಿಲ್ಲ. ಬರದಿಂದ ಸಂಕಷ್ಟದಲ್ಲಿರುವ ರೈತರು, ಜನರು ಹಾಗು ಜಾನುವಾರುಗಳ ನೆರವಿಗೆ ಸರ್ಕಾರ ಧಾವಿಸಬೇಕು. ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 4ರಿಂದ 5 ಕೋ. ರೂ. ಪರಿಹಾರ ಬಿಡುಗಡೆ ಮಾಡಬೇಕೆಂದು ರೇವಣ್ಣ ಅವರು ಆಗ್ರಹಿಸಿದರು.

ಕಸ್ತೂರಿ ರಂಗನ್ ವರದಿಗೆ ವಿರೋಧ

ಜಿಲ್ಲೆ ಸೇರಿ ಮಲೆನಾಡು ಭಾಗದಲ್ಲಿ ಕಸ್ತೂರಿ ರಂಗನ್ ವರದಿ ಜಾರಿಗೆ ನಮ್ಮ ವಿರೋಧವಿದೆ. ವರದಿ ಜಾರಿ ಕುರಿತು ಚರ್ಚೆ ನಡೆಸುವ ಬದಲು ಸರ್ಕಾರವೇ ಒಂದು ಸಾಲಿನ ನಿರ್ಣಯ ಕೈಗೊಂಡು ವಿರೋಧ ವ್ಯಕ್ತಪಡಿಸಬೇಕು. ಸರ್ವಪಕ್ಷ ನಿಯೋಗ ತೆರಳಿದರೆ ತಾವೂ ಭಾಗವಹಿಸಲು ಸಿದ್ಧ. ಈ ವಿಚಾರದಲ್ಲಿ ರಾಜಕೀಯ ಮಾಡುವುದು ಬೇಡ. ತಮ್ಮ ಮಿತ್ರ ಪಕ್ಷ ಬಿಜೆಪಿಯೂ ಸೇರಿ ಎಲ್ಲರೂ ವರದಿ ಜಾರಿಗೆ ವಿರೋಧವಾಗಿದ್ದಾರೆಂದು ಹೇಳಿದರು.

ಜಿಲ್ಲೆಯ ಕೆರೆ-ಕಟ್ಟೆಗಳಿಗೆ ಸಮರ್ಪಕವಾಗಿ ನೀರು ಹರಿಸುವ ಮೂಲಕ ಜನ-ಜಾನುವಾರುಗಳನ್ನು ಉಳಿಸಬೇಕು. ಹೇಮಾವತಿ ಅಚ್ಚುಕಟ್ಟು

» ನಾಲ್ಕನೇ ಪುಟದಲ್ಲಿ

ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿ ಆತ್ಮಹತ್ಯೆ

- ಪ್ರಜೋದಯ ವರದಿ

ಅರಕಲಗೂಡು: ಪಟ್ಟಣದ ಬಿಜಿಎಸ್ ಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ವ್ಯಾಸಂಗ ಮಾಡುತ್ತಿದ್ದ 16 ವರ್ಷದ ವಿದ್ಯಾರ್ಥಿಯೊಬ್ಬ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ವಿನಾಯಕ ನಗರದಲ್ಲಿ ನಡೆದಿದೆ.

ಸುಭಾಷ್ ಚಂದ್ರ ಬೋಸ್ (16) ಮೃತ ವಿದ್ಯಾರ್ಥಿ. ಈತ ವಿನಾಯಕ ನಗರದ ಬಾಡಿಗೆ ಮನೆಯಲ್ಲಿ ಸಂಬಂಧಿಕರೊಂದಿಗೆ ವಾಸವಿದ್ದ. ಇದೇ ಮನೆಯಲ್ಲಿ ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ವಿದ್ಯಾರ್ಥಿಯ ಸಾವಿಗೆ ನಿಖರವಾದ ಕಾರಣ ತಿಳಿದುಬಂದಿಲ್ಲ. ಘಟನೆಗೆ ಸಂಬಂಧಿಸಿದಂತೆ ಸೋಮವಾರ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಕುರಿತು ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ನ.15-16 ರಂದು ಲಕ್ಷ್ಮಿ ವೆಂಕಟರಮಣಸ್ವಾಮಿ ರಾಜಗೋಪುರ ಉದ್ಘಾಟನೆ

- ಪ್ರಜೋದಯ ವರದಿ

ಅರಸೀಕೆರೆ : ತಾಲ್ಲೂಕಿನ ಮಾಲೇಕಲ್ಲು ಅಮರಗಿರಿ ತಿರುಪತಿಯ ಲಕ್ಷ್ಮಿ ವೆಂಕಟರಮಣ ಸ್ವಾಮಿ ದೇವಾಲಯದ ರಾಜಗೋಪುರವನ್ನು ನ.15 ಮತ್ತು 16 ರಂದು ಲೋಕಾರ್ಪಣೆ ಮಾಡಲಾಗುವುದೆಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ. ಶಿವಲಿಂಗೇಗೌಡ ಹೇಳಿದರು.

ದೇವಾಲಯದ ಅಭಿವೃದ್ಧಿ ಸಮಿತಿ ಗ್ರಾಮಸ್ಥರು ಹಾಗು ಭಕ್ತ ಸಮೂಹ ಒಳಗೊಂಡಂತೆ ಕರೆಯಲಾಗಿದ್ದ ಪೂರ್ವಭಾವಿ ಸಭೆಯಲ್ಲಿ ಮುಜರಾಯಿ ಇಲಾಖೆಯ ಅಧಿಕಾರಿಯೂ ಆದ ತಹಶೀಲ್ದಾರ್



ಸಂತೋಷ್ ಕುಮಾರ್ ಹಾಗು ನಗರ ಯೋಜನಾ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅರುಣ್ ಕುಮಾರ್ ಒಳಗೊಂಡಂತೆ ವಿವಿಧ ರಾಜಕೀಯ ಪಕ್ಷಗಳ ಮುಖಂಡರು ಮತ್ತು ಪ್ರಗತಿಪರ ಸಂಘಟನೆಗಳ ಪ್ರಮುಖರು ಸಭೆಯಲ್ಲಿ ಪಾಲ್ಗೊಂಡು ತಮ್ಮ ಅಭಿಪ್ರಾಯ ಹಂಚಿಕೊಂಡರು.

ಅಂತಿಮವಾಗಿ ಮಾತನಾಡಿದ ಸಚಿವರು, ರಾಜ್ಯದ ಪವಿತ್ರ ಧಾರ್ಮಿಕ ಯಾತ್ರಾ ಸ್ಥಳಗಳಲ್ಲಿ ಒಂದಾಗಿರುವ ಮಾಲೇಕಲ್ಲು ಅಮರಗಿರಿ ತಿರುಪತಿಯ ಲಕ್ಷ್ಮಿ ವೆಂಕಟರಮಣ ಸ್ವಾಮಿ ದೇವಾಲ

» ನಾಲ್ಕನೇ ಪುಟದಲ್ಲಿ

ನಾಲೆಗೆ ತಳ್ಳಿ ಪತ್ನಿ ಕೊಂದ ಪತಿ

- ಪ್ರಜೋದಯ ವರದಿ

ಚನ್ನರಾಯಪಟ್ಟಣ : ವರದಕ್ಷಿಣೆ, ಹೆತ್ತವರ ಕುಮ್ಮಕ್ಕಿನಿಂದ ಹೆಂಡತಿಯನ್ನು ನಾಲೆಗೆ ತಳ್ಳಿ ಕೊಲೆ ಮಾಡಿರುವ ಘಟನೆ ತಾಲ್ಲೂಕಿನ ಚಿಕ್ಕನಾಯಕನಹಳಿಯಲ್ಲಿ ನಡೆದಿದೆ.

ಬಾಗೂರು ಗ್ರಾಮದ ಕೃಷ್ಣಸ್ವಾಮಿ ಎಂಬುವವರ ಪುತ್ರಿ ಬಿ.ಕೆ.ಜಯಶೀಲಾ ಮೃತಪಟ್ಟಿದ್ದಾರೆ. 8 ತಿಂಗಳ ಹಿಂದೆ ಕುರುವಂಕ ಗ್ರಾಮದ ರಾಜೇಶ್ ಜೊತೆ ಮದುವೆ ಮಾಡಿಕೊಡಲಾಗಿತ್ತು. ಗರ್ಭಿಣಿ ಪತ್ನಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದ ರಾಜೇಶ್ ವಾಪಾಸ್ ಬರುವಾಗ ನಾಲೆಗೆ ತಳ್ಳಿದ್ದಾನೆ ಎನ್ನಲಾಗಿದೆ. ವಿವಾಹದ ವೇಳೆ 50 ಗ್ರಾಂ ಚಿನ್ನಾಭರಣ, 1 ಲ.ರೂ. ನೀಡಲಾ ಗಿತ್ತು. ಎರಡು ತಿಂಗಳು ಚೆನ್ನಾಗಿಯೇ ಇದ್ದ ಕುಟುಂಬದಲ್ಲಿ ಬಿರುಕು ಮೂಡಿ, ರಾಜೇಶ್ ಹಾಗು ಆತನ ತಂದೆ ದೊರೆಸ್ವಾಮಿ, ತಾಯಿ ವಿಜಯಲಕ್ಷ್ಮಿ ವರದಕ್ಷಿಣೆಗಾಗಿ ಪೀಡಿಸುತ್ತಿದ್ದರು. 150 ಗ್ರಾಂ ಚಿನ್ನಾಭರಣ ಕೊಡುವುದಾಗಿ ಹೇಳಿದ್ದರು. ಉಳಿದ ಆಭರಣ ತೆಗೆದುಕೊಂಡು ಬಾ ಎಂದು ಕಿರುಕುಳ ನೀಡುತ್ತಿದ್ದರು. ಇದೇ ವಿಚಾರವಾಗಿ ಹಿಂಸೆ ನೀಡುತ್ತಿದ್ದರೆಂದು ತಿಳಿದುಬಂದಿದೆ.

ಸೆ.19ರಂದು ಜಯಶೀಲಾ ತಮ್ಮ ತಂದೆ ಕೃಷ್ಣಸ್ವಾಮಿಗೆ ಕರೆ ಮಾಡಿ, ನಾನೀಗ ಮೂರು ತಿಂಗಳ ಗರ್ಭಿಣಿ. ತಪಾಸಣೆಗಾಗಿ ಆಸ್ಪತ್ರೆಗೆ ಕರೆದೊಯ್ಯುತ್ತಿಲ್ಲ, ವರದಕ್ಷಿಣೆ ನೀಡಿಲ್ಲವೆಂದು ಕಿರುಕುಳ ನೀಡುತ್ತಿದ್ದಾರೆಂದು ಹೇಳಿದ್ದಳು. ಕೃಷ್ಣಸ್ವಾಮಿ ನಾನೇ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತೇನೆ ಎಂದಾಗ ಬೇಡ ನೀವು ಬಂದರೆ ಗಲಾಟೆ ಮಾಡುತ್ತಾರೆಂದು ಹೇಳಿದ್ದಳು. ಸಾಕಷ್ಟು ಸಲ ಸತಾಯಿಸಿದ ಬಳಿಕ ರಾಜೇಶ್ ಪಟ್ಟಣದ ಮಮತೆ ಮಡಿಲು ಆಸ್ಪತ್ರೆಯಲ್ಲಿ ಚೆಕಪ್ ಮಾಡಿಸಿಕೊಂಡು ಗ್ರಾಮಕ್ಕೆ ಬರುವ ಮಾರ್ಗದಲ್ಲಿ ಚಿಕ್ಕನಾಯಕನಹಳ್ಳಿಯ ದೊಡ್ಡ ನಾಲೆಯ ಬಳಿ ಬೈಕ್ ನಿಲ್ಲಿಸಿ ಪತ್ನಿ ಜಯಶೀಲಾಳನ್ನು ನಾಲೆಗೆ ತಳ್ಳಿದ್ದಾನೆ. ವರದಕ್ಷಿಣೆ ಕಿರುಕುಳ ನೀಡಿ ಮಗಳನ್ನು ಹತ್ಯೆಗೈದ ರಾಜೇಶ್ ಹಾಗು ಆತನ ತಂದೆ-ತಾಯಿ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಕೃಷ್ಣಸ್ವಾಮಿ ಆಗ್ರಹಿಸಿದ್ದಾರೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸರ್ಕಾರದ ನಿರ್ಲಕ್ಷ್ಯದಿಂದ ಸಂಕಷ್ಟದಲ್ಲಿ ರೈತರು | ಮೂರು ದಿನದಿಂದ 17 ಕಿ.ಮೀ. ನಾಲೆ ಸ್ವಚ್ಛ

ಸ್ವಂತ ಖರ್ಚಿನಲ್ಲಿ ನಾಲೆ ಸ್ವಚ್ಛತೆಗೆ ಮುಂದಾದ ರೇವಣ್ಣ

- ಪ್ರಜೋದಯ ವರದಿ

ಹಾಸನ: ಮಳೆ ಕೊರತೆಯಿಂದ ಕೆರೆ- ಕಟ್ಟೆಗಳು ಬರಿದಾಗಿ ಜಾನುವಾರುಗಳ ಕುಡಿಯುವ ನೀರಿಗೆ ಪರಿತಪಿಸುವ ಸಂದಿಗ್ಧ ಪರಿಸ್ಥಿತಿಯನ್ನು ಗಂಭೀರವಾಗಿ ಪರಿಗಣಿಸಿರುವ ಮಾಜಿ ಸಚಿವ ಹೆಚ್.ಡಿ. ರೇವಣ್ಣ ಅವರು ನಾಲೆಗೆ ಹರಿಸುವ ಅಲ್ಪ ಸ್ವಲ್ಪ ನೀರು ಕೆರೆಗಳಿಗೆ ತಲುಪಲಿ ಎಂಬ ಉದ್ದೇಶದಿಂದ ಸ್ವಂತ ಖರ್ಚಿನಲ್ಲಿ ನಾಲೆಯಲ್ಲಿ ಬೆಳೆದಿರುವ ಗಿಡ-ಗಂಟಿ ತೆರವುಗೊಳಿಸುವ ಕಾರ್ಯಕ್ಕೆ ಮುಂದಾಗಿದ್ದಾರೆ.

ನಾಲೆಗಳಲ್ಲಿ ಗಿಡಗಂಟಿ, ಹೂಳು ತುಂಬಿಕೊಂಡಿರುವುದರಿಂದ ನೀರು ಸರಾಗವಾಗಿ ಹರಿಯುತ್ತಿಲ್ಲ. ಹೊಳೆನರಸೀಪುರ ತಾಲ್ಲೂಕಿನ ಶ್ರೀರಾಮದೇವರ ಕಟ್ಟೆಯಿಂದ ದಕ್ಷಿಣ ನಾಲೆಗೆ ನೀರು ಹರಿಸ ಲಾಗಿದ್ದು, ಸುಮಾರು 47 ಕಿ.ಮೀ. ಉದ್ದದ ನಾಲೆಯ ಬಹುತೇಕ ಭಾಗದಲ್ಲಿ ಗಿಡ-ಗಂಟಿ, ಮುಳ್ಳುಗಳು ಬೆಳೆದು ಹೂಳು ತುಂಬಿಕೊಂಡಿದೆ. ಅದರಿಂದ ಕಳೆದ ಎರಡು ವರ್ಷಗಳಿಂದ ನಾಲೆಗೆ ನೀರು ಹರಿಸಿದರೂ ತಟ್ಟೇಕೆರೆ, ಮೂಡಲ ಹಿಪ್ಪೆ, ಗೋದಿ ಮಲ್ಲೇನಹಳ್ಳಿ, ಜಕ್ಕವಳ್ಳಿ, ಜಕ್ಕವಳ್ಳಿ ಕೊಪ್ಪಲು ಹಾಗು ಲಕ್ಷ್ಮೀಪುರ ಗ್ರಾಮಗಳ ಕೆರೆಗಳಿಗೆ ಸಮರ್ಪಕವಾಗಿ ನೀರು ತಲುಪುತ್ತಿಲ್ಲ.

> **ಈ ವರ್ಷ ವಾಡಿಕೆಯಂತೆ ಮಳೆಯಾಗದೆ ಅನ್ನದಾತರು ಕಂಗಾಲಾಗಿದ್ದಾರೆ. ಜಾನುವಾರಗಳ ಮೇವು ಹಾಗು ಕುಡಿಯುವ ನೀರಿಗೂ ತೊಂದರೆಯಾಗಿದೆ. ಸರ್ಕಾರ ಕೂಡಲೇ ಪರಿಹಾರ ಕ್ರಮ ಕೈಗೊಳ್ಳಬೇಕು. ಬರಪೀಡಿತ ತಾಲ್ಲೂಕುಗಳ ಘೋಷಣೆಯಾದರೂ ಪರಿಹಾರ ನೀಡಿಲ್ಲ. ರೈತರನ್ನು ಉಳಿಸಿಕೊಳ್ಳಬೇಕೆಂಬ ಉದ್ದೇಶದಿಂದ ನಾಲೆ ಸ್ವಚ್ಛಗೊಳಿಸುತ್ತಿದ್ದೇನೆ.**
>
> **-ಹೆಚ್.ಡಿ.ರೇವಣ್ಣ, ಮಾಜಿ ಸಚಿವ**

ಈ ಬಾರಿ ಮಳೆ ಕೊರತೆಯಿಂದ ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗಿರುವ ಹಿನ್ನಲೆಯಲ್ಲಿ ಕೆರೆ-ಕಟ್ಟೆಗಳನ್ನು ತುಂಬಿಸಲು ನಾಲೆಗೆ ನೀರು ಹರಿಸಲಾಗುತ್ತಿದೆ. ಆದರೆ ನಾಲೆಯಲ್ಲಿ ನೀರು ಸರಾಗವಾಗಿ ಹರಿಯದ ಕಾರಣ ಕೆರೆಗಳು ಭರ್ತಿಯಾಗುತ್ತಿಲ್ಲ.

ನಾಲೆಯ ದುರಸ್ತಿ, ಸ್ವಚ್ಛತೆಗೆ ಸರ್ಕಾರದಿಂದ ಅನುದಾನ ಬಿಡುಗಡೆ ಮಾಡುವಂತೆ ಹಲವು ಬಾರಿ ಒತ್ತಾಯಿಸಿದ್ದರೂ ಕ್ರಮ ಕೈಗೊಳ್ಳದ ಹಿನ್ನಲೆಯಲ್ಲಿ ರೇವಣ್ಣ ಅವರು ತಮ್ಮ ಸ್ವಂತ ಖರ್ಚಿನಲ್ಲಿ ನಾಲೆ ಸ್ವಚ್ಛಗೊಳಿಸುವ ಕಾರ್ಯ ಕೈ ಗೊಂಡಿದ್ದಾರೆ. ಕಳೆದ 3 ದಿನಗಳಿಂದ ಯಂತ್ರಗಳ ಮೂಲಕ ಸ್ವಚ್ಛತಾ ಕಾರ್ಯ ನಡೆಯುತ್ತಿದ್ದು, ಈಗಾಗಲೇ ಸುಮಾರು 17 ಕಿ.ಮೀ. ನಾಲೆಯನ್ನು ಸ್ವಚ್ಛಗೊಳಿಸಲಾಗಿದೆ.

ಈ ನಾಲೆಯ ನೀರಿನಿಂದ ಸುಮಾರು 2,700 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ದೊರೆಯಲಿದ್ದು, 35 ಗ್ರಾಮಗಳ ಕೆರೆಗಳಿಗೆ ನೀರು ಲಭ್ಯವಾಗಲಿದೆ. ಶ್ರೀರಾಮದೇವರ ಕಟ್ಟೆಯಲ್ಲಿ ನೀರಿನ ಪ್ರಮಾಣ ಕಡಿಮೆಯಾಗುತ್ತಿರುವುದರಿಂದ ಯಾವುದೇ ಸಂದರ್ಭದಲ್ಲಿ ನೀರು ಹರಿಸುವುದನ್ನು ಸ್ಥಗಿತಗೊಳಿಸುವ ಸಾಧ್ಯತೆ ಇದೆ. ಹೀಗಾಗಿ ನಾಲೆ ಸ್ವಚ್ಛ

» ನಾಲ್ಕನೇ ಪುಟದಲ್ಲಿ

ಕಾಲು ಜಾರಿ ನದಿಗೆ ಬಿದ್ದ ವ್ಯಕ್ತಿಯ ರಕ್ಷಣೆ

- ಪ್ರಜೋದಯ ವರದಿ

ಅರಕಲಗೂಡು: ತಾಲ್ಲೂಕಿನ ಕೊಣನೂರಿನ ತೂಗುಸೇತುವೆ ಸಮೀಪ ಕಾವೇರಿ ನದಿಯಲ್ಲಿ ಕಾಲು ಜಾರಿ ಬಿದ್ದ ವ್ಯಕ್ತಿಯನ್ನು ಸ್ಥಳೀಯರು, ಪೊಲೀಸ್ ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ಸಹಕಾರದೊಂದಿಗೆ ಜೀವಂತವಾಗಿ ರಕ್ಷಿಸಿರುವ ಘಟನೆ ನಡೆದಿದೆ.

ರಾಮನಾಥಪುರ ಹೋಬಳಿ ವಡ್ಡರಹಳ್ಳಿ ಗ್ರಾಮದ ನಟರಾಜ್ (70) ಎಂಬಾತ ವ್ಯಕ್ತಿ ಕಾವೇರಿ ನದಿಯ ಸಮೀಪ ತೆರಳಿದ್ದ ಸಂದರ್ಭದಲ್ಲಿ ಆಕಸ್ಮಿಕವಾಗಿ ಕಾಲು ಜಾರಿ ನದಿಗೆ ಬಿದ್ದಿದ್ದಾರೆ. ವ್ಯಕ್ತಿ ನದಿಗೆ ಬಿದ್ದಿರುವುದನ್ನು ಗಮನಿಸಿದ ಸ್ಥಳೀಯರು ತಕ್ಷಣವೇ ಪೊಲೀಸರಿಗೆ ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿಗೆ ಮಾಹಿತಿ ನೀಡಿದ್ದಾರೆ. ಕೂಡಲೇ ಸ್ಥಳಕ್ಕೆ ಆಗಮಿಸಿದ ಪೊಲೀಸರು, ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ಸ್ಥಳೀಯರು ಜಂಟಿಯಾಗಿ ಕಾರ್ಯಾಚರಣೆ ನಡೆಸಿ, ನಟರಾಜ್‌ನನ್ನು ರಕ್ಷಿಸಿದ್ದಾರೆ. ಬಳಿಕ ತುರ್ತು ಚಿಕಿತ್ಸೆಗಾಗಿ ಆ್ಯಂಬುಲೆನ್ಸ್ ಮೂಲಕ ಆಸ್ಪತ್ರೆಗೆ ರವಾನಿಸಲಾಗಿದೆ.

ವಯಸ್ಸು ಚಿಕ್ಕದಾದರೂ ಆಲೋಚನೆ ದೊಡ್ಡದು!

ಹಳೆಯ ಶೈಕ್ಷಣಿಕ ವರ್ಷಕ್ಕೆ ವಿದಾಯ ಹೇಳಿ ಹೊಸ ಶೈಕ್ಷಣಿಕ ವರ್ಷವನ್ನು ಸ್ವಾಗತಿಸುವ ತರಾತುರಿಯಲ್ಲಿ, ಎಷ್ಟೋ ಕೆಲಸಗಳು ಚಲಿಸುವ ಗತಿ ನಿಧಾನವಾಯಿತು. ಆದ ಕಾರಣ ಕಥೆಗಳನ್ನು ಹಚ್ಚಿಕೊಳ್ಳಲು ಸಮಯವೇ ಸಿಕ್ಕಲಿಲ್ಲ.

ಮಕ್ಕಳು ಪರೀಕ್ಷೆ, ನಂತರ ಫಲಿತಾಂಶ, ಮರುಪರೀಕ್ಷೆ, ಅದರ ಫಲಿತಾಂಶ, ಸಂಭ್ರಮ, ಮುಂದಿನ ವಿದ್ಯಾಭ್ಯಾಸದ ತಯಾರಿಗಳ ಬಗ್ಗೆ ಯೋಚನೆಯಲ್ಲೇ ಮುಳುಗಿರುವ ವಿದ್ಯಾರ್ಥಿಗಳು, ಶಾಲೆಯ ಮರು ದಾಖಲಾತಿ, ಅದರ ನಡುವೆ ಹಲವು ತರಬೇತಿಗಳು, ಬೇಸಿಗೆ ಶಿಬಿರಗಳು, ಅಬ್ಬಬ್ಬಾ ಇಷ್ಟೆಲ್ಲ ಕೆಲಸಗಳು.. ನಂತರ ಮಧ್ಯದಲ್ಲಿ 10 ದಿನದ ಬೇಸಿಗೆ ರಜೆಯ ವೇಳಾಪಟ್ಟಿಯ ದಿನಚರಿ.. ಎಲ್ಲವನ್ನು ಮುಗಿಸಿ ಮತ್ತೆ ಶಾಲೆ ಎಂದಿನಂತೆ ಶುರು..

ಟೀಚರ್ಸ್ ಕುಳಿತಿರುವ ಜಾಗಕ್ಕೆ ಓಡಿ ಬಂದಿತು... ಮಿಸ್,,, ಮಿಸ್,,, ನಾನು ಇವತ್ತು ಬಂದೇ....

ಪೋಷಕರಿಗೆಲ್ಲಾ ಕರೆ ಮಾಡುವುದು, ದಾಖಲಾತಿ ಬಗ್ಗೆ ಮಾಹಿತಿ, ಹೀಗಿರುವಾಗ ಮುಂದಿನ ತರಗತಿಯ ದಾಖಲಾತಿಗೆಂದು ಒಂದು ಮಗು ಶಾಲೆಗೆ ಬಂದಾಗ, ನರ್ಸರಿ ನೀವೆಲ್ಲ ಹೇಗಿದೀರಿ? ಎಂದು ಕ್ಷೇಮ ಸಮಾಚಾರ ವಿಚಾರಿಸಿ ರಜೆಯಲ್ಲಿ ನಡೆದ ಎಲ್ಲಾ ಕಥೆಗಳನ್ನು ನಮ್ಮ ಬಳಿ ಹಂಚಿಕೊಂಡಿತು.. ಅಪ್ಪ ಕೊಡಿಸಿದ ಆಟಿಕೆಯ ಕಥೆ, ಅಮ್ಮ ಮಾಡಿದ ಹೊಸ ತಿಂಡಿಯ ಕಥೆ, ಅಜ್ಜಿ ಮನೆಗೆ ಹೋದಾಗ ಅಜ್ಜಿ ಹೇಳಿದೆ ಕಥೆಯ ಕಥೆ, ಹೀಗೆ ಎಲ್ಲವನ್ನು ಒಮ್ಮೆಲೇ ಹೇಳಿ ಜೊತೆಗೆ ನಾನು ಕೇಳಿದ ಪ್ರಶ್ನೆಗಳಿಗೂ ಸಾರಾಗವಾಗಿ ಉತ್ತರಿಸಿ, ಪೋಷಕರ ಬಳಿ ಓಡಿತು.. ನಂತರ ಪೋಷಕರ ಬಳಿ ಮಾತನಾಡುವಾಗ ಅವರು ಹೇಳಿದರು, ಮೇಡಂ ಇವನಿಗೆ ನೀವು ಎಂದರೆ ತುಂಬಾ ಇಷ್ಟ ಅಂತೇ.. ಮುಂದಿನ ತರಗತಿಯಲ್ಲೂ ನೀವೇ ಬೇಕಂತೆ, ಮನೆಯಲ್ಲಿ ಹೇಳುತಿದ್ದ ಎಂದು ಹೇಳಿದರು.. ಅಯ್ಯೋ ಹಾಗಾದ್ರೆ, ಇರಿ ನಾನೇ ಅವನನ್ನ ಮಾತಾಡಿಸ್ತೇನೆ ಎಂದು ಅವನನ್ನು ಕೂಗಿ ಕರೆದು ಹೇಳಿದೆ ಏನೂ ಮಾರಾಯ ನಿನಗೆ ಮುಂದಿನ ವರ್ಷವೂ ನಾನೇ ಟೀಚರ್ ಆಗ್ಬೇಕಾ? ಹಾಗಾದ್ರೆ, ಒಂದು ಕೆಲಸ ಮಾಡು ನಿನಗೆ ನಾ ಅಂದ್ರೆ ಇಷ್ಟ ಅಲ್ವಾ? ಇನ್ನೊಂದು ವರ್ಷ ಅದೇ ತರಗತಿಯಲ್ಲೇ ಇದ್ದು ಬಿಡು... ಏನಂತೀಯಾ??? ಎಂದು ಕೇಳಿದೆ. ಆಗ ಅವನು ನೀಡಿದ ಉತ್ತರ ತುಂಬಾ ಸರಳ, ಸುಂದರ, ಅರ್ಥಗರ್ಭಿತ ಹಾಗು ಪ್ರೌಢತೆಯಿಂದ ಕೂಡಿತ್ತು.. ಅವನು ಹೇಳಿದ ಮಿಸ್ ನೀವಂದ್ರೆ ನನಗೆ ಇಷ್ಟ ಹೌದು ಆದ್ರೆ, ನಾನು ಮತ್ತೆ ಅದೇ ತರಗತಿಲಿ ಕೂರೋದಿಲ್ಲಪಾ, ನಾನು ಮುಂದೆ ಹೋಗ್ಬೇಕು, ಪಾಸ್ ಆಗ್ಬೇಕು, ದೊಡ್ಡೋನಾಗ್ಬೇಕು, ನೀವೇ ನನ್ನ ತರಗತಿಗೆ ಬನ್ನಿ ಎಂದು..

ಕೇಳಲು ಬಹಳ ಸರಳ ಆದರೆ ಅದರಲ್ಲಿ ಎಷ್ಟು ಅರ್ಥ ತುಂಬಿದೆ. ಆಳವಾಗಿ ಯೋಚಿಸಿದರೆ ಎಷ್ಟು ಅರ್ಥ ಅಡಗಿದೆ.. ಆ 6 ವರ್ಷದ ಮಗುವು ತುಂಬಾ ವಿಶ್ಲೇಷಣೆ ಕೊಡಲು ಆಗದೇ ಹೋದರೂ ಸಹ ತನ್ನದೇ ಶೈಲಿಯಲ್ಲಿ, ಅರ್ಥ ಮಾಡಿಸುವ ಪ್ರಯತ್ನ ಮಾಡಿದ್ದ.. ಯಾವುದೇ ಆಗಲಿ ನಮಗೆ ಇಷ್ಟ ಎಂದು ಅತೀ ಮೋಹದಿಂದ ಇದ್ದರೆ ನಾವು ಮುಂದೆ ಹೋಗಲು ಸಾಧ್ಯವಿಲ್ಲ ಎಂಬುವ ನೀತಿ ಪಾಠವನ್ನು ಅವನು ತನ್ನ ಮಾತಿನಿಂದ ವ್ಯಕ್ತಪಡಿಸಿದ್ದ. ಮಕ್ಕಳ ಮಾತು ತಮಾಷೆಯಂತೆ ಕಂಡರೂ ಅದರಲ್ಲಿ ಕೆಲವೊಮ್ಮೆ ಗಂಭೀರತೆ ಅಡಗಿರುತ್ತದೆ.. ಆ ಮಗುವಿನ ಮಾತಿನಿಂದ ನಾವೇನು ತಿಳಿಯಬಹುದು ಎಂದರೆ... ತೀವ್ರವಾದ ಮೋಹ, ಆಸೆ, ಮನುಷ್ಯನ ಬೆಳವಣಿಗೆಯನ್ನು ಕುಂಠಿತಗೊಳಿಸಬಹುದು. ನಮ್ಮ ಬೆಳವಣಿಗೆಗಾಗಿ ಕೆಲವೊಮ್ಮೆ ನಾವು ಎಷ್ಟೋ ಆಸೆಗಳನ್ನು, ಇಷ್ಟಗಳನ್ನು, ಮೋಹಗಳನ್ನು, ಬಿಟ್ಟು ಅವುಗಳ ನೆನಪಿನೊಂದಿಗೆ ಮುಂದೆ ಸಾಗಬೇಕು ಎನ್ನುವುದು.

- ರಮ್ಯಾ ಆರ್ ಭಟ್, ಕುಂದಾಪುರ

ಮಗುವಿನ ಅರ್ಥಪೂರ್ಣ ಪ್ರಶ್ನೆ

ಶಾಲೆ ಶುರುವಿನ ಆಚರಣೆಯ ಸಂಭ್ರಮದಿಂದ ಮುಗಿಸುವಷ್ಟರಲ್ಲೇ ಪರೀಕ್ಷೆಗಳು ಸಾಲು ಸಾಲಾಗಿ ಬಂದು ಮಕ್ಕಳನ್ನು ತುಂಬಾ ಗಂಭೀರ ಮಾಡಿಬಿಟ್ಟಿದೆ.. ಅದರ ಜೊತೆ ಹಲವು ಆಚರಣೆಗಳು, ಸ್ಪರ್ಧೆಗಳು, ಹೀಗೆ ಈ ವರ್ಷದ ಅರ್ಧ ಕಳೆದೇ ಹೋಯಿತು... ಹೀಗೆ ಪರೀಕ್ಷೆಯ ತಯಾರಿಯ ಸಮಯದಲ್ಲಿ, ಮಕ್ಕಳಿಗೆಲ್ಲ ಪುನರಾವರ್ತನೆ ಮಾಡುವಾಗ ಎಲ್ಲಾ ಮಕ್ಕಳು ಬರೆದು ತೋರಿಸಿ, ಬಾರದೆ ಇರುವವರು ಮತ್ತೊಮ್ಮೆ ಮಗದೊಮ್ಮೆ ಬರೆಯುವ ತರಾತುರಿಯಲ್ಲಿರುವಾಗ ಒಂದು ಮಗು ನನ್ನ ಬಳಿ ಬಂದು ನಿಂತಿತು..!

ಆ ಮಗುವು ನನ್ನ ತರಗತಿಯಲ್ಲೇ ಅತೀ ಹೆಚ್ಚು ಮಾತನಾಡುವ ಮಗು. ಹಾಗು ತನ್ನ ವಯಸ್ಸಿಗೆ ಮೀರಿದ ಪ್ರೌಢತೆ. ಸಾಮಾನ್ಯ ಪ್ರಶ್ನೆಗಳ ಜೊತೆ, ಅತೀ ಸೂಕ್ಷ್ಮ ವಿಚಾರಗಳನ್ನು ಸಹ ಪ್ರಶ್ನೆ ಮಾಡಿ, ಕೆದಕಿ, ಉತ್ತರ ಸಿಗುವವರೆಗೂ ನಮ್ಮನ್ನು ಬೆಂಬಿಡದೆ ಕಾಡುವ ಸ್ವಭಾವ ಅವಳದ್ದು.. ಅವಳು ಬಂದ ಪರಿ ನೋಡಿಯೇ ಕೇಳಿದೆ. ಇಂದು ಯಾವ ಪ್ರಶ್ನೆ ಜೊತೆಗೆ ಬಂದಿದ್ದೀ? ಎಂದು. ಆಗ ಅವಳದ್ದೋಂದು ಹೆಮ್ಮೆಯ ನಗೆ. ಮೇಡಂ ಈಗ ನೀವು ಹೇಳಿಕೊಡುತ್ತಿರುವ ಎಲ್ಲಾ ಪಾಠವನ್ನು ನಾನು ಈ ಹಿಂದೆ ಹಳೆಯ ಶಾಲೆಯಲ್ಲಿ ಕಲಿತಿದ್ದೇನೆ, ಈಗಲೂ ಮತ್ತೇಕೆ ಅದನ್ನೇ ಹೇಳಿಕೊಡುತ್ತಿದ್ದೀರಿ? ಆಗ ನಾ ಹೇಳಿದೆ ನೀನು ಕಲಿತಿರುವೆ ಸರಿ, ಆದರೆ ಕೆಲವರು ಅದನ್ನೆಲ್ಲ ಕಲಿಯದೇ ಬಂದವರು ಇರುತ್ತಾರೆ, ಅವರಿಗೂ ತಿಳಿಯಬೇಕಲ್ಲವೇ ಅದಕ್ಕೆ. ಎಂದೆ.

ಆಗ ಅವಳು ಪಟ್ಟನೆ ಕೇಳಿದಳು, ಅವರೆಲ್ಲರೂ ನನ್ನ ವಯಸ್ಸಿನವರೇ, ಈ ಮುಂಚೆ ಶಾಲೆಗೆ ಹೋಗಿ ಬಂದವರೇ, ಆದರೂ ಅಲ್ಲಿ ಯಾರೂ ಏಕೆ ಇದನ್ನೆಲ್ಲಾ ಹೇಳಿಕೊಟ್ಟಿಲ್ಲ? ಪ್ರಶ್ನೆ ಸ್ವಲ್ಪ ಕಷ್ಟದ್ದು, ಅದಕ್ಕೆ ನಾನು ಸ್ವಲ್ಪ ಜಾಣತನದಿಂದಲೇ ಉತ್ತರ ಕೊಡಬೇಕಿತ್ತು, ಸ್ವಲ್ಪ ಯೋಚಿಸಿ ಹೇಳಿದೆ, ಎಲ್ಲವನ್ನು ಅಲ್ಲಿಯೂ ಸಹ ಹೇಳಿಕೊಟ್ಟಿರುತ್ತಾರೆ, ಆದರೆ ಈಗ ನೀವೆಲ್ಲ ರಜೆಯನ್ನು ಮುಗಿಸಿ ಬಂದದ್ದಷ್ಟೇ ಅಲ್ಲವೇ? ಕೆಲವರು ಮರೆತಿರುತ್ತಾರೆ, ಹಾಗಾಗಿ ನಾವು ಹೇಳಿಕೊಡಲೇ ಬೇಕು ಎಂದೆ.. ಆದರೂ ಅವಳಿಗೆ ಸಮಾಧಾನವಿಲ್ಲ ಕಲಿತಿದ್ದನ್ನೇ ಕಲಿಯಲು ನನಗೆ ಬೇಜಾರು ನನಗೆ ಬೇರೆ ಏನಾದರೂ ಹೇಳಿಕೊಡಿ ಎಂದಳು.. ಆಗ ನಾ ತಮಾಷೆಗೆಂದು ಹಾಗಾದರೆ, ನೀನು ಮುಂದಿನ ತರಗತಿಗೆ ಹೋಗಬಹುದಿತ್ತು ಅಲ್ಲವೇ? ಎಂದೆ. ಆಗ ಅವಳು ತಕ್ಷಣ ಹೇಳಿದಳು ಅಯ್ಯೋ ಇಲ್ಲ ಮೇಡಂ ನನಗೆ ಇನ್ನು ಮುಂದಿನ ತರಗತಿಗೆ ಹೋಗುವ ವಯಸ್ಸು ಆಗಲಿಲ್ಲ, ನನಗೆ ಇನ್ನು ಇದೆ ತರಗತಿಯಲ್ಲಿಯೇ ಕಲಿಯುವ ವಯಸ್ಸು ಎಂದು. ಇಷ್ಟು ನಿರ್ದಿಷ್ಟವಾಗಿ ಉತ್ತರ ಕೊಡುವ ಪ್ರೌಢತೆ ಇರುವ ಮಗುವಿಗೆ, ನಾನು ವಾಸ್ತವತೆಯನ್ನು ಬಿಡಿಸಿ ಹೇಳಬಹುದು ಎನ್ನುವ ಧೈರ್ಯ ನನಗೆ ಬಂದು ಎಲ್ಲವನ್ನು ಅವಳಿಗೆ ವಿಸ್ತರಿಸಿ ಹೇಳಿದೆ. ನೋಡು ಪುಟ್ಟ, ಹಾಗಾದರೆ ನಿಮ್ಮ ಈ ವಯಸ್ಸಿಗೆ ಏನನ್ನು ಕಲಿಸಬೇಕೋ, ಅದನ್ನಷ್ಟೇ ನಾನು ಕಲಿಸಬೇಕು ಅದನ್ನೇ ಕಲಿಸುತ್ತಿದ್ದೇನೆ, ಮುಂದಿನ ದಿನಗಳಲ್ಲಿ ನೀನು ಹೆಚ್ಚಿನದಾಗಿ ಕಲಿಯಬಹುದು ಎಂದು. ನಂತರ ಅಸಮಾಧಾನದ ತೃಪ್ತಿಯೊಂದಿಗೆ ಹಿಂತಿರುಗಿ, ಕೆಲವು ನಿಮಿಷಗಳ ನಂತರ ಮತ್ತೆ ಬಂದಳು.. ನಾನು ಮತ್ತು ಏನನ್ನೋ ಕೇಳಬೇಕು, ಎಂದಳು. ಕೇಳು ಆದರೆ ಇಂದಿಗೆ ಇದು ನಿನ್ನ ಪ್ರಶ್ನೆಯ ಸರದಿ ಮುಗಿಯಿತು ಎಂದು ತಾಕೀತು ಮಾಡಿದೆ. ಅದಕ್ಕೆ ಒಪ್ಪಿ ಅವಳು ಕೇಳಿದ ಮುಂದಿನ ಪ್ರಶ್ನೆ, ನನ್ನನ್ನು ಉತ್ತರ ನೀಡಲು ಅಶಕ್ತಳನ್ನಾಗಿಸಿತ್ತು.

ಅವಳ ಪ್ರಶ್ನೆ ಏನೆಂದರೆ, ಸರಿ ಮೇಡಂ ನೀವು ಹೇಳಿದಿರಲ್ಲ, ಈ ವಯಸ್ಸಿಗೆ ಇಷ್ಟೇ ಕಲಿಸಬೇಕು ಎಂದು, ಹಾಗಾದ್ರೆ ಕಳೆದ ವರ್ಷ ನಾನು ಇನ್ನು ಚಿಕ್ಕವಳಿದ್ದೇ, ಆದರೂ ಅವರು ಏಕೆ ನನಗೆ ಈ ವರ್ಷದ ಪಾಠವನ್ನೆಲ್ಲ ಹೇಳಿಕೊಟ್ಟರು? ಆ ಪ್ರಶ್ನೆಗೆ ಏನೆಂದು ಉತ್ತರಿಸಬೇಕೆಂದು ತಿಳಿಯದೆ ಕೆಲವು ನಿಮಿಷಗಳ ಕಾಲ ಸುಮ್ಮನಿದ್ದು, ನಂತರ ಹೇಳಿದೆ, ಇಲ್ಲ ಪುಟ್ಟ ನೀನು ತುಂಬಾ ಜಾಣೆ ಅಲ್ಲವೇ? ಕಲಿಯುವುದರಲ್ಲಿ ಮುಂದೆ ಇದ್ದಿ ಹಾಗಾಗಿ ನಿನಗೆ ಹೇಳಿಕೊಟ್ಟಿದ್ದಾರೆ ಎಂದೊಡನೆ ಅವಳಿಗೆ ಸಂತೋಷವಾಗಿ ಹಿಂದಿರುಗಿದಳು..

ಆದರೆ ಕೇಳಲು ಬಹಳ ಸರಳ ಎನಿಸಿದ ಆ ಮಗುವಿನ ಪ್ರಶ್ನೆಯ ಹಿಂದೆ ಎಷ್ಟು ಗಾಢವಾದ ಅರ್ಥವಿದೆ,, ನಮ್ಮ ಈ ವ್ಯವಸ್ಥೆಯ ಸಮರ್ಥನೆಯನ್ನು ಕೊಡಲು ನಾವು ತಯಾರಾಗಬೇಕಿದೆ. ಮೊದಲಿನ ಶಿಕ್ಷಣ ಪದ್ಧತಿಯಂತೆ ನಮ್ಮ ಪಾಲನೆ ಈಗ ಇಲ್ಲ, ಎಲ್ಲರೂ ಸಹ ಪಠ್ಯದ ಹಿಂದೆ, ಅಂಕಗಳ ಹಿಂದೆ ಓಡುವವರೇ..!! ಹಾಗೆಯೇ ಶಾಲೆಗೆ ಹೋದ ಮರುದಿನವೇ ನಮ್ಮ ಮಗು ಇಂಗ್ಲಿಷ್ ಮಾತನಾಡಬೇಕು ಎಂದು ಬಯಸುವ ನಮ್ಮ ಪೋಷಕರು, ವಯಸ್ಸಿಗೆ ಮೀರಿದ ಪಠ್ಯ ಕ್ರಮ,, ಕಲಿಸಬೇಕಾದ ಅನಿವಾರ್ಯತೆ ಶಿಕ್ಷಕರದ್ದು, ಹೀಗಿರುವಾಗ ಆ ಮಗುವಿನ ಅರ್ಥಪೂರ್ಣ ಪ್ರಶ್ನೆಗೆ ಉತ್ತರವನ್ನು ಯಾರ ಬಳಿ ಕೇಳುವುದು..?

ಅನಾದಿ ಕಾಲದಿಂದಲೂ ನಮಗೆಲ್ಲ ತಿಳಿದಿರುವ ವಿಚಾರವೆಂದರೆ, ಶಿಕ್ಷಣ ಎಂದು ಬಂದಾಗ ಮಗು ಅನುಭವದ ಮೂಲಕ ಕಲಿಯಬೇಕು, ಮಗುವಿಗೆ ಒತ್ತಡ ರಹಿತ ಶಿಕ್ಷಣ ಬೇಕು, 6 ವರ್ಷದ ಒಳಗಿನ ಮಗುವಿಗೆ ಬರವಣಿಗೆಯ ಒತ್ತಡ ಇರಬಾರದು, ವಯೋಮಿತಿಗೆ ತಕ್ಕಂತೆ ಪಠ್ಯವಿರಬೇಕು ಎಂದು.. ಆದರೆ ನಮ್ಮ ಇಂದಿನ ವ್ಯವಸ್ಥೆ ಇದೆಲ್ಲದಕ್ಕೂ ವಿರುದ್ಧವಾಗಿರುವುದಲ್ಲದೆ, ಪೋಷಕರ ನಿರೀಕ್ಷೆಯೂ ಸಹ ಇಂದಿನ ಪಠ್ಯ ಕ್ರಮದ ನೀತಿಯ 2 ಹೆಜ್ಜೆ ಮುಂದೆ ಇದೆ ಎಂದರೆ ತಪ್ಪಾಗಲಾರದು..!

ಮಕ್ಕಳಿಗೆ ಕಲಿಕೆ ಎಂದಿಗೂ ಖುಷಿಯನ್ನು ತರಬೇಕೆ ಹೊರತು, ಮುಂದಿನ ವರ್ಷಗಳಲ್ಲಿ ಕಲಿಯಬೇಕಿದ್ದ ಎಲ್ಲವನ್ನು ನಾನು ಈಗಲೇ ಕಲಿತಿರುವೆ ಎನ್ನುವ ಭ್ರಮೆಯ ಹೆಮ್ಮೆಯನ್ನು ಮೂಡಿಸುವಂತಾಗಲಿ, ಅಥವಾ ಒತ್ತಡವಾಗಲಿ ಇರಬಾರದು... ಈ ಮಗುವಿನ ಪ್ರಶ್ನೆಯಿಂದ ನಾವು ಅದನ್ನು ತಿಳಿಯಬೇಕಿದೆ.. ನಮ್ಮ ಮಗುವಿನ ವಯಸ್ಸಿಗೆ ಅನುಗುಣವಾಗಿ ಮಾತ್ರ ನಾವು ಹೇಳಿಕೊಡಬೇಕು.. ಅದಕ್ಕೂ ಮಿತಿಮೀರಿದರೆ ಅಮೃತವೂ ವಿಷವಾಗುತ್ತದೆ.

ಎರಡನೇ ಪಾನಿಪುರಿ

ನ್ಯಾಷನಲ್ ಕಾಲೇಜ್ ಬಸ್ ಸ್ಟಾಪ್‌ನಲ್ಲಿ ಬಿಎಂಟಿಸಿ ಬಸ್‌ಗಾಗಿ ಕಾಯುತ್ತಾ ನಿಂತಿದ್ದ ರಘು, ರಸ್ತೆ ಬದಿಯ ಗಾಡಿಯ ಬಳಿ ಕಾಲೇಜು ಯುವಕ-ಯುವತಿಯರು ನಗುತ್ತಾ ಪಾನಿಪುರಿ ತಿನ್ನುವುದನ್ನು ನೋಡುತ್ತಿದ್ದನು. ಕ್ಷಣದಲ್ಲೇ ಅವನು ದಶಕಗಳ ಹಿಂದಿನ ನೆನಪಿಗೆ ಜಾರಿದನು. ಆ ಯುವಕರು ಯಾವುದೇ ಯೋಚನೆಯಿಲ್ಲದೆ ಐವತ್ತು ರೂಪಾಯಿಯ ನೋಟನ್ನು ಪಾನಿಪುರಿ ಅಣ್ಣನಿಗೆ ನೀಡುವುದನ್ನು ನೋಡಿದಾಗ, ಅವನಿಗೆ ತನ್ನ ಒಂಬತ್ತನೇ ವಯಸ್ಸಿನ ನೆನಪು ಮರುಕಳಿಸಿತು.

ಆ ದಿನಗಳಲ್ಲಿ, ಜೇಬಿನಲ್ಲಿದ್ದ ಆ ಪುಟ್ಟ, ಹಗುರವಾದ ಅಲ್ಯೂಮಿನಿಯಂ ನಾಣ್ಯವೇ ಅವನ ಇಡೀ ಪ್ರಪಂಚವಾಗಿತ್ತು.

ಶಾಲೆಯ ಕೊನೆಯ ಗಂಟೆ ಬಾರಿಸುತ್ತಿದ್ದಂತೆ, ಮಕ್ಕಳ ದಂಡು ಶಾಲೆಯ ಕಾಂಪೌಂಡ್ ಗೋಡೆಯುದ್ದಕ್ಕೂ ಸಾಲಾಗಿ ನಿಂತಿದ್ದ ತಿಂಡಿ ಗಾಡಿಗಳತ್ತ ಓಡುತ್ತಿತ್ತು. ಕೆಲವರು 5 ಪೈಸೆಗೆ ಆರೆಂಜ್ ಟಾಫಿ ಅಥವಾ ಹುಣಸೆಹಣ್ಣಿನ ಲಾಲಿಪಾಪ್ ಕೊಳ್ಳುತ್ತಿದ್ದರೆ, ಇನ್ನು ಕೆಲವರು ಎರಡು ರಂಧ್ರಗಳಿದ್ದು ದಾರ ಪೋಣಿಸಿ ಎರಡೂ ಕೈಗಳಿಂದ ವೇಗವಾಗಿ ತಿರುಗಿಸಬಹುದಾದ ಬಿಳಿ ಮಿಂಟ್ ಮಿಠಾಯಿ ಅಥವಾ 20 ಪೈಸೆಗೆ 4 ಮಿಂಟ್ ಇರುವ ಬಿಪಿ/ಎನ್‌ಪಿ ಚ್ಯೂಯಿಂಗ್ ಗಮ್ ಪ್ಯಾಕೆಟ್ ಕೊಳ್ಳುತ್ತಿದ್ದರು. ಕೆಲವರು 25 ಪೈಸೆಯ ಆ ಪುಟ್ಟ ನಾಣ್ಯ ನೀಡಿ, ಕ್ರಿಕೆಟ್ ಆಟಗಾರರ ಚಿತ್ರಗಳು ಹಾಗೂ ವಿವರಗಳಿರುವ ಮಡಚಿದ ಚೀಟಿ ಸಿಗುತ್ತಿದ್ದ ಅತ್ಯಂತ ಜನಪ್ರಿಯ ಬಿಗ್ ಫನ್ ಬಬಲ್ ಗಮ್ ಕೊಳ್ಳುತ್ತಿದ್ದರುಅದರ ಚಿತ್ರಗಳನ್ನು ಸಂಗ್ರಹಿಸುವುದು ಅಂದಿನ ಮಕ್ಕಳಿಗೆ ದೊಡ್ಡ ಗೀಳಾಗಿತ್ತು.

ಅಲ್ಲಿಯೇ ಇದ್ದ ಪಾನಿಪುರಿ ಗಾಡಿಯ ವ್ಯಾಪಾರಿ 10 ಪೈಸೆಗೆ ಒಂದು ಪಾನಿಪುರಿ ಮಾರುತ್ತಿದ್ದನು, ಅದು ಹಲವು ಮಕ್ಕಳಿಗೆ ಅತ್ಯಂತ ನೆಚ್ಚಿನ ತಿಂಡಿಯಾಗಿತ್ತು. ರಘುವಿನ ಬಳಿ ಇಡೀ ವಾರಕ್ಕೊಂದೇ ಹೆಚ್ಚೆಂದರೆ 5 ಅಥವಾ 10 ಪೈಸೆ, ಅಪರೂಪಕ್ಕೊಮ್ಮೆ ಆ 25 ಪೈಸೆಯ ನಾಣ್ಯ ಇರುತ್ತಿತ್ತು. ಹೀಗಾಗಿ, ಅವನು ಜೇಬಿನಲ್ಲಿದ್ದ ಹಣವನ್ನು ಅಳೆಯುತ್ತಾ ಅತ್ಯಂತ ಎಚ್ಚರಿಕೆಯಿಂದ ತಿಂಡಿ ಆರಿಸಿಕೊಳ್ಳಬೇಕಿತ್ತು. ಈ ಲೆಕ್ಕಾಚಾರದಿಂದಾಗಿ ಅವನು ಯಾವುದಾದರೂ ಒಂದು ದಿನ ಕೇವಲ ಒಂದೇ ಒಂದು ಪಾನಿಪುರಿ ತಿನ್ನಲು ಸಾಧ್ಯವಾಗುತ್ತಿತ್ತು. ಆ ಒಂದು ಪಾನಿಪುರಿಯ ಕಟು-ಖಾರದ ರುಚಿ ಅವನಿಗೆ ಅತ್ಯಂತ ಪ್ರಿಯವಾಗಿತ್ತು ಮತ್ತು ಇನ್ನೂ ಬೇಕು ಎನಿಸುವಂತೆ ಮಾಡುತ್ತಿತ್ತು. ಹೊಟ್ಟೆ ತುಂಬಾ ಪಾನಿಪುರಿ ತಿನ್ನುವುದು ಹೇಗಿರುತ್ತದೆ ಎಂಬುದೇ ಅವನಿಗೆ ತಿಳಿದಿರಲಿಲ್ಲ.

ಆದರೆ ಒಂದು ದಿನ ಆ ದಿನಚರಿ ಬದಲಾಯಿತು. ಶಾಲೆ ಬಿಟ್ಟಾಗ ಹೊರಬಂದ ರಘುವಿಗೆ, ಮುಖ್ಯ ಗೇಟ್‌ನ ಹೊರಗಡೆಯೇ ತನ್ನ ತಂದೆ ಬೆಳ್ಳಿ ಬಣ್ಣದ ಸ್ಕೂಟರ್‌ನಲ್ಲಿ ಕಾಯುತ್ತಿರುವುದು ಕಾಣಿಸಿತು.

ಬನ್ನಿ, ಹತ್ತಿ, ಎಂದು ತಂದೆ ಸ್ಕೂಟರ್‌ನ್ನು ಸ್ಟಾರ್ಟ್ ಮಾಡುತ್ತಾ ಮುಗುಳ್ನಕ್ಕರು. ಅಣ್ಣನ ಜೊತೆ ಸ್ಕೂಟರ್‌ನ ಹಿಂದಿನ ಆಸನದಲ್ಲಿ ಕುಳಿತು, ತಂದೆಯ ಸೊಂಟವನ್ನು ಗಟ್ಟಿಯಾಗಿ ಅಪ್ಪಿ ಹಿಡಿಯುವುದು ಆ ದಿನಗಳಲ್ಲಿ ಅವರಿಗೆ ಅತ್ಯಂತ ಪ್ರಿಯವಾದ ಸಂಗತಿಯಾಗಿತ್ತು.

ಶಾಲೆಯ ಮುಂಭಾಗದಲ್ಲೇ ಇದ್ದ ಅದೇ ನಾಲ್ಕು ಚಕ್ರದ ತಳ್ಳುವ ಗಾಡಿಯ ಪಾನಿಪುರಿ ಅಣ್ಣನ ಬಳಿ ತಂದೆ ಸ್ಕೂಟರ್ ನಿಲ್ಲಿಸಿ, ನಿಮಗೆ ಪಾನಿಪುರಿ ತಿನ್ನಬೇಕೇ? ಎಂದು ಕೇಳಿದರು.

ಇಬ್ಬರೂ ಆಶ್ಚರ್ಯದಿಂದ ಹೌದೆಂದು ತಲೆಯಾಡಿಸಿದರು.

ಕೆಂಪು ಬಟ್ಟೆಯಿಂದ ಮುಚ್ಚಿದ ದೊಡ್ಡ ಹಿತ್ತಾಳೆ ಪಾತ್ರೆಯಿಟ್ಟುಕೊಂಡಿದ್ದ ಆ ಪಾನಿಪುರಿ ಅಣ್ಣ ಇಬ್ಬರಿಗೂ ಒಣಗಿದ ಎಲೆಯಿಂದ ಮಾಡಿದ ಒಂದೊಂದು ದೊನ್ನೆಯನ್ನು ನೀಡಿದನು. ರಘು ತನ್ನ ಎಂದಿನ ಅಭ್ಯಾಸದಂತೆ ಆ ಒಂದು ಪಾನಿಪುರಿಯನ್ನು ತಿಂದು, ಮುಗಿಯಿತೆಂದು ಭಾವಿಸಿದನು.

ಆದರೆ ಪಾನಿಪುರಿ ಅಣ್ಣ ತಕ್ಷಣವೇ ಅದೇ ದೊನ್ನೆಗೆ ಎರಡನೇ ಪಾನಿಪುರಿಯನ್ನು ಹಾಕಿದನು. ನಂತರ ಮೂರನೆಯದು...

ಮೂರನೇ ಪಾನಿಪುರಿ ನಾಲಗೆಯ ಮೇಲೆ ಕರಗುತ್ತಿದ್ದಂತೆ ರಘುವಿನ ಗಂಟಲಲ್ಲಿ ಹುಳಿ, ಖಾರ ಮತ್ತು ಸಿಹಿಯ ರಸದೌತಣವೇ ಹರಿಯಿತು. ಬಾಯಿ ಜಿವ್ ಎನ್ನುತ್ತಿತ್ತು, ಇನ್ನು ತಿನ್ನಲು ಸಾಧ್ಯವಿಲ್ಲವೇನೋ ಎನಿಸುವಷ್ಟು ಖಾರದ ಝುಳವಿತ್ತು, ಆದರೂ ಪ್ರತಿಯೊಂದು ಪಾನಿಪುರಿ ಹೊಟ್ಟೆಗೆ ಇಳಿಯುತ್ತಿದ್ದಂತೆ ಅದನ್ನು ಮತ್ತಷ್ಟು ತಿನ್ನುವ ಹಂಬಲ ಹೆಚ್ಚಾಗುತ್ತಿತ್ತು!



ರಘು ತನ್ನ ತಂದೆಯತ್ತ ನೋಡುತ್ತಾ, ಯಾವ ಕ್ಷಣದಲ್ಲಾದರೂ ಸಾಕು ಇನ್ನು ಎಂದು ಹೇಳಬಹುದು ಎಂದು ಕಾಯುತ್ತಿದ್ದನು. ಆದರೆ ತಂದೆ ಸೊಂಟದ ಮೇಲೆ ಕೈಯಿಟ್ಟುಕೊಂಡು, ಆ ಪಾನಿಪುರಿ ಅಣ್ಣ ಅವರ ದೊನ್ನೆಗಳನ್ನು ಒಂದರ ನಂತರ ಒಂದರಂತೆ ಭರ್ತಿ ಮಾಡುವುದನ್ನು ಮುಗುಳ್ನಗುತ್ತಾ ನೋಡುತ್ತಿದ್ದರು. ನಾಲ್ಕು, ಐದು, ಆರು... ರಘು ಎಣಿಸುವುದನ್ನೇ ಮರೆತುಬಿಟ್ಟನು. ತನ್ನ ಜೀವನದಲ್ಲೇ ಅವನು ಅಷ್ಟೊಂದು ಪಾನಿಪುರಿಗಳನ್ನು ತಿಂದಿರಲಿಲ್ಲ. ಕೈಬೆರಳುಗಳ ನಡುವೆ ಖಾರದ ನೀರು ಸೋರುತ್ತಿದ್ದರೂ, ಹೊಟ್ಟೆ ತುಂಬುವವರೆಗೆ ತಿನ್ನುತ್ತಲೇ ಇದ್ದನು.

ಕೈಯಲ್ಲಿದ್ದ ದೊನ್ನೆಯನ್ನು ನೋಡುತ್ತಾ, ಇಷ್ಟೊಂದು ಪಾನಿಪುರಿಗಳಿಗೆ ಖಂಡಿತ ದೊಡ್ಡ ಮೊತ್ತದ ಹಣಕನಿಷ್ಠ ಹತ್ತಾರು ರೂಪಾಯಿಗಳಾಗಬಹುದು ಎಂದು ರಘು ಅಂದುಕೊಂಡನು. ಆದರೆ ತಂದೆ ಜೇಬಿನಿಂದ ಒಂದು ಹೊಸ ಎರಡು ರೂಪಾಯಿಯ ನೋಟನ್ನು ತೆಗೆದು ಆ ಪಾನಿಪುರಿ ಅಣ್ಣನಿಗೆ ನೀಡಿ, ಉಳಿದ ಚಿಲ್ಲರೆಯನ್ನು ಜೇಬಿಗಿಳಿಸಿಕೊಂಡರು.

ಇಂದು, ಆ ಕಾಲೇಜು ಮಕ್ಕಳು ಯಾವುದೇ ಚಿಂತೆಯಿಲ್ಲದೆ ಪಾನಿಪುರಿ ತಿನ್ನುವುದನ್ನು ನೋಡುತ್ತಾ ನಿಂತಿದ್ದ ರಘುವಿನ ತುಟಿಗಳ ಮೇಲೆ ಸಣ್ಣದೊಂದು ಮಂದಹಾಸ ಮೂಡಿತು.

ಒಂದು ಕ್ಷಣ ಅವನು ಮತ್ತೆ ಒಂಬತ್ತು ವರ್ಷದ ಬಾಲಕನಾಗಿದ್ದಸ್ಕೂಟರ್‌ನಲ್ಲಿ ತಂದೆಯ ಸೊಂಟವನ್ನು ಅಪ್ಪಿ ಹಿಡಿದು, ಸಂಜೆಯ ತಣ್ಣನೆಯ ಗಾಳಿಯನ್ನು ಆಸ್ವಾದಿಸುತ್ತಾ, ಹೊಟ್ಟೆ ತುಂಬಾ ಪಾನಿಪುರಿ ತಿಂದ ನೆಮ್ಮದಿಯಲ್ಲಿ ತೇಲುತ್ತಿದ್ದ.

ಕಾಲ ಎಷ್ಟೇ ಬದಲಾಗಿದ್ದರೂ, ಅಂದು ತಂದೆ ಕೊಡಿಸಿದ ಆ ಔತಣ ಅವನ ಮನಸ್ಸಿನಲ್ಲಿ ಎಂದಿಗೂ ಚಿಕ್ಕದಾಗಲೇ ಇಲ್ಲ.

- ಶ್ರೀಕಾಂತ್ ಶ್ರೀನಿವಾಸ್

ಹೀಗೊಂದು ಹಳೆಯ ಜೀವಹಳಿ

> 1858ರಿಂದ 1954ರವರೆಗೆ, ಹೆಚ್ಚು ಕಮ್ಮಿ ನೂರು ವರ್ಷ ವಿಯೆಟ್ನಾಂ ದೇಶ –ಫ್ರೆಂಚರ ಕೈಯಲ್ಲಿತ್ತು. 1902ರಲ್ಲಿ, ಅಂದರೆ ಇಂದಿಗೆ ಸುಮಾರು 125 ವರ್ಷಗಳ ಹಿಂದೆ ಒಂದು ರೈಲು ಮಾರ್ಗವನ್ನು ನಿರ್ಮಿಸಲಾಗಿತ್ತು. ಸಾಮಾನ್ಯವಾಗಿ ನಾವು ಪಟ್ಟಣ ಅಥವಾ ನಗರ ಹತ್ತಿರ ಬರುತ್ತಿದ್ದಂತೆ ಎದುರು ಬದುರು ಬರುವ ರೈಲು ಸುಗಮವಾಗಿ ಹಾದು ಹೋಗಲು ಬದಿಬದಿಯಲ್ಲಿಯೇ ನಿರ್ಮಿಸಿರುವ ಎರಡು ರೈಲು ಮಾರ್ಗವನ್ನು (ಎರಡು ಜೊತೆ ಹಳಿ) ಕಾಣುತ್ತೇವೆ.

ವಿದೇಶವಾಸಿ

ಅದಕ್ಕೆ ಟ್ರೇನ್ ಸ್ಟ್ರೀಟ್ ಎಂದು ಯಾಕೆ ಹೆಸರಿಟ್ಟರೋ ಗೊತ್ತಿಲ್ಲ. ಕನ್ನಡದಲ್ಲಿ ಅದನ್ನು ಅನುವಾದಿಸಿದರೆ ರೈಲು ರಸ್ತೆ ಎಂದಾಗುತ್ತದೆ. ಕಾಲು ದಾರಿ, ಕಾರು ದಾರಿ, ಲಾರಿ ದಾರಿ ಅಂದರೆ ಸರಿ. ಬೇಡ, ಯಾವುದಾದರೂ ಪುಣ್ಯಾತ್ಮರ, ಪಾಪಿಷ್ಟರ ಹೆಸರಿಟ್ಟ ರಸ್ತೆಯಾದರೂ ಸರಿ. ಆದರೆ ರೈಲು ದಾರಿ ಅಥವಾ ರೈಲು ರಸ್ತೆ ಅಂದರೆ...!? ನಾನು ಮೊದಲ ಬಾರಿ ವಿಯೆಟ್ನಾಂ ರಾಜಧಾನಿ ಹನೋಯಿ ನಗರಕ್ಕೆ ಹೋಗುವವರೆಗೂ ಇದೊಂದು ಪ್ರಶ್ನೆ ಇತ್ತು. ಯಾಕೆಂದರೆ ಟ್ರೇನ್ ಸ್ಟ್ರೀಟ್ ಇರುವುದು ಅಲ್ಲಿಯೇ.

ಪ್ರಪಂಚದ ಯಾವ ಮೂಲೆಯಲ್ಲಿಯೂ ಈ ರೀತಿಯ ಹೆಸರಿರುವ ರಸ್ತೆ ಇದ್ದದ್ದು ನನ್ನ ಗಮನಕ್ಕಂತೂ ಬರಲಿಲ್ಲ. ಹುಡುಕಿದಾಗ, ಥೈಲ್ಯಾಂಡ್‌ನಲ್ಲಿ ಮೇಕ್ಲಾಂಗ್ ರೇಲ್ವೆ ಇದಕ್ಕೆ ಹತ್ತಿರವಾಗಿದೆ ಎಂದು ತಿಳಿದು ಬಂತಾದರೂ, ಅದಕ್ಕೂ ಇದಕ್ಕೂ ವ್ಯತ್ಯಾಸವಿದೆ ಎನ್ನುವುದೂ ಗೊತ್ತಾಯಿತು. ಅಲ್ಲಿ ರೈಲ್ವೆ ರಸ್ತೆ ಎಂಬ ಹೆಸರಂತೂ ಇಲ್ಲ. ಹನೋಯಿಗೆ ಮಾತ್ರ ಅದು ಸೀಮಿತವಾಗಿರುವುದು ಯಾಕೆ? ಹನೋಯಿಯ ಓಲ್ಡ್ ಕ್ವಾರ್ಟರ್‌ನಲ್ಲಿರುವ ಟ್ರೇನ್ ಸ್ಟ್ರೀಟ್‌ಗೆ ಭೇಟಿ ಕೊಟ್ಟಾಗ ಆ ಗೊಂದಲಕ್ಕೆ ಪರಿಹಾರ ಸಿಕ್ಕಿತು.

ಸಾಮಾನ್ಯವಾಗಿ ರೈಲು ಹಳಿಯ ಹತ್ತಾರು ಮೀಟರ್ ಅಕ್ಕಪಕ್ಕದಲ್ಲಿ ಯಾವುದೇ ರೀತಿಯ ವಸತಿ, ವ್ಯಾಪಾರ, ವಹಿವಾಟುಗಳಿಗೆ ಅನುಮತಿ ಇರುವುದಿಲ್ಲ. ಬಹಳ ಹಳೆಯ ಕೆಲವು ರೈಲು ಹಳಿಗಳ ಬದಿಯಲ್ಲಿದ್ದ ಗುಡಿಸಲು, ಇಮಾರತುಗಳನ್ನೂ ಇತ್ತೀಚಿನ ದಿನಗಳಲ್ಲಿ ಎತ್ತಂಗಡಿ ಮಾಡಿಸುತ್ತಿದ್ದಾರೆ.

ಸುರಕ್ಷತೆಯ ದೃಷ್ಟಿಯಿಂದ ಅದು ಸಹಜವೂ, ಅವಶ್ಯವೂ ಹೌದು. ಸುರಕ್ಷತೆಯ ಕಾರಣಕ್ಕೆ ಹಳಿಯ ಬದಿಯಲ್ಲಿ ಬೇಲಿ ಹಾಕಿರುವುದನ್ನೂ, ಗೇಟು ಕೂರಿಸಿರುವುದನ್ನೂ ನಾವು ನೋಡುತ್ತೇವೆ. ಆದರೂ ರೈಲಿಗೆ ಸಿಕ್ಕು ಹಸು, ನಾಯಿ ಇತ್ಯಾದಿ ಪ್ರಾಣಿಗಳು ಸತ್ತ ವಿಷಯ (ಕೆಲವೊಮ್ಮೆ ಮನುಷ್ಯರು ಸತ್ತ ವಿಷಯವನ್ನೂ) ಕೇಳುತ್ತಲೇ ಇರುತ್ತೇವೆ. ಅಂಥದ್ದರಲ್ಲಿ, ಪ್ರವಾಹದ ಹೊತ್ತಿಗೆ ಬರಡು ಹಳ್ಳಕ್ಕೆ ನೀರು ನುಗ್ಗಿ ಬರುವಂತೆ, ರೈಲು ಬರುವ ಹೊತ್ತಿಗೆ ಹಳಿಯ ಬದಿಗೆ ಜನ ನುಗ್ಗಿ ಬರುತ್ತಾರೆ ಎಂದರೆ ನೀವು ನಂಬಲೇಬೇಕು.

1858ರಿಂದ 1954ರವರೆಗೆ, ಹೆಚ್ಚು ಕಮ್ಮಿ ನೂರು ವರ್ಷ ವಿಯೆಟ್ನಾಂ ದೇಶ –ಫ್ರೆಂಚರ ಕೈಯಲ್ಲಿತ್ತು. 1902ರಲ್ಲಿ, ಅಂದರೆ ಇಂದಿಗೆ ಸುಮಾರು 125 ವರ್ಷಗಳ ಹಿಂದೆ ಒಂದು ರೈಲು ಮಾರ್ಗವನ್ನು ನಿರ್ಮಿಸಲಾಗಿತ್ತು. ಸಾಮಾನ್ಯವಾಗಿ ನಾವು ಪಟ್ಟಣ ಅಥವಾ ನಗರ ಹತ್ತಿರ ಬರುತ್ತಿದ್ದಂತೆ ಎದುರು ಬದುರು ಬರುವ ರೈಲು ಸುಗಮವಾಗಿ ಹಾದು ಹೋಗಲು ಬದಿಬದಿಯಲ್ಲಿಯೇ ನಿರ್ಮಿಸಿರುವ ಎರಡು ರೈಲು ಮಾರ್ಗವನ್ನು (ಎರಡು ಜೊತೆ ಹಳಿ) ಕಾಣುತ್ತೇವೆ. ಆದರೆ ಹನೋಯಿ ನಗರದ ಹೃದಯ ಭಾಗವನ್ನು ಸೀಳಿಕೊಂಡು ಹೋಗುವ ಈ ರೈಲ್ವೆ ಹಳಿ ಅಂದಿನಿಂದ ಇಂದಿನವರೆಗೆ ಒಬ್ಬಂಟಿಯೇ ಆಗಿದ್ದರೂ ಸದಾ ಜನರಿಂದ ಗಿಜಿಗುಡುವ ಜೀವಹಳಿಯೂ ಆಗಿದೆ.

ಸಾಮಾನ್ಯವಾಗಿ ಬೈಪಾಸ್ ರಸ್ತೆಯಾಗಲಿ, ಬೈಪಾಸ್ ರೈಲ್ವೆಯಾಗಲಿ ಊರಿನಿಂದ ಹತ್ತಾರು ಕಿಲೋ ಮೀಟರ್ ಹೊರಗಡೆಯಿಂದ ಹಾದು ಹೋಗುತ್ತದೆ. ಆದರೆ ಹನೋಯಿಯ ಈ ಬೈಪಾಸ್, ನಗರದ ಜನನಿಬಿಡ ಪ್ರದೇಶವನ್ನೇ ಸೀಳಿಕೊಂಡು ಹೋಗುತ್ತದೆ. ಅಷ್ಟೇ ಆದರೂ ವಿಶೇಷವೇನೂ ಆಗಿರುತ್ತಿರಲಿಲ್ಲ. ಎಷ್ಟೋ ಕಡೆ ನಗರದ ಮಧ್ಯದಲ್ಲಿ ರೈಲು ಹಳಿಗಳು ಸ್ಲೀಪರ್‌ಗಳ ಮೇಲೆ ಶವವಾಗಿ ಬಿದ್ದಿರುವುದನ್ನು ನಾವು ಇಂದಿಗೂ ಕಾಣುತ್ತೇವೆ. ಆದರೆ ಈ ಹಳಿಯ ವಿಶೇಷತೆ ಎಂದರೆ, ಇದು ಬೆಳಗ್ಗೆ ಏಳು ಗಂಟೆಯಿಂದ ರಾತ್ರಿ ಹನ್ನೊಂದು ಗಂಟೆಯವರೆಗೂ ಜನರಿಂದ ತುಂಬಿರುತ್ತದೆ. ಜತೆಗೆ ರೈಲು ಸಂಚಾರವೂ ನಡೆಯುತ್ತಿರುತ್ತದೆ.

ಏನಿಲ್ಲವೆಂದರೂ ಪ್ರತಿನಿತ್ಯ ಆರು-ಏಳು ರೈಲು ಹನೋಯಿಯಿಂದ ಉತ್ತರಾಭಿಮುಖವಾಗಿ ಈ ಹಳಿಯ ಮೇಲೆ ಚಲಿಸುತ್ತದೆ. ಈ ಹಳಿಯ ಅಕ್ಕಪಕ್ಕದಲ್ಲಿರುವ ಕಟ್ಟಡಗಳನ್ನು ಆ ಕಾಲದಲ್ಲಿ ರೈಲ್ವೆ ಕಾರ್ಮಿಕರು ಮತ್ತು ಅವರ ಕುಟುಂಬದವರು ನೆಲೆಸಲು ಕಟ್ಟಲಾಗಿತ್ತು. ಸುಮಾರು ಇನ್ನೂರೈವತ್ತು ಮುನ್ನೂರು ಮೀಟರ್ ಹಳಿಯ ಅಕ್ಕಪಕ್ಕದಲ್ಲಿರುವ ಕಟ್ಟಡಗಳನ್ನು ಸ್ವಲ್ಪ ಗಮನಹರಿಸಿ ನೋಡಿದರೆ ಇದು ಸಾಮೂಹಿಕ ವಸತಿಗಾಗಿ ನಿರ್ಮಿಸಲಾದ ಕಟ್ಟಡ ಎಂದು ತಿಳಿಯುತ್ತದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಈ ಪ್ರದೇಶವೇ ವ್ಯಾಪಕ ಮನ್ನಣೆ ಗಳಿಸಿ, ವ್ಯಾಪಾರಕ್ಕೆ ಅನುಕೂಲಕರವಾಗಿರುವ, ಪ್ರವಾಸಿಗರನ್ನು ಸೆಳೆಯುವ ಆಕರ್ಷಣೆಯ ತಾಣವಾಗಿ ಮಾರ್ಪಟ್ಟಿದೆ.

ಹಳಿಯ ಎರಡೂ ಕಡೆಗಳಲ್ಲಿ ಹಣ್ಣಿನ ರಸ ಮಾಡುವ ಅಂಗಡಿಗಳು, ಟೀ-ಕಾಫಿ ಮಾರುವ ಕೆಫೆಗಳು ನೆನಪಿನ ಕಾಣಿಕೆಗಳನ್ನು ಮಾರುವ ಅಂಗಡಿಗಳು, ಬಟ್ಟೆ ಹಾಗೂ ಇನ್ನಿತರ ಸಣ್ಣ-ಪುಟ್ಟ ವಸ್ತುಗಳನ್ನು ಮಾರುವ ಅಂಗಡಿಗಳಿವೆ. ಆದರೆ ಇಲ್ಲಿರುವ ಕೆ-ಗಳಲ್ಲಿ ಪಾನೀಯದ ದರ ಬರೆದ ಫಲಕ ಕಾಣುವುದಿಲ್ಲ.

ಅಂಗಡಿಯಲ್ಲಿ ಸಾಮಾನಿನ ರೇಟು ಬರೆದ ಬೋರ್ಡು ಕಂಡುಬರುವುದಿಲ್ಲ, ಅಲ್ಲಿ ಹೆಚ್ಚಾಗಿ ಕಾಣುವುದು ರೈಲು ಹಾದು ಹೋಗುವ ಸಮಯ ಬರೆದಿಟ್ಟ ಫಲಕಗಳು. ಹಳಿಯ ಬದಿಯಲ್ಲಿನ ಅಂಗಡಿಗಳು ಎಷ್ಟು ಹತ್ತಿರದಲ್ಲಿವೆ ಎಂದರೆ, ರೈಲಿಗೆ ಕಿಟಕಿಗಳಿದ್ದು, ಕೈ ಹೊರಗೆ ಚಾಚುವಂತಿದ್ದರೆ, ಅಂಗಡಿಯ ಛಾವಣಿಗೆ ತಾಗುತ್ತಿತ್ತು. ಈ ಪ್ರದೇಶದಲ್ಲಿ ಕೆಫೆಗಳದ್ದೇ ಕಾರುಬಾರು ಜೋರು. ವಿಚಿತ್ರ ಎನಿಸಿದರೂ ವಿಶೇಷ ವಾಸ್ತವ ಇಲ್ಲಿದೆ. ಅದೆಷ್ಟೋ ಜನ ದಿನವಿಡೀ ಈ ಹಳಿಯ ಮೇಲೆ ಓಡಾಡಿ ಕೊಂಡೇ ವ್ಯಾಪಾರ ಮಾಡುತ್ತಿರುತ್ತಾರೆ.

ಕೆಫೆಯವರು ಹಳಿಯ ಪಕ್ಕದಲ್ಲಿಯೇ ಟೇಬಲ, ಕುರ್ಚಿ ಹಾಕಿ ಪಾನೀಯಗಳನ್ನು ಸರಬರಾಜು ಮಾಡುತ್ತಿರುತ್ತಾರೆ. ಏಕೆಂದರೆ, ಹಳಿಗೂ ಮತ್ತು ಅವರ ಕೆಫೆಗೂ ನಡುವಿನ ಅಂತರ ಬಹಳ ಕಡಿಮೆ. ಅನೇಕ ಕೆಫೆಗಳಲ್ಲಿ ಒಳಗಡೆ ಒಂದು ಟೇಬಲ್ ಹಾಕುವಷ್ಟು ಜಾಗವಿಲ್ಲ. ಅವರಿಗೆ ಇರುವುದು ಪಾನೀಯ ತಯಾರಿಸಲು ಬೇಕಾಗುವಷ್ಟು ಜಾಗ ಮಾತ್ರ. ಆದ್ದರಿಂದ ಟೇಬಲ್ ಮತ್ತು ಕುರ್ಚಿ ಹಳಿಗೆ ತಾಗಿಕೊಂಡೇ ಇದ್ದ ಹಾಗಿರುತ್ತದೆ. ಹಾಗಾದರೆ ಇಲ್ಲಿ ಅಪಘಾತಗಳೇ ಆಗಿಲ್ಲವೇ? ಅವಘಡಗಳು ಘಟಿಸಲಿಲ್ಲವೇ? ಒಂದೆರಡು ಘಟನೆಗಳು ಆಗಿದ್ದಿದೆ. ಸೆಲ್ಫಿ ಹುಚ್ಚಿನಿಂದ ರೈಲು ಬರುವಾಗ ಹಳಿಗೆ ಜಿಗಿದದ್ದಿದೆ. ಆ ಸಂದರ್ಭದಲ್ಲಿ ಚಾಲಕ ರೈಲು ನಿಲ್ಲಿಸಿದ್ದಿದೆ.

ಇನ್ನು ಕೆಲವೊಮ್ಮೆ ರೈಲಿಗೆ ತೀರ ಹತ್ತಿರವಾಗಿ ಫೋಟೋ ತೆಗೆಸಿಕೊಳ್ಳುವ ಹುಮ್ಮಸ್ಸಿನಿಂದ ಮೈ ಕೈ ಉಜ್ಜಿಸಿಕೊಂಡಿದ್ದಿದೆ. ಇಂತಹ ಕೆಲವು ಕಾರಣದಿಂದ ಈ ಮಾರ್ಗದಲ್ಲಿ ರೈಲು ಸಂಚಾರ ನಿಲ್ಲಿಸಬೇಕು ಎಂದು ಅಲ್ಲಿಯ ಪ್ರಶಾಸನ ವಿಚಾರ ಮಾಡಿದ್ದಿದೆ. 2019ರಿಂದ ಸುಮಾರು ನಾಲ್ಕು ವರ್ಷ ಈ ಸಂಚಾರಕ್ಕೆ ನಿರ್ಬಂಧ ಹೇರಿದ್ದೂ ಇದೆ. ಆದರೆ ಅಲ್ಲಿಯ ವ್ಯಾಪಾರಸ್ಥರ ಬೇಡಿಕೆ ಹೆಚ್ಚಾದಾಗ ಪುನಃ ಅನುಮತಿ ನೀಡಿ ಸಂಚಾರ ಆರಂಭಗೊಂಡಿದೆ. ದಿನಕ್ಕೆ ಆರು ಏಳು ರೈಲು ಬರುತ್ತದೆ ಎಂದಿದ್ದನಲ್ಲ, ಅದಕ್ಕೆ ಸರಿಯಾಗಿ ಐದು ನಿಮಿಷ ಮೊದಲು ಹಳಿಗೆ ಅಂಟಿಕೊಂಡಂತಿದ್ದ ಟೇಬಲ್ ಮತ್ತು ಕುರ್ಚಿಯನ್ನು ಒಂದೋ-ಎರಡೋ ಅಡಿಯಷ್ಟು ಹಿಂದಕ್ಕೆ ಜರುಗಿಸಿ, ರೈಲು ಹಾದುಹೋಗಲು ಜಾಗ ಮಾಡಿ ಕೊಡುತ್ತಾರೆ.

ಮದಗಜದಂತೆ ನಿಧಾನವಾಗಿ ಬರುವ ರೈಲು ಮುಂದೆ ಸಾಗಿ ಹೋಗುವವರೆಗೂ ಹೀಗೆಯೇ ಇರುತ್ತದೆ. ರೈಲು ಹೋದ ಬಳಿಕ ಪುನಃ ಟೇಬಲ್ ಮತ್ತು ಕುರ್ಚಿಗಳು ಹಳಿಗೆ ಅಂಟಿಕೊಂಡು ಕುಳಿತುಕೊಳ್ಳುತ್ತವೆ. ಮತ್ತೊಂದು ರೈಲು ಬರುವಾಗ ಮತ್ತೆ ಇದೇ ಪ್ರಕ್ರಿಯೆ ಜರಗುತ್ತದೆ. ಮತ್ತೆ ಮತ್ತೆ ಮರುಕಳಿಸುವ ಈ ಕ್ರಿಯೆಗೆ ಇಲ್ಲಿ ಯಾರೂ ಮರುಗುವುದಿಲ್ಲ. ಜನರಿಗೆ ಇದೊಂದು ಪ್ರವಾಸಿ ತಾಣ. ಸಣ್ಣ-ಪುಟ್ಟ ಖರೀದಿಯ ಸ್ಥಳವೂ ಹೌದು, ಚಹಾ ಬಿಯರ್ ಹೀರಿ ತೃಷೆ ತಣಿಸಿಕೊಳ್ಳುವ ತಾಣವೂ ಹೌದು. ಅದೆಲ್ಲ ಒಂದು ಕಡೆಯಾದರೆ, ಇನ್ನೊಂದು ಕಡೆ ಇದು ನೂರಾರು ಸ್ಥಳೀಯ ನಿವಾಸಿಗಳಿಗೆ ಜೀವನಾಡಿ.

ಬದುಕುವ ದಾರಿ, ಅಲ್ಲ, ಬದುಕುವ ಹಳಿ. ಇಲ್ಲಿಯ ವಿಶೇಷತೆ ಏನೆಂದರೆ ರೈಲು ಬರುವ ಹೊತ್ತಿಗೆ ಮಾತ್ರ ಬರುವ ಪ್ರವಾಸಿಗರನ್ನು ಅಲ್ಲಿಯ ಅಂಗಡಿಯವರು ಅಥವಾ ಇತರೆ ವ್ಯಾಪಾರ ಮಾಡುವವರು ಸುಲಿಯುವುದಿಲ್ಲ. ಸಿಕ್ಕಿದ್ದೇ ಶಿವ ಎಂದು ಲೂಟಿಗೆ ಇಳಿಯುವುದಿಲ್ಲ. ನನ್ನದೇ ಒಂದು ಅನುಭವ ಹೇಳುವುದಾದರೆ, ಇತ್ತೀಚೆಗೆ ನಾನು ಟ್ರೈನ್ ಸ್ಟ್ರೀಟ್‌ಗೆ ಹೋದಾಗ, ರೈಲು ಬರಲು ಇನ್ನೂ ಹತ್ತು-ಹದಿನೈದು ನಿಮಿಷ ಬಾಕಿ ಇದ್ದದ್ದರಿಂದ, ಜ್ಯೂಸ್ ಕುಡಿಯುತ್ತಾ ಕುಳಿತುಕೊಂಡಿದ್ದೆ. ಒಂದು ಪ್ಲಾಸ್ಟಿಕ್ ಬಾಸ್ಕೆಟ್ ನಂತಹ ಚೀಲ, ಎರಡು ಬಟ್ಟೆಯ ತುಂಡು ಮತ್ತು ಒಂದೆರಡು ಸಣ್ಣ ಡಬ್ಬ ಹಿಡಿದುಕೊಂಡ ವ್ಯಕ್ತಿಯೊಬ್ಬ ನನ್ನ ಬಳಿ ಬಂದು ತಣ್ಣನೆಯ ನಗು ಬೀರಿದ. ಸ್ಥಳೀಯ ಭಾಷೆಯಲ್ಲಿ ಸಣ್ಣ ಸ್ವರದಲ್ಲಿ ಏನೋ ಗುನುಗಿದ. ಬೇರೆ ಯಾರಾದರೂ ಆಗಿದ್ದರೆ ನಾನು ಅಷ್ಟು ಲಕ್ಷ್ಯ ಕೊಡುತ್ತಿರಲಿಲ್ಲವೇನೋ. ಏಕೆಂದರೆ ಇಂತಹ ಪ್ರವಾಸಿ ತಾಣದಲ್ಲಿ ಸಾಕಷ್ಟು ಜನ ತಮ್ಮ ವಸ್ತುಗಳನ್ನು ಮಾರಾಟ ಮಾಡಲು ಬಂದು ಹೋಗುತ್ತಿರುತ್ತಾರೆ. ತಮ್ಮ ಬಳಿ ಇರುವುದನ್ನು ಮಾರಲು, ಬೇಕಾದ-ಬೇಡವಾದ ಎಲ್ಲ ತಂತ್ರಗಳನ್ನೂ ಬಳಸುತ್ತಾರೆ.



ಅಷ್ಟಕ್ಕೂ ಅವಶ್ಯಕತೆ ಇಲ್ಲದ ವಸ್ತುವನ್ನು ಖರೀದಿಸುವವನು ನಾನಲ್ಲ. ಆದರೆ ಆತ ನನ್ನ ಹತ್ತಿರ ಬಂದು ನಿಂತ ರೀತಿ, ಅವನ ಹಾವ-ಭಾವ, ನಾನು ಅವನನ್ನೇ ದಿಟ್ಟಿಸುವಂತೆ ಮಾಡಿತು. ಅವನ ಭಾಷೆ ಒಂದಕ್ಷರವೂ ಅರ್ಥವಾಗಲಿಲ್ಲ, ನಾನು ಜ್ಯೂಸ್ ಅಂಗಡಿಯವನನ್ನು ಕರೆದು ಆತ ಏನು ಹೇಳುತ್ತಿದ್ದಾನೆ? ಎಂದು ಕೇಳಿದೆ. ಆತ ನನ್ನ ಶೂ ಪಾಲಿಶ್ ಮಾಡಿ ಕೊಡುವುದಾಗಿ ಕೇಳುತ್ತಿದ್ದಾನೆಂದು ಹೇಳಿದ.

ನನ್ನ ಕಾಲಿನ ಕಡೆ ದೃಷ್ಟಿ ಹಾಯಿಸಿದೆ. ನಾನು ಹಾಕಿಕೊಂಡಿದ್ದ ಬೂಟು ಬಟ್ಟೆಯದ್ದಾದ್ದರಿಂದ ಅಷ್ಟು ಹೊಲಸಾದಂತೆ ಕಾಣುತ್ತಿರಲಿಲ್ಲ. ನಾನು ತೊಟ್ಟ ಬೂಟು ಚರ್ಮದಲ್ಲ, ಅಲ್ಲದೆ ನಾನು ಯಾವುದೇ ಸಭೆಗೋ, ಸಮಾರಂಭಕ್ಕೋ, ಇನ್ಯಾವುದೋ ಕಾರ್ಯಕ್ರಮಕ್ಕೋ ಹೋಗುತ್ತಿಲ್ಲವಾದ್ದರಿಂದ ಬೇಡ ಎಂದೆ. ಆದರೂ ಆತ ಅಲ್ಲಿಯೇ ನಿಂತು ನನ್ನನ್ನೇ ನೋಡುತ್ತಿದ್ದ. ಅವನಿಗೆ ಬೇಜಾರು ಮಾಡಲು ಮನಸಾಗಲಿಲ್ಲ. ಎಷ್ಟು? ಎಂದು ಕೇಳಿದೆ. ಹತ್ತು ಸಾವಿರ ವಿಯೆಟ್ನಾಂ ಡಾಂಗ್ ಅಂದರೆ, ಭಾರತದ ಮೂವತ್ತೈದು ರೂಪಾಯಿ! ಅದರಲ್ಲಿ ಮತ್ತೆ ಚೌಕಾಸಿ ಮಾಡಬೇಕು ಎಂದು ಅನ್ನಿಸಲೇ ಇಲ್ಲ.

ಐದು ನಿಮಿಷದೊಳಗೆ ಮುಗಿಸಿಕೊಡುತ್ತೀಯ? ಎಂದು ಕೇಳಿದೆ. ಆಯಿತು ಎಂಬಂತೆ ತಲೆ ಆಡಿಸಿದ. ಅಂಗಡಿ ಎಲ್ಲಿದೆ? ಎಂದು ಕೇಳಿದೆ. ಅಂಗಡಿ ಇಲ್ಲ, ಇಲ್ಲಿಯೇ ಮಾಡಿಕೊಡುತ್ತೇನೆ ಅಂದ. ಎಲ್ಲಿಯಾದರೂ ನನ್ನ ಬೂಟನ್ನು ಈತ ತೆಗೆದುಕೊಂಡು ಓಡಿ ಹೋದರೆ ಏನು ಮಾಡುವುದು? ಎಂಬ ಸಣ್ಣ ಅಳುಕಿನೊಂದಿಗೆ ಬೂಟು ಬಿಚ್ಚಿಕೊಟ್ಟೆ. ಆತ ಹಳಿಯ ಮಧ್ಯದಲ್ಲಿ ಹೋಗಿ ಕುಳಿತು ಕೆಲಸ ಆರಂಭಿಸಿದ. ಒಬ್ಬರ ಭಾಷೆ ಇನ್ನೊಬ್ಬರಿಗೆ ಅರ್ಥವಾಗದ ಸಂದರ್ಭದಲ್ಲಿ ನಮಗೆ ಮಧ್ಯವರ್ತಿ ಯಾಗಿದ್ದವ ಅದೇ ಜ್ಯೂಸ್ ಅಂಗಡಿಯವ.

ಇರಲಿ, ನಾನು ಕೂಡ ಶಾಲಾ ದಿನಗಳಲ್ಲಿ ಬಿಳಿಯ ಕ್ಯಾನ್ವಾಸ್ ಬೂಟಿಗೆ ಬಿಳಿಯ ಪಾಲಿಶ್ ಹಚ್ಚಿದ್ದು ನೆನಪಿತ್ತು. ಇತ್ತೀಚಿನ ವರ್ಷಗಳಲ್ಲಿ ಬಟ್ಟೆಯ ಬೂಟುಗಳನ್ನು ಸ್ವಚ್ಛಗೊಳಿಸಿದ್ದು ತೀರಾ ಕಮ್ಮಿ. ಈತ ಒಂದು ಬಾಸ್ಕೆಟ್, ಎರಡು ಸಣ್ಣ ಡಬ್ಬ ಇಟ್ಟುಕೊಂಡು ಹೇಗೆ ಶೂ ಸ್ವಚ್ಛ ಮಾಡಿಕೊಡುತ್ತಾನೆ? ಎಂದು ಕುತೂಹಲದಿಂದ ನೋಡುತ್ತಾ ಕುಳಿತೆ. ಮೂರರಿಂದ ನಾಲ್ಕು ನಿಮಿಷ ಆಗಿರಬಹುದು, ನನ್ನ ಬೂಟು ಹೊಸದಾಗಿ ಕೊಳ್ಳುವಾಗ ಹೇಗಿತ್ತೋ, ಅದೇ ರೀತಿ ಮಿಂಚುತ್ತಿತ್ತು.

ನನ್ನ ಬೂಟಿನಲ್ಲಿ ಅಷ್ಟು ಕೊಳೆ ಇತ್ತು ಎಂದು ನನಗೆ ಅನಿಸಿರಲಿಲ್ಲ. ನಾನು ಪುನಃ ಅದನ್ನು ತೊಟ್ಟುಕೊಳ್ಳುವರೆಗೂ ಆತ ವಿಧೇಯನಾಗಿ ನನ್ನ ಮುಂದೆ ಕೈಕಟ್ಟಿ ನಿಂತುಕೊಂಡೇ ಇದ್ದ. ಅವನು ಕೇಳಿದ್ದಕ್ಕಿಂತ ಸ್ವಲ್ಪ ಹೆಚ್ಚು ಹಣವನ್ನೇ ಅವನ ಕೈಗೆ ಇಟ್ಟೆ. ಅಷ್ಟರಲ್ಲಿ ರೈಲು ಬರುವ ಸಮಯವಾಗಿತ್ತು. ಟೇಬಲ, ಕುರ್ಚಿಗಳೆಲ್ಲ ಹಿಂದೆ ಸರಿದು ರೈಲಿಗೆ ಹಾದಿ (ಹಳಿ) ಬಿಟ್ಟುಕೊಡ ಬೇಕಾಗಿತ್ತು. ಅಂಗಡಿಯವರು ಅದರಲ್ಲಿ ಮಗ್ನರಾದರು. ರೈಲು ದೊಡ್ಡದೊಂದು ಹಾರ್ನ್ ಮಾಡುತ್ತಾ, ನಿಧಾನವಾಗಿ ತನ್ನ ಪಾಡಿಗೆ ಹೊರಟುಹೋಯಿತು.

ನಾನು ಅಲ್ಲಿಂದ ಹೊರಟಾಗ ಮನಸ್ಸಿನ ತುಂಬಾ ಅನೇಕ ವಿಚಾರಗಳು ತುಂಬಿಕೊಂಡಿದ್ದವು. ನನ್ನ ಬೂಟ್ ಪಾಲಿಶ್ ಮಾಡಿದವ ದಿನಕ್ಕೆ ಎಷ್ಟು ದುಡಿಯಬಹುದು? ಮೂವತ್ತೈದು ರೂಪಾಯಿಗಾಗಿ ಎಷ್ಟು ಜನರನ್ನು ಕೇಳಬಹುದು? ಎಷ್ಟು ಜನರ ಮುಂದೆ ಕೈಕಟ್ಟಿ ನಿಲ್ಲಬಹುದು? ಎಷ್ಟು ಜನರಿಂದ ಬೇಡ ಎಂದು ಅನ್ನಿಸಿಕೊಳ್ಳಬಹುದು? ಅವನೋ ಅವನಂಥವರೋ ಒಂದು ಒಳ್ಳೆಯ ದಿನ ಎಂದರೆ ಎಷ್ಟು ಸಂಪಾದನೆ ಮಾಡಬಹುದು? ಅವನಂತೆಯೇ ಇನ್ನೂ ಎಷ್ಟು ಜನ ಇದೇ ಬೀದಿಯಲ್ಲಿ, ಅಲ್ಲ, ಹಳಿಯ ಬದಿಯಲ್ಲಿ ಬೇರೆ ಬೇರೆ ಸಣ್ಣ-ಪುಟ್ಟ ವ್ಯಾಪಾರ ಮಾಡಬಹುದು? ಆ ಕ್ಷಣದಲ್ಲಿ ನನಗೆ ಆ ಹಳಿ ಕೇವಲ ರೈಲು ಹಾದು ಹೋಗುವ ಸಾಧನವಾಗಿ ಕಾಣಲಿಲ್ಲ.

ಸ್ಥಳೀಯರ ಬದುಕಿಗೆ ಕಾಯಕಲ್ಪ ಒದಗಿಸಿಕೊಡುವ ಮಾಧ್ಯಮವಾಗಿ ಕಂಡಿತು. ಅಷ್ಟು ಜನರಿಗೆ ವರ್ಷವಿಡೀ ನಿತ್ಯದ ಬದುಕು ಕಟ್ಟಿಕೊಡುವ ವರವಾಗಿ ಕಂಡಿತು. ಅದಕ್ಕೇ ಇರಬೇಕು ರೈಲಿನ ಒಳಗಿನ ಜನ ರೈಲು ಹಾದು ಹೋಗುವಾಗ ಅಂಗಡಿಯವರ, ಪ್ರವಾಸಿಗರ ಅಥವಾ ಇಂಥ ಮಾರಾಟಗಾರರ ಕಡೆ ನಗುಮುಖದಿಂದ ಕೈಬೀಸಿದರೆ, ಅದು ಟಾಟಾ-ಬೈಬೈ ಅಲ್ಲ, ಇಂಥ ವ್ಯಾಪಾರಿಗಳಿಗೆ ಮಾಡುತ್ತಿರುವ ಆಶೀರ್ವಾದ ಎಂದೆನಿಸಿತು.

ಅಲ್ಲಿಂದ ಹೊರಡುವಾಗ ನನ್ನ ಮನಸ್ಸಿನಲ್ಲೂ ಒಂದು ವಿಷಯ ಗಟ್ಟಿ ಮಾಡಿಕೊಂಡಿದ್ದೆ. ಇನ್ನೂ ಎಷ್ಟೇ ಬಾರಿ ಹನೋಯಿಗೆ ಬಂದರೂ ಈ ಸ್ಥಳಕ್ಕೆ ಬಂದೇ ಬರುತ್ತೇನೆ. ರೈಲು ನೋಡಲು ಅಲ್ಲ, ಈ ಹಳಿಯ ಮೇಲೆ ತಮ್ಮ ಬದುಕಿನ ಭವಿಷ್ಯವನ್ನು ಕಟ್ಟಿಕೊಳ್ಳಲು ಶ್ರಮಿಸುತ್ತಿರುವ ಜನರನ್ನು ನೋಡಲು!

- ಕಿರಣ್ ಉಪಾಧ್ಯಾಯ, ಬಹ್ರೈನ್

ರೈತರಿಗೆ ಸಮರ್ಪಕ ಪರಿಹಾರಕ್ಕೆ ಆಗ್ರಹ

ಜಿಲ್ಲೆಯ ತಾಲ್ಲೂಕುಗಳನ್ನು ಬರಪೀಡಿತವೆಂದು ಘೋಷಿಸಲು ಒತ್ತಾಯಿಸಿ ಪ್ರತಿಭಟನೆ

• ಪ್ರಜೋದಯ ವರದಿ

ಹಾಸನ: ಮಳೆ ಕೊರತೆ, ಬೆಳೆಗಳಿಗೆ ವ್ಯಾಪಿಸಿರುವ ವಿವಿಧ ರೋಗಬಾಧೆ ಹಾಗೂ ನವಿಲು, ಮುಳ್ಳುಹಂದಿ ಸೇರಿದಂತೆ ಕಾಡು ಪ್ರಾಣಿಗಳ ಹಾವಳಿಯಿಂದ ಹಾಸನ ಜಿಲ್ಲೆಯ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದು, ಜಿಲ್ಲೆಯ ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳೆಂದು ಘೋಷಿಸಿ ರೈತರಿಗೆ ಸಮರ್ಪಕ ಪರಿಹಾರ ಒದಗಿಸಬೇಕು ಎಂದು ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಒತ್ತಾಯಿಸಿದರು.

ರಾಜ್ಯ ರೈತ ಸಂಘದ ವತಿಯಿಂದ ಚಿಕ್ಕಮಗಳೂರಿನ ಶ್ರೀ ಜಯಬಸವಾನಂದ ಸ್ವಾಮೀಜಿಯವರ ನೇತೃತ್ವದಲ್ಲಿ ಸೋಮವಾರ ಪ್ರತಿಭಟನೆ ನಡೆಸಿ ಅಪರ ಜಿಲ್ಲಾಧಿಕಾರಿ ಕೃಷ್ಣಮೂರ್ತಿ ಅವರನ್ನು ಭೇಟಿ ಮಾಡಿ ವಿವಿಧ ಬೇಡಿಕೆಗಳನ್ನೊಳಗೊಂಡ ಮನವಿ ಸಲ್ಲಿಸಿದ ನಂತರ ಮಾತನಾಡಿದ ಅವರು, ಜಿಲ್ಲೆಯ ಬಹುತೇಕ ತಾಲೂಕುಗಳಲ್ಲಿ ಮಳೆ ಕೊರತೆಯಿಂದ ಕೃಷಿ ಚಟುವಟಿಕೆಗಳು ತೀವ್ರವಾಗಿ ಹಿನ್ನಡೆ ಕಂಡಿವೆ. ಈಗಾಗಲೇ ಬೆಳೆಗಳಿಗೆ ವಿವಿಧ ರೋಗಗಳು ಕಾಣಿಸಿಕೊಂಡಿದ್ದು, ಮತ್ತೊಂದೆಡೆ ಕಾಡುಪ್ರಾಣಿಗಳ ಹಾವಳಿಯಿಂದ ಬೆಳೆಗಳನ್ನು ರಕ್ಷಿಸಿಕೊಳ್ಳುವುದೇ ರೈತರಿಗೆ ದೊಡ್ಡ ಸವಾಲಾಗಿದೆ. ನವಿಲು ಹಾಗೂ ಮುಳ್ಳುಹಂದಿಗಳು ಜಮೀನುಗಳಿಗೆ ನುಗ್ಗಿ ಬೆಳೆಗಳನ್ನು ನಾಶಪಡಿಸುತ್ತಿದ್ದರೂ, ರೈತರ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವಲ್ಲಿ ಸಂಬಂಧಪಟ್ಟ ಇಲಾಖೆ ವಿಫಲವಾಗಿದೆ ಎಂದು ಆರೋಪಿಸಿದರು.

ಹಾಸನ ತಾಲೂಕಿನಲ್ಲಿ ಜೋಳ, ಶುಂಠಿ, ಆಲೂಗಡ್ಡೆ, ರಾಗಿ ಸೇರಿದಂತೆ ವಿವಿಧ ತರಕಾರಿ ಬೆಳೆಗಳಿಗೆ ರೋಗಬಾಧೆ ಕಾಣಿಸಿಕೊಂಡಿದ್ದು, ಬೆಳೆ ನಷ್ಟದಿಂದ ರೈತರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಮಳೆ ಕೊರತೆ ಮತ್ತು ಕಾಡುಪ್ರಾಣಿಗಳ ಹಾವಳಿಯಿಂದ ಕೃಷಿ ಸಂಪೂರ್ಣ ಹದಗೆಟ್ಟಿರುವ ಹಿನ್ನೆಲೆಯಲ್ಲಿ ಹಾಸನ ತಾಲ್ಲೂಕನ್ನು ಬರಪೀಡಿತವೆಂದು ಘೋಷಿಸಿ ರೈತರಿಗೆ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ಚನ್ನರಾಯಪಟ್ಟಣ ತಾಲೂಕಿನಲ್ಲಿ ಕಬ್ಬು, ಜೋಳ, ಶುಂಠಿ, ರಾಗಿ ಹಾಗೂ ತೆಂಗು ಸೇರಿದಂತೆ ವಿವಿಧ ಬೆಳೆಗಳಿಗೆ ರೋಗಬಾಧೆ ಕಾಣಿಸಿಕೊಂಡಿದೆ. ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಪೂರೈಸುವ ರೈತರಿಗೆ ಸೂಕ್ತ ಬೆಲೆ ದೊರೆಯುತ್ತಿಲ್ಲ. ತಾಲ್ಲೂಕನ್ನು ಬರಪೀಡಿತವೆಂದು ಘೋಷಿಸಬೇಕು ಎಂದು ಒತ್ತಾಯಿಸಿದರು.

ಅರಸೀಕೆರೆ ತಾಲೂಕಿನಲ್ಲಿ ತೆಂಗು, ಜೋಳ, ರಾಗಿ ಹಾಗೂ ವಿವಿಧ ತರಕಾರಿ ಬೆಳೆಗಳನ್ನು ಬೆಳೆಯಲಾಗುತ್ತಿದೆ. ತೆಂಗಿನ ಮರಗಳಿಗೆ ನುಸಿ ಹಾಗೂ ಸೋರುವಿಕೆ ಸೇರಿದಂತೆ ವಿವಿಧ ರೋಗಗಳು ಕಾಣಿಸಿಕೊಂಡು ಮರಗಳು ನಾಶವಾಗುತ್ತಿವೆ. ಕೂಡಲೇ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು.

ಹೊಳೆನರಸೀಪುರ ತಾಲ್ಲೂಕಿನಲ್ಲಿ ಭತ್ತ, ಜೋಳ, ರಾಗಿ, ಕಬ್ಬು, ತೆಂಗು, ಶುಂಠಿ, ಹಣ್ಣು ಹಾಗೂ ತರಕಾರಿ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಇಲ್ಲಿಯೂ ನವಿಲು ಮತ್ತು ಮುಳ್ಳುಹಂದಿಗಳ ಹಾವಳಿ ಹೆಚ್ಚಾಗಿದ್ದು, ಬೆಳೆ ನಷ್ಟದಿಂದ ರೈತರು ಸಂಕಷ್ಟಕ್ಕೊಳಗಾಗಿದ್ದಾರೆ. ತಾಲ್ಲೂಕನ್ನು ಬರಪೀಡಿತವೆಂದು ಘೋಷಿಸಿ ಅಗತ್ಯ ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ಆಲೂರು- ಸಕಲೇಶಪುರದಲ್ಲೂ ಬೆಳೆ ನಷ್ಟವಾಗಿದೆ. ಆಲೂರು ಹಾಗೂ ಸಕಲೇಶಪುರ ತಾಲೂಕುಗಳಲ್ಲಿ ಕಾಫಿ, ಭತ್ತ, ಏಲಕ್ಕಿ, ಮೆಣಸು, ಅಡಿಕೆ, ಜೋಳ, ಶುಂಠಿ, ಹಣ್ಣು ಮತ್ತು ತರಕಾರಿ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಮಳೆ ಕೊರತೆ ಹಾಗೂ ಕಾಡುಪ್ರಾಣಿಗಳ ಹಾವಳಿಯಿಂದ ಕೃಷಿಗೆ ಹಿನ್ನಡೆಯಾಗಿದೆ. ರೈತರ ಸಮಸ್ಯೆಗಳನ್ನು ಪರಿಗಣಿಸಿ ಈ ಎರಡೂ ತಾಲೂಕುಗಳನ್ನು ಬರಪೀಡಿತವೆಂದು ಘೋಷಿಸಬೇಕು ಎಂದು ಒತ್ತಾಯಿಸಿದರು. ಜಿಲ್ಲೆಯ ಎಂಟು ತಾಲೂಕುಗಳಲ್ಲಿರುವ ಕೆರೆಗಳಿಗೆ ತುರ್ತಾಗಿ ನೀರು ತುಂಬಿಸುವ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಪ್ರತಿಭಟನೆಯಲ್ಲಿ ರೈತ ಸಂಘದ ರಾಜ್ಯ ಉಪಾಧ್ಯಕ್ಷ ಆನೆಕೆರೆ ರವಿ, ಜಿಲ್ಲಾಧ್ಯಕ್ಷ ಬಾಬು, ರಾಜ್ಯ ಸಂಚಾಲಕ ಮೊಹಮ್ಮದ್ ಸಾದಿಕ್, ಜಿಲ್ಲಾ ಕಾರ್ಯದರ್ಶಿ ವಿಠಲ್, ತಾಲ್ಲೂಕು ಅಧ್ಯಕ್ಷ ಹೆಚ್.ಆರ್.ಸಮೀವುಲ್ಲಾ, ಜಯಣ್ಣ, ತಿಮ್ಮಣ್ಣ ಸೇರಿದಂತೆ ಇನ್ನಿತರ ರೈತರು ಉಪಸ್ಥಿತರಿದ್ದರು.

ಶ್ರೀರಾಮನಿಗೆ ಸೂರ್ಯನ ಕಿರಣ ಸಿಂಚನ

ಶಿಲಾಮಯ ದೇವಾಲಯದಲ್ಲಿ ವಿಸ್ಮಯ | ನಮ್ಮ ಶಿಲ್ಪ ಶಾಸ್ತ್ರದ ಕಲೆ!

• ಪ್ರಜೋದಯ ವರದಿ



ಹಾರನಹಳ್ಳಿ: ಅರಸೀಕೆರೆ ತಾಲ್ಲೂಕು ಯಳವಾರೆ ಸಮೀಪ ಅಶೋಕ್ ಹಾರನಹಳ್ಳಿ ಅವರ ಮನೆಯ ಮುಂಭಾಗದಲ್ಲಿರುವ ಶಿಲಾಮಯ ಶ್ರೀರಾಮ ಮಂದಿರದಲ್ಲಿ ಬೆಳಿಗ್ಗೆ ಸುಮಾರು 7:15ರ ಸಮಯದಲ್ಲಿ ಅಪರೂಪದ ದೃಶ್ಯ ಕಂಡುಬಂದಿದೆ.

ಮಂದಿರದ ಗರ್ಭಗುಡಿಯಲ್ಲಿರುವ ಕಪ್ಪು ಶಿಲೆಯ ಶ್ರೀರಾಮ ಪರಿವಾರದ ವಿಗ್ರಹಗಳಲ್ಲಿ, ಮಧ್ಯದಲ್ಲಿರುವ ಶ್ರೀರಾಮಚಂದ್ರನ ಮೂರ್ತಿಯ ಮುಖದ ಮೇಲೆ ನೇರವಾಗಿ ಸೂರ್ಯರಶ್ಮಿ ಬಿದ್ದು, ವಿಗ್ರಹವು ದಿವ್ಯ ತೇಜಸ್ಸಿನಿಂದ ಬೆಳಗುತ್ತಿತ್ತು.

ಇದು ಪವಾಡವಲ್ಲ, ನಮ್ಮ ಶಾಸ್ತ್ರ!

ಇದನ್ನು ಪವಾಡ ಎಂದು ತಿಳಿಯಬಾರದು. ಇದು ನಮ್ಮ ಪೂರ್ವಜರ ಅತ್ಯುನ್ನತ ಖಗೋಳ ಶಾಸ್ತ್ರ ಮತ್ತು ಆಗಮ ಶಿಲ್ಪಶಾಸ್ತ್ರದ ಪ್ರಕಾರ ನಿರ್ಮಿಸಲಾದ ದೇವಾಲಯಗಳ ವೈಶಿಷ್ಟ್ಯ.

ಸೂರ್ಯವಂಶಿ ರಾಮ: ಶ್ರೀರಾಮ ಸೂರ್ಯವಂಶದ ರಾಜ. ಹೀಗಾಗಿ ಉದಯ ಸೂರ್ಯನ ಮೊದಲ ಕಿರಣ ರಾಮನನ್ನು ಸ್ಪರ್ಶಿಸುವಂತೆ ಗರ್ಭಗುಡಿಯ ದಿಕ್ಕು ಮತ್ತು ಬಾಗಿಲನ್ನು ಶಿಲ್ಪಿಗಳು ಲೆಕ್ಕಾಚಾರ ಹಾಕಿ ನಿರ್ಮಿಸುತ್ತಾರೆ. ಇದಕ್ಕೆ ಸೂರ್ಯಾಭಿಷೇಕ' ಎಂದು ಕರೆಯುತ್ತಾರೆ.

ಆಗಮ ಶಾಸ್ತ್ರದ ವಿನ್ಯಾಸ: ದೇವಾಲಯದಲ್ಲಿ ಗರ್ಭಗುಡಿಯ ಆಳ, ಬಾಗಿಲಿನ ಎತ್ತರ, ವಿಗ್ರಹದ ಸ್ಥಾನ ಎಲ್ಲವೂ ಸೂರ್ಯನ ಉತ್ತರಾಯಣ- ದಕ್ಷಿಣಾಯನ ಚಲನೆಗೆ ಅನುಗುಣವಾಗಿ ರುತ್ತದೆ. ಹೊಯ್ಸಳ ಕೆತ್ತನೆಯ ಹಾರನ ಹಳ್ಳಿ, ಬೇಲೂರು-ಹಳೇಬೀಡು, ದೇವಾಲಯಗಳಲ್ಲಿ ಇಂತಹ ವಿನ್ಯಾಸ ಸಾಮಾನ್ಯವಾಗಿದೆ.

ಶಿಲಾಮಯ ಶ್ರೀರಾಮ ಪರಿವಾರ: ಈ ದೇವಾಲಯದ ಇನ್ನೊಂದು ವಿಶೇಷವೆಂದರೆ ಇಲ್ಲಿರುವ ಶ್ರೀರಾಮ ಪರಿವಾರ. ಮಧ್ಯದಲ್ಲಿ ಶ್ರೀರಾಮ, ಒಂದು ಬದಿಯಲ್ಲಿ ಸೀತಾಮಾತೆ, ಇನ್ನೊಂದು ಬದಿಯಲ್ಲಿ ಲಕ್ಷ್ಮಣ ಮತ್ತು ಪಾದದ ಬಳಿ ಭಕ್ತ ಹನುಮಂತನ ಪುಟ್ಟ ವಿಗ್ರಹವಿದೆ. ಮೂರೂ ವಿಗ್ರಹಗಳು ಕಪ್ಪುಶಿಲೆಯಲ್ಲಿ, ಹಿಂಭಾಗದಲ್ಲಿ ಸುಂದರ ಪ್ರಭಾವಳಿಯೊಂದಿಗೆ ಸುಂದರವಾಗಿ ಹಸನ್ಮುಖಿಯಾಗಿ ಕಾಣುತ್ತದೆ. ಇದು ಸಾಂಸ್ಕೃತಿಕ ಪರಂಪರೆಗೆ ಸಾಕ್ಷಿಯಾಗಿದೆ.

ಈ ಶಿಲಾಮಯ ದೇವಾಲಯವು ಶೃಂಗೇರಿ ಶಾರದಾ ಪೀಠದ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳ ಅಮೃತ ಹಸ್ತದಿಂದ ಲೋಕಾರ್ಪಣೆ ಆಗಿದ್ದು, ಗುರುಗಳ ಶಕ್ತಿ ಮತ್ತು ಆಕರ್ಷಣೆ ಈ ದೇವಾಲಯದಲ್ಲಿದೆ.

ಒಟ್ಟಿನಲ್ಲಿ, ಕಂಡುಬಂದ ಸೂರ್ಯ ರಶ್ಮಿಯ ಸಿಂಚನವು ನಮ್ಮ ದೇವಾಲಯ ನಿರ್ಮಾಣ ಕಲೆಯ ವೈಜ್ಞಾನಿಕತೆಗೆ ಹಿಡಿದ ಕೈಗನ್ನಡಿಯಾಗಿದೆ.

ಸಕಲೇಶಪುರದಲ್ಲಿ ಶಾಸಕ ಸಿಮೆಂಟ್ ಮಂಜು ಚಾಲನೆ

ರಾಮಧೂತ ಹಿಂದು ಮಹಾಗಣಪತಿ ವಿಸರ್ಜನೆ

• ಪ್ರಜೋದಯ ವರದಿ

ಸಕಲೇಶಪುರ: ಪಟ್ಟಣದ ಗುರುವೇಗೌಡ ಕಲ್ಯಾಣ ಮಂಟಪದ ಪಕ್ಕದ ಆವರಣದಲ್ಲಿ ಪ್ರತಿಷ್ಠಾಪಿಸಿದ್ದ ರಾಮಧೂತ ಹಿಂದು ಮಹಾಗಣಪತಿಯನ್ನು ಭಾನುವಾರ ರಾತ್ರಿ ಅದ್ದೂರಿಯಾಗಿ ಹೇಮಾವತಿ ನದಿಯಲ್ಲಿ ವಿಸರ್ಜಿಸಲಾಯಿತು.

ಭಾನುವಾರ ಗಣಪತಿ ವಿಸರ್ಜನಾ ಕಾರ್ಯಕ್ರಮದ ಅಂಗವಾಗಿ ಗಣಪತಿ ಹೋಮ ಹಾಗು ಅನ್ನದಾನ ಆಯೋಜಿಸಲಾಗಿತ್ತು. ಸಾವಿರಾರು ಭಕ್ತರು ಹೋಮದಲ್ಲಿ ಭಾಗವಹಿಸಿ ಪ್ರಸಾದ ಸ್ವೀಕರಿಸಿದರು. ಶಾಸಕ ಸಿಮೆಂಟ್ ಮಂಜು ಅವರು ವಿಸರ್ಜನೆಗೆ ಚಾಲನೆ ನೀಡಿದರು.

ಪಟ್ಟಣದ ಎಸ್.ಪಿ. ರಸ್ತೆಯಿಂದ ಹೊರಟ ಮೆರವಣಿಗೆ ಆಶ್ರಿತಾ ಹೋಟೆಲ್ ಸಮೀಪ ಮುಖ್ಯ ರಸ್ತೆಗೆ ಬಂದು ನಂತರ ಹಳೇ ಸಂತೇವೇರಿ ಬಡಾವಣೆ ಮೂಲಕ ಬಿ.ಎಂ. ರಸ್ತೆಗೆ ಬಂದು ನಂತರ ಬ್ರಾಹ್ಮಣರ ಬೀದಿ ಮಾರ್ಗವಾಗಿ ಹೇಮಾವತಿ ಸೇತುವೆ ತಲುಪಿತು. ಕ್ರೇನ್ ನೆರವಿನಿಂದ ಗಣಪತಿಯನ್ನು ವಿಸರ್ಜಿಸಲಾಯಿತು. ಮೆರವಣಿಗೆಯಲ್ಲಿ ಉಜಿರೆಯ ಛತ್ರಪತಿ ಶಿವಾಜಿ ಭಜನಾ ಮಂಡಳಿ, ಕಟೀಲಿನ ಚಂಡೆ ತಂಡ ಕಡಬದ ಬೃಹತ್ ಶಿವಾಜಿ ಟ್ಯಾಬ್ಲೋ, ನೋಡುಗರಿಗೆ ಆಕರ್ಷಣೆ ತಂದಿತು. ಹೈಡ್ರಾಲಿಕ್ ಮಿಷನ್‌ನಲ್ಲಿ ಗಣಪತಿಯನ್ನು ಕೂರಿಸಲಾಗಿದ್ದು ಆಗಾಗ ಗಣಪತಿ ಮೂರ್ತಿಯನ್ನು ಎತ್ತರಕ್ಕೇರಿಸಲಾಗುತ್ತಿತ್ತು.

ಅಲ್ಲದೆ ಡಿಜೆ ವಾದ್ಯಕ್ಕೆ ಯುವಕರು ಮಾತ್ರವಲ್ಲದೆ ಮಹಿಳೆಯರು, ಮಕ್ಕಳು ಸಹ ಕುಣಿದು ಕುಪ್ಪಳಿಸಿದರು. ಎಲ್ಲಿ ನೋಡಿದರು ಕೇಸರಿ ಬಾವುಟಗಳು ಕಾಣುತ್ತಿದ್ದವು. ಅಹಿತಕರ ಘಟನೆಯಾಗದಂತೆ ಬಿಗಿಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು. ಮೆರವಣಿಗೆಯಲ್ಲಿ ಹಿಂದು ಮುಖಂಡ ರಘು ಸಕಲೇಶಪುರ, ರಾಮಧೂತ ಗಣಪತಿ ಸೇವಾ ಸಮಿತಿಯ ಪದಾಧಿಕಾರಿಗಳಾದ ಕೌಶಿಕ್, ಮಂಜು ಕಬ್ಬಿನಗದ್ದೆ, ಧರ್ಮೇಶ್, ದುಷ್ಯಂತ್, ಶಿವು ಜಿಪ್ಪಿ, ದಿಲೀಪ್, ಶ್ರೀಜಿತ್, ಶೇಖರ್ ಕಬ್ಬಿನಗದ್ದೆ, ಪ್ರದೀಪ್, ಚೇತನಾ ಇನ್ನಿತರರು ಭಾಗವಹಿಸಿದ್ದರು.

ಗ್ರಾಮದೇವತೆಗಳಿಗೆ ಪೂಜೆ ಸಲ್ಲಿಸಿ ಅಧಿಕಾರಿಗಳಿಂದ ಅಡ್ಡಿ: ಪ್ರತಿಭಟನೆ

• ಪ್ರಜೋದಯ ವರದಿ

ಹಾಸನ: ಅರಕಲಗೂಡು ತಾಲ್ಲೂಕಿನ ಕೊಳನೂರು ಹೋಬಳಿಯ ಬೆಟ್ಟಗಳಲ್ಲಿ ಗ್ರಾಮದ ವ್ಯಾಪ್ತಿಯಲ್ಲಿ ಹಲವು ವರ್ಷಗಳಿಂದ ಗ್ರಾಮಸ್ಥರು ಪೂಜಿಸಿಕೊಂಡು ಬರುತ್ತಿರುವ ಗ್ರಾಮದೇವತೆಗಳ ಸ್ಥಳವನ್ನು ಸ್ವಚ್ಛಗೊಳಿಸಿ ಪೂಜೆ ಸಲ್ಲಿಸಲು ಅಧಿಕಾರಿಗಳು ಅಡ್ಡಿಪಡಿಸುತ್ತಿದ್ದಾರೆ ಎಂದು ಆರೋಪಿಸಿ ಗ್ರಾಮಸ್ಥರು ಶ್ರೀರಾಮಸೇನೆ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಲಾಯಿತು.

ಗ್ರಾಮದ ಆಶಾ ಮತ್ತು ವೇಣು ಗೋಪಾಲ್ ಅವರು ಮಾಧ್ಯಮದೊಂದಿಗೆ ಮಾತನಾಡಿ, ಬೆಟ್ಟಗಳಲ್ಲಿ ಗ್ರಾಮದ ಜಾಗದಲ್ಲಿರುವ ದೇವರ ಸ್ಥಳದಲ್ಲಿ ಇನ್ನೂರು ವರ್ಷಕ್ಕೂ ಹೆಚ್ಚು ಕಾಲದಿಂದ ನಾಗದೇವರ ಪೂಜೆ ಹಾಗೂ ಧಾರ್ಮಿಕ ಆಚರಣೆಗಳು ನಡೆದುಕೊಂಡು ಬರುತ್ತಿವೆ. ಈ ಸ್ಥಳದಲ್ಲಿ ಇತ್ತೀಚಿನ ವರ್ಷಗಳಲ್ಲಿ ಬೆಟ್ಟದ ಗಾಳಿಯಮ್ಮ, ಬೆಟ್ಟದ ಆಂಜನೇಯ, ಬೆಟ್ಟದ ವಾಸುಕಿ ನಾಗ ಹಾಗೂ ಗಣಪತಿ ಸೇರಿದಂತೆ ಹಲವು ದೇವರ ಮೂರ್ತಿಗಳು ಪ್ರತ್ಯಕ್ಷವಾಗಿದ್ದು, ಗ್ರಾಮಸ್ಥರು ಅವುಗಳಿಗೆ ಪೂಜೆ ಸಲ್ಲಿಸುತ್ತಿದ್ದಾರೆ ಎಂದರು.

ಈ ದೇವರ ಸ್ಥಳ ಯಾವುದೇ ವ್ಯಕ್ತಿಯ ವೈಯಕ್ತಿಕ ಆಸ್ತಿಯಲ್ಲ. ಗ್ರಾಮದ ಸಾರ್ವಜನಿಕ ಧಾರ್ಮಿಕ ಸ್ಥಳವಾಗಿರುವುದರಿಂದ ಗ್ರಾಮದ ಎಲ್ಲ ವರ್ಗದ ಜನರು ಹಲವು ವರ್ಷಗಳಿಂದ ಪೂಜೆ, ಧಾರ್ಮಿಕ ಕಾರ್ಯಕ್ರಮ ಹಾಗೂ ಸ್ವಚ್ಛತಾ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ ಎಂದು ಗ್ರಾಮಸ್ಥರು ಹೇಳಿದರು. ಗೌರಿ-ಗಣೇಶ ಹಬ್ಬದ ಹಿನ್ನೆಲೆಯಲ್ಲಿ ದೇವರ ಮೂರ್ತಿಗಳು ಕಾಣದಷ್ಟು ಸ್ಥಳದಲ್ಲಿ ಕಾಡು ಬೆಳೆದಿದ್ದರಿಂದ ಗ್ರಾಮಸ್ಥರು ಒಟ್ಟಾಗಿ ಸೇರಿ ಜಾಗವನ್ನು ಸ್ವಚ್ಛಗೊಳಿಸಿ ದೇವರಿಗೆ ಪೂಜೆ ಸಲ್ಲಿಸುತ್ತಿದ್ದ ವೇಳೆ ಕೆಲವರು ಬಂದು ವಿರೋಧ ವ್ಯಕ್ತಪಡಿಸಿದ್ದಾರೆ ಎಂದು ಆರೋಪಿಸಿದರು.

ಶಾಂತಕುಮಾರ್ ಹಾಗೂ ಅವರ ಪತ್ನಿ ಸುನಿತಾ ಸೇರಿದಂತೆ ಕೆಲವರು ಸ್ಥಳಕ್ಕೆ ಬಂದು ಗ್ರಾಮಸ್ಥರೊಂದಿಗೆ ವಾಗ್ವಾದ ನಡೆಸಿ, ಈ ಜಾಗದಲ್ಲಿ ಪೂಜೆ ಸಲ್ಲಿಸಬಾರದು ಎಂದು ತಡೆದಿದ್ದಾರೆ. ಅಲ್ಲದೆ, ಜಾಗದ ವಿಚಾರವಾಗಿ ಪೊಲೀಸ್ ಮತ್ತು ಕಂದಾಯ ಅಧಿಕಾರಿಗಳಿಗೆ ಹಣ ನೀಡಲಾಗಿದೆ ಎಂಬ ರೀತಿಯಲ್ಲಿ ಮಾತನಾಡಿ ಗ್ರಾಮಸ್ಥರಿಗೆ ಬೆದರಿಕೆ ಹಾಕಿದ್ದಾರೆ ಎಂದು ಪ್ರತಿಭಟನಾಕಾರರು ದೂರಿದರಲ್ಲದೆ, ನಂತರ ಪೊಲೀಸರು ಗ್ರಾಮಸ್ಥರನ್ನು ಒಟ್ಟುಗೂಡಿಸಿ, ಈ ಸ್ಥಳದಲ್ಲಿ ಯಾರೂ ದೇವರಿಗೆ ಪೂಜೆ ಸಲ್ಲಿಸಬಾರದು ಹಾಗೂ ಸ್ಥಳಕ್ಕೆ ತೆರಳಬಾರದು ಎಂದು ಸೂಚಿಸಿದ್ದಾರೆ ಎಂದು ಹೇಳಿದರು.

ಗಣೇಶ ಮೂರ್ತಿ ವಿಸರ್ಜನೆ ಸಂದರ್ಭದಲ್ಲಿ ಪೊಲೀಸರು ಗ್ರಾಮಸ್ಥರನ್ನು ಒಟ್ಟುಗೂಡಿಸಿ, ಸ್ಥಳದ ಕುರಿತು ದೂರು ಬಂದಿರುವುದಾಗಿ ತಿಳಿಸಿ, ಮುಚ್ಚಳಿಕೆ ಪತ್ರಕ್ಕೆ ಸಹಿ ಪಡೆದಿದ್ದಾರೆ. ಆದರೆ ದೂರು ನೀಡಿದವರು ಯಾರು ಎಂಬುದನ್ನು ತಿಳಿಸಿಲ್ಲ. ಮುಚ್ಚಳಿಕೆ ಪತ್ರದ ವಿಷಯವನ್ನೂ ಗ್ರಾಮಸ್ಥರಿಗೆ ಸಮರ್ಪಕವಾಗಿ ವಿವರಿಸದೆ ಬಲವಂತವಾಗಿ ಸಹಿ ಮಾಡಿಸಿಕೊಂಡಿದ್ದಾರೆ ಎಂದು ಆರೋಪಿಸಿದರು.

ಸ್ಥಳೀಯ ವಿವಾದದಲ್ಲಿ ಕೆಲವು ಹೊರಗಿನ ಸಂಘಟನೆಗಳು ಮಧ್ಯ ಪ್ರವೇಶಿಸಿ ಅಧಿಕಾರಿಗಳೊಂದಿಗೆ ಮಾತನಾಡಿರುವುದರಿಂದ ಅಧಿಕಾರಿಗಳು ಒಂದು ಪಕ್ಷದ ಪರವಾಗಿ ನಡೆದುಕೊಳ್ಳುತ್ತಿದ್ದಾರೆ ಎಂಬ ಭಾವನೆ ಗ್ರಾಮಸ್ಥರಲ್ಲಿ ಮೂಡಿದೆ ಎಂದರು. ಯಾವುದೇ ಧಾರ್ಮಿಕ ಸ್ಥಳದ ವಿಚಾರದಲ್ಲಿ ಸ್ಥಳೀಯ ಗ್ರಾಮಸ್ಥರ ಭಾವನೆಗಳನ್ನು ಪರಿಗಣಿಸದೆ ಏಕಪಕ್ಷೀಯವಾಗಿ ನಿರ್ಬಂಧ ವಿಧಿಸುವುದು ಸರಿಯಲ್ಲ. ಜಾಗದ ಮಾಲೀಕತ್ವ, ದಾಖಲೆಗಳು ಹಾಗೂ ಹಲವು ವರ್ಷಗಳಿಂದ ನಡೆಯುತ್ತಿರುವ ಪೂಜಾ ಪರಂಪರೆಯ ಕುರಿತು ಅಧಿಕಾರಿಗಳು ಸಮಗ್ರವಾಗಿ ಪರಿಶೀಲನೆ ನಡೆಸಬೇಕು ಎಂದು ಆಗ್ರಹಿಸಿದರು.

ಗ್ರಾಮಸ್ಥರು ತಮ್ಮ ಪೂಜಾ ಹಕ್ಕಿಗೆ ಯಾವುದೇ ರೀತಿಯಲ್ಲಿ ಧಕ್ಕೆ ಉಂಟಾಗದಂತೆ ಜಿಲ್ಲಾಡಳಿತ ಕ್ರಮ ಕೈಗೊಳ್ಳಬೇಕು. ದೇವರ ಸ್ಥಳವನ್ನು ಸ್ವಚ್ಛಗೊಳಿಸಿ ಪೂಜೆ ಹಾಗೂ ಧಾರ್ಮಿಕ ಆಚರಣೆಗಳನ್ನು ಶಾಂತಿಯುತವಾಗಿ ನಡೆಸಲು ಅವಕಾಶ ಕಲ್ಪಿಸಬೇಕು. ಪರಿಶೀಲಿಸಿ ನ್ಯಾಯ ಸಮ್ಮತವಾಗಿ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಶ್ರೀರಾಮಸೇನೆ ಜಿಲ್ಲಾಧ್ಯಕ್ಷ ಧರ್ಮನಾಯಕ್, ರಾಷ್ಟ್ರ ರಕ್ಷಣಾ ಸೇನೆಯ ಸುರೇಶ್ ಗೌಡ, ಗ್ರಾಮಸ್ಥರಾದ ತುಳಸಿಯಮ್ಮ, ಸುಮಾ, ಬಿ.ಬಿ.ರೂಪ, ಬಿ.ಎ. ಸುಧಾ, ಲಕ್ಷ್ಮಮ್ಮ, ಆಶಾರಾಣಿ, ನವೀನ್, ಪ್ರಸನ್ನ, ಅಭಿ, ಸ್ವಾಮಿಗೌಡ, ಮಂಜುಳಾ, ಚಂದ್ರಶೇಖರ್, ಕೃಷ್ಣೇಗೌಡ, ವಿನೋದ್ ಇತರರು ಉಪಸ್ಥಿತರಿದ್ದರು.

ಸರ್ಕಾರದ ಸೌಲಭ್ಯಗಳ ಸದುಪಯೋಗಕ್ಕೆ ಕರೆ

• ಪ್ರಜೋದಯ ವರದಿ

ಬಾಗೂರಿನಲ್ಲಿ 13ನೇ ವಿಶ್ವಕರ್ಮ ಜಯಂತ್ಯೋತ್ಸವ

ಚನ್ನರಾಯಪಟ್ಟಣ: ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದಿಂದ ಸಮಾಜದ ಜನರಿಗೆ ಬರುವ ಸೌಲಭ್ಯಗಳನ್ನು ಪಡೆದುಕೊಳ್ಳುವ ಮೂಲಕ ಸದ್ಬಳಕೆ ಮಾಡಿಕೊಳ್ಳುವಂತೆ ಕರ್ನಾಟಕ ವಿಶ್ವಕರ್ಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಪಿ. ಸುಜ್ಞಾನಮೂರ್ತಿ ಹೇಳಿದರು.

ತಾಲ್ಲೂಕಿನ ಬಾಗೂರು ಹೋಬಳಿ ಕೇಂದ್ರದ ವಿಶ್ವಕರ್ಮ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಆಯೋಜಿಸಿದ್ದ 13ನೇ ವರ್ಷದ ವಿಶ್ವಕರ್ಮ ಜಯಂತೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯ ಕಾಂಗ್ರೆಸ್ ಸರ್ಕಾರ ವಿಶ್ವಕರ್ಮ ಅಭಿವೃದ್ಧಿ ನಿಗಮಕ್ಕೆ ಅನುದಾನದ ಜೊತೆಗೆ ಹಲವು ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತಂದಿದೆ. ವಿಶ್ವಕರ್ಮ ಜನಾಂಗದ ಜನ ಆರ್ಥಿಕವಾಗಿ ಸದೃಢಗೊಳ್ಳಲು ನಿಗಮದಿಂದ ಸಬ್ಸಿಡಿ ಸಾಲ, ಗಂಗಾ ಕಲ್ಯಾಣ ಯೋಜನೆ ಮೂಲಕ ಕೊಳವೆಬಾವಿ ಸೇರಿದಂತೆ ಅನೇಕ ಕಾರ್ಯಕ್ರಮಗಳಿಗೆ ಅನುದಾನ ನೀಡುತ್ತಿದೆ ಎಂದರು.

ಶಾಸಕ ಸಿ.ಎನ್.ಬಾಲಕೃಷ್ಣ ಅವರು ಮಾತನಾಡಿ, ರಾಜ್ಯ ಸರ್ಕಾರ ವಿಶ್ವಕರ್ಮ ಅಭಿವೃದ್ಧಿ ನಿಗಮಕ್ಕೆ ವಾರ್ಷಿಕವಾಗಿ ಕೇವಲ 50 ಕೋಟಿ ರೂ. ಅನುದಾನ ಮಾತ್ರ ನೀಡುತ್ತಿದೆ. ಕನಿಷ್ಠ 200 ಕೋಟಿಯಾದರೂ ಅನುದಾನ ನೀಡಿದರೆ ಜನರಿಗೆ ಅನುಕೂಲವಾಗುತ್ತದೆ ಇದರ ಜೊತೆಗೆ ಗಂಗಾ ಕಲ್ಯಾಣ ಯೋಜನೆ ಹಾಗೂ ನಿಗಮದ ಸಾಲಕ್ಕೆ ಹೆಚ್ಚಿನ ಜನರಿಗೆ ಅವಕಾಶ ಕಲ್ಪಿಸಬೇಕು. ತಾಲೂಕಿನಲ್ಲಿ ಕೇವಲ 2ರಿಂದ 3 ಜನರಿಗೆ ಮಾತ್ರ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತಿದೆ. ಹೋಬಳಿ ಕೇಂದ್ರದ ವಿಶ್ವಕರ್ಮ ಸಮಾಜದ ಸಂಘಕ್ಕೆ ಕಟ್ಟಡದ ಅವಶ್ಯಕತೆ ಇದ್ದು ನಿವೇಶನ ಒದಗಿಸಲು ಈಗಾಗಲೇ ಜಾಗ ಗುರುತು ಮಾಡಲಾಗಿದ್ದು ಸದ್ಯದಲ್ಲೇ ಸಂಘಕ್ಕೆ ಜಾಗವನ್ನು ಮಂಜೂರು ಮಾಡಲಾಗುತ್ತದೆ ಎಂದರು.

ಮಾಜಿ ವಿಧಾನ ಪರಿಷತ್ ಸದಸ್ಯ ಎಂಎ ಗೋಪಾಲಸ್ವಾಮಿ ಮಾತನಾಡಿ, ವಿಶ್ವಕರ್ಮ ಅಭಿವೃದ್ಧಿ ನಿಗಮಕ್ಕೆ ಹೆಚ್ಚಿನ ಅನುದಾನ ನೀಡುವಂತೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಸಂಬಂಧಪಟ್ಟ ಸಚಿವರಿಗೆ ಮನವಿ ಮಾಡುವುದಾಗಿ ಹೇಳಿದರು.

ಸಮಾಜದ ವಿದ್ಯಾರ್ಥಿಗಳು ಕಳೆದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಕಾರ್ಯಕ್ರಮ ದಲ್ಲಿ ಸನ್ಮಾನಿಸಲಾಯಿತು.

ವಿಶ್ವಕರ್ಮ ಜಯಂತೋತ್ಸವದ ಅಂಗವಾಗಿ ಹೋಬಳಿ ಕೇಂದ್ರದ ಪ್ರಮುಖ ರಸ್ತೆಗಳಲ್ಲಿ ವಿಶ್ವಕರ್ಮರ ಪಲ್ಲಕ್ಕಿ ಉತ್ಸವ ನಡೆಯಿತು. ಕಾರ್ಯಕ್ರಮದಲ್ಲಿ ಮಾಜಿ ಎಪಿಎಂಸಿ ಅಧ್ಯಕ್ಷ ಬಿಎಚ್ ಶಿವಣ್ಣ, ಉದ್ಯಮಿ ಮರುವನಹಳ್ಳಿ ದೇವರಾಜ್, ಬಾಗೂರು ಮನು, ಸಮಾಜದ ಭಾಸ್ಕರಚಾರ್, ಮುಖಂಡರಾದ ಕಾಂತರಾಜ್, ವಾಸಣ್ಣ, ಬಿಪಿ ಲಕ್ಷ್ಮಣ್, ಸ್ಟುಡಿಯೋ ರಘು, ಸಂಘದ ಅಧ್ಯಕ್ಷ ಮಂಜಾಚಾರ್, ಉಪಾಧ್ಯಕ್ಷ ಭಾಸ್ಕರಚಾರ್, ಖಜಾಂಚಿ ಬಿಡಿ ನವೀನ್, ಪ್ರಧಾನ ಕಾರ್ಯದರ್ಶಿ ಕೆ ಟಿ ಕುಮಾರ್, ಸಹ ಕಾರ್ಯದರ್ಶಿ ರಂಗಾಚಾರ್, ಸಂಘಟನಾ ಕಾರ್ಯದರ್ಶಿ ನವೀನ್, ಗೌರವ ಅಧ್ಯಕ್ಷರಾದ ಈಶ್ವರಾಚಾರ್, ಚಂದ್ರಚಾರ್, ಸೇರಿದಂತೆ ಸಂಘದ ಎಲ್ಲಾ ನಿರ್ದೇಶಕರು ಸದಸ್ಯರು ಗ್ರಾಮಸ್ಥರು ಪಾಲ್ಗೊಂಡಿದ್ದರು.

ಆರೋಗ್ಯವಂತ ತಾಯಿ-ಮಗುವಿನಿಂದಲೇ ಸ್ವಸ್ಥ ಸಮಾಜ

• ಪ್ರಜೋದಯ ವರದಿ

ಬೇಲೂರು: ಆರೋಗ್ಯವಂತ ತಾಯಿ ಮತ್ತು ಆರೋಗ್ಯವಂತ ಮಗು ಇದ್ದಾಗ ಮಾತ್ರ ಆರೋಗ್ಯವಂತ ಸಮಾಜವನ್ನು ನಿರ್ಮಿಸಲು ಸಾಧ್ಯ ಎಂದು ರೋಟರಿ ಕ್ಲಬ್ ಅಧ್ಯಕ್ಷ ಬಿ.ಬಿ.ಶಿವರಾಜು ಹೇಳಿದರು.

ಪಟ್ಟಣದ ಜೆ.ಪಿ. ನಗರದಲ್ಲಿರುವ ಅಂಗನವಾಡಿ ಕೇಂದ್ರದಲ್ಲಿ ರೋಟರಿ ಕ್ಲಬ್ ಬೇಲೂರು ವತಿಯಿಂದ ಮಕ್ಕಳಿಗೆ ಕಾರ್ಪೆಟ್ ಹಾಗೂ ಕುಡಿಯುವ ನೀರಿನ ಬಾಟಲ್ ವಿತರಿಸುವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ತಾಯಿ ಮತ್ತು ಮಗುವಿನ ಆರೋಗ್ಯವು ಕೇವಲ ಒಂದು ಕುಟುಂಬಕ್ಕೆ ಸೀಮಿತವಾಗಿರದೆ, ಇಡೀ ಸಮಾಜದ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಗರ್ಭಿಣಿಯರು ಪೌಷ್ಟಿಕ ಆಹಾರ ಸೇವಿಸುವುದು, ವೈದ್ಯರ ಸಲಹೆಯಂತೆ ನಿಯಮಿತವಾಗಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವುದು ಹಾಗೂ ಅಗತ್ಯ ಪೌಷ್ಟಿಕಾಂಶಗಳನ್ನು ಪಡೆಯುವುದು ಅತ್ಯಂತ ಮುಖ್ಯ ಎಂದರು.

ಅಂಗನವಾಡಿ ಮೇಲ್ವಿಚಾರಕಿ ಮಮತಾ ಮಾತನಾಡಿ, ರೋಟರಿ ಸಂಸ್ಥೆಯ ವತಿಯಿಂದ ಅಂಗನವಾಡಿ ಕೇಂದ್ರಕ್ಕೆ ಅಗತ್ಯವಾದ ಕಾರ್ಪೆಟ್ ಹಾಗೂ ಕುಡಿಯುವ ನೀರಿನ ಬಾಟಲ್‌ಗಳನ್ನು ನೀಡಿರುವುದು ಸಂತಸ ತಂದಿದೆ. ಇತರ ತಾಲೂಕುಗಳಲ್ಲಿ ರೋಟರಿ ಸಂಸ್ಥೆಗಳು ಶಾಲೆಗಳನ್ನು ದತ್ತು ಪಡೆದು, ಮಕ್ಕಳಿಗೆ ಸಮವಸ್ತ್ರ, ಪುಸ್ತಕಗಳನ್ನು ವಿತರಿಸುವುದು ಹಾಗೂ ಶಾಲೆಗಳ ಅಭಿವೃದ್ಧಿಗೆ ನೆರವು ನೀಡುತ್ತಿರುವುದನ್ನು ನೋಡಿದ್ದೇನೆ. ಬೇಲೂರಿನಲ್ಲಿಯೂ ಇಂತಹ ಸಮಾಜಮುಖಿ ಸೇವಾ ಕಾರ್ಯಗಳು ನಡೆಯುತ್ತಿರುವುದು ಸಂತೋಷದ ವಿಚಾರ ಎಂದರು.

ಅಂಗನವಾಡಿ ಕೇಂದ್ರಗಳಿಗೆ ಇಂತಹ ನೆರವು ದೊರೆತಾಗ ಶಿಕ್ಷಕಿಯರು ಹಾಗೂ ಸಹಾಯಕಿಯರಿಗೆ ಇನ್ನಷ್ಟು ಉತ್ಸಾಹದಿಂದ ಕೆಲಸ ಮಾಡಲು ಪ್ರೇರಣೆ ದೊರೆಯುತ್ತದೆ. ಪೋಷಕರು ಹಾಗೂ ಮಕ್ಕಳಲ್ಲಿಯೂ ಸಂತಸ ಮೂಡುತ್ತದೆ. ರೋಟರಿ ಸಂಸ್ಥೆಯ ಸೇವಾ ಕಾರ್ಯಗಳು ಮುಂದುವರಿಯಲಿ ಹಾಗೂ ಅಂಗನವಾಡಿ ಕೇಂದ್ರಗಳ ಅಭಿವೃದ್ಧಿಗೂ ಮುಂದಿನ ದಿನಗಳಲ್ಲಿ ನೆರವು ದೊರೆಯಲಿ ಎಂದು ಆಶಿಸಿದರು.

ತಾಲ್ಲೂಕಿನಲ್ಲಿ ಒಟ್ಟು 9,015 ಫಲಾನುಭವಿಗಳಿದ್ದು, 908 ಗರ್ಭಿಣಿಯರು, 820 ಬಾಣಂತಿಯರು ಹಾಗೂ 6 ತಿಂಗಳಿಂದ 6 ವರ್ಷದೊಳಗಿನ 6,667 ಮಕ್ಕಳು ಪೋಷಣ್ ಯೋಜನೆಯ ವ್ಯಾಪ್ತಿಯಲ್ಲಿದ್ದಾರೆ. ಫಲಾನುಭವಿಗಳಿಗೆ ಇಲಾಖೆಯಿಂದ ದೊರೆಯುವ ಪೌಷ್ಟಿಕ ಆಹಾರ ಮತ್ತು ಇತರ ಸೌಲಭ್ಯಗಳನ್ನು ಮನೆಮನೆಗೆ ತಲುಪಿಸುವಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ಪ್ರಮುಖ ಪಾತ್ರ ವಹಿಸುತ್ತಿದ್ದಾರೆ ಎಂದು ತಿಳಿಸಿದರು.

ಅಂಗನವಾಡಿ ಶಿಕ್ಷಕಿ ಪಲ್ಲವಿ ಮಾತನಾಡಿ, ಇದುವರೆಗೆ ಮಕ್ಕಳನ್ನು ಚಾಪೆಯ ಮೇಲೆ ಮಲಗಿಸಲಾಗುತ್ತಿತ್ತು ಪೋಷಕರು ಬೇಸರ ವ್ಯಕ್ತಪಡಿಸುತ್ತಿದ್ದರು. ಮಕ್ಕಳಿಗೆ ಉತ್ತಮ ಗುಣಮಟ್ಟದ ಕಾರ್ಪೆಟ್ ಅಗತ್ಯವಿದೆ ಎಂದು ರೋಟರಿ ಸಂಸ್ಥೆಗೆ ಮನವಿ ಮಾಡಿದ್ದೆವು. ನಮ್ಮ ಮನವಿಗೆ ಸ್ಪಂದಿಸಿ ಉತ್ತಮ ಗುಣಮಟ್ಟದ ಕಾರ್ಪೆಟ್ ಹಾಗೂ ಮಕ್ಕಳಿಗೆ ಕುಡಿಯುವ ನೀರಿನ ಬಾಟಲ್‌ಗಳನ್ನು ಒದಗಿಸಿರುವುದು ತುಂಬಾ ಸಂತೋಷ ತಂದಿದೆ. ಮಕ್ಕಳಿಗೆ ಸ್ವಚ್ಛ ಹಾಗೂ ಉತ್ತಮ ವಾತಾವರಣ ಕಲ್ಪಿಸಲು ಈ ನೆರವು ಸಹಕಾರಿಯಾಗಲಿದೆ ಎಂದು ರೋಟರಿ ಸಂಸ್ಥೆಗೆ ಕೃತಜ್ಞತೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ರೋಟರಿ ಕ್ಲಬ್ ಕಾರ್ಯದರ್ಶಿ ರಾಘವೇಂದ್ರ, ಖಜಾಂಚಿ ರಾಜೇಗೌಡ, ಸದಸ್ಯರಾದ ಸಂದೇಶ್, ಮೊಗಪ್ಪಗೌಡ, ಎಚ್.ಕೆ. ರಮೇಶ್, ಪೋಷಣ್ ಅಭಿಯಾನ ಅಧಿಕಾರಿ ರಮ್ಯಾ, ಅಂಗನವಾಡಿ ಶಿಕ್ಷಕಿಯರಾದ ರತ್ನ, ಭಾಗ್ಯ, ಶೈಲಾ ಹಾಗೂ ಸಹಾಯಕಿಯರಾದ ಹರ್ಷಿಯ, ಫೌರ್ಝಿಯ ಇತರರು ಉಪಸ್ಥಿತರಿದ್ದರು.

ರಾಮನಾಥಪುರದಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ನಿರ್ಮಿಸಲಾಗುತ್ತಿರುವ ಹೊಸ ಸೇತುವೆ

ಸೇತುವೆಯ ರಕ್ಷಣಾ ತಡೆಗೋಡೆ ಪಿಲ್ಲರ್‌ಗಳಲ್ಲಿ ಬಿರುಕು!

• ರವಿ ದುಮ್ಮಿ



ಅರಕಲಗೂಡು: ತಾಲ್ಲೂಕಿನ ರಾಮನಾಥಪುರದಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ನಿರ್ಮಿಸಲಾಗುತ್ತಿರುವ ಹೊಸ ಸೇತುವೆ ಕಾಮಗಾರಿ ಬಹುತೇಕ ಪೂರ್ಣಗೊಳ್ಳುವ ಹಂತದಲ್ಲಿರುವಾಗಲೇ ಸೇತುವೆಯ ರಕ್ಷಣಾ ತಡೆಗೋಡೆಯ ಸಿಮೆಂಟ್ ಕಾಂಕ್ರೀಟ್ ಪಿಲ್ಲರ್‌ಗಳಲ್ಲಿ ಬಿರುಕು ಕಾಣಿಸಿಕೊಂಡಿರುವುದು ಸಾರ್ವಜನಿಕರಲ್ಲಿ ಆತಂಕಕ್ಕೆ ಕಾರಣವಾಗಿದೆ.

ಸುಮಾರು 23 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ ಈ ಸೇತುವೆಯ ರಕ್ಷಣಾ ತಡೆಗೋಡೆಗೆ ಅಳವಡಿಸಿರುವ ಕಬ್ಬಿಣದ ಸರಳುಗಳ ಸಿಮೆಂಟ್ ಕಾಂಕ್ರೀಟ್ ಪಿಲ್ಲರ್‌ಗಳಲ್ಲಿ ಬಿರುಕು ಕಾಣಿಸಿಕೊಂಡಿದೆ. ಕಾಮಗಾರಿ ಪೂರ್ಣಗೊಂಡು ಸೇತುವೆ ಉದ್ಘಾಟನೆಗೆ ಸಿದ್ಧವಾಗುವ ಮುನ್ನವೇ ಬಿರುಕು ಕಾಣಿಸಿಕೊಂಡಿರುವುದು ಕಾಮಗಾರಿಯ ಗುಣಮಟ್ಟದ ಬಗ್ಗೆ ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ.

ಬಿರುಕು ಬಿಟ್ಟಿರುವ ಭಾಗವನ್ನು ಸಾರ್ವಜನಿಕರ ಗಮನಕ್ಕೆ ಬಾರದಂತೆ ಗೋಣಿ ಚೀಲದಿಂದ ಮುಚ್ಚಿರುವುದು ಮತ್ತಷ್ಟು ಅನುಮಾನಕ್ಕೆ ಕಾರಣವಾಗಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ. ಕಾಮಗಾರಿಯಲ್ಲಿ ಬಳಸಿರುವ ಸಾಮಗ್ರಿಗಳ ಗುಣಮಟ್ಟ, ಕಾಂಕ್ರೀಟ್ ಮಿಶ್ರಣ ಹಾಗೂ ನಿರ್ಮಾಣದ ವೇಳೆ ಕೈಗೊಂಡಿರುವ ಸುರಕ್ಷತಾ ಕ್ರಮಗಳ ಬಗ್ಗೆ ಸಂಬಧಪಟ್ಟ ಅಧಿಕಾರಿಗಳು ಪರಿಶೀಲನೆ ನಡೆಸಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ರಾಮನಾಥಪುರದಲ್ಲಿ ಮೈಸೂರು ಅರಸರ ಕಾಲದಲ್ಲಿ ನಿರ್ಮಿಸಲಾಗಿರುವ ಹಳೆಯ ಸೇತುವೆ ಶತಮಾನಕ್ಕೂ ಹೆಚ್ಚಿನ ಇತಿಹಾಸ ಹೊಂದಿದೆ. ಆ ಕಾಲದ ವಾಹನ ಸಂಚಾರಕ್ಕೆ ಅನುಗುಣವಾಗಿ ನಿರ್ಮಿಸಲಾಗಿದ್ದ ಸೇತುವೆಯ ಮೇಲೆ ಇತ್ತೀಚಿನ ವರ್ಷಗಳಲ್ಲಿ ವಾಹನಗಳ ಸಂಚಾರ ಗಣನೀಯವಾಗಿ ಹೆಚ್ಚಾಗಿದೆ. ಸೇತುವೆ ಕಿರಿದಾಗಿರುವುದರಿಂದ ಎರಡು ಬದಿಯಿಂದ ವಾಹನಗಳು ಬಂದಾಗ ಸಂಚಾರ ದಟ್ಟಣೆ ಉಂಟಾಗಿ, ಆಗಾಗ್ಗೆ ಟ್ರಾಫಿಕ್ ಜಾಮ್ ಸಮಸ್ಯೆ ಎದುರಾಗಿರುವುದು ತಪ್ಪಿರಲಿಲ್ಲ. ಹಳೆಯ ಸೇತುವೆಯ ಕಿರಿದಾದ ಸ್ಥಿತಿ ಹಾಗೂ ಹೆಚ್ಚುತ್ತಿರುವ ವಾಹನ ಸಂಚಾರದ ಹಿನ್ನೆಲೆಯಲ್ಲಿ ಹೊಸ ಸೇತುವೆ ನಿರ್ಮಾಣಕ್ಕೆ ಹಲವು ವರ್ಷಗಳ ಹಿಂದೆ ಮಂಜೂರಾತಿ ದೊರೆತಿತ್ತು. ಆದರೆ ಕಾಮಗಾರಿ ಆರಂಭಗೊಂಡು ಏಳು ವರ್ಷ ಕಳೆದರೂ ಸಂಪೂರ್ಣವಾಗಿ ಮುಕ್ತಾಯವಾಗದೆ ವಿಳಂಬವಾಗುತ್ತಲೇ ಬಂದಿದೆ. ಹೊಸ ಸೇತುವೆ ಕಾಮಗಾರಿ ವಿಳಂಬವಾಗುತ್ತಿರುವ ಹಿನ್ನೆಲೆಯಲ್ಲಿ ಶಾಸಕ ಎ. ಮಂಜು ಅವರು ಕಳೆದ ಕೆಲ ತಿಂಗಳುಗಳಿದ ಕಾಮಗಾರಿ ಸ್ಥಳಕ್ಕೆ ಕೆಆರ್‌ಡಿಸಿಎಲ್ ಅಧಿಕಾರಿಗಳು ಹಾಗೂ ಆಂಧ್ರಪ್ರದೇಶ ಮೂಲದ ಗುತ್ತಿಗೆದಾರರನ್ನು ಕರೆಸಿ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಹಲವು ಬಾರಿ ತಾಕೀತು ಮಾಡುತ್ತಿದ್ದಾರೆ.

ಕಾಮಗಾರಿ ಶೀಘ್ರ ಪೂರ್ಣಗೊಳಿಸಿ ಸಾರ್ವಜನಿಕರ ಸಂಚಾರಕ್ಕೆ ಸೇತುವೆಯನ್ನು ಮುಕ್ತಗೊಳಿಸುವಂತೆ ಶಾಸಕರು ಒತ್ತಡ ಹೇರಿದ್ದರೂ, ಕಾಮಗಾರಿ ಗುಣಮಟ್ಟದ ಬಗ್ಗೆ ಇದೀಗ ಸಾರ್ವಜನಿಕರಿಂದ ಪ್ರಶ್ನೆಗಳು ಕೇಳಿಬಂದಿವೆ. ಗುಣಮಟ್ಟದ ಪರಿಶೀಲನೆಗೆ ಆಗ್ರಹ: ಸೇತುವೆಯ ರಕ್ಷಣಾ ತಡೆಗೋಡೆಯ ಕಾಂಕ್ರೀಟ್ ಪಿಲ್ಲರ್‌ಗಳಲ್ಲಿ ಬಿರುಕು ಕಾಣಿಸಿಕೊಂಡಿರುವುದನ್ನು ಗಂಭೀರವಾಗಿ ಪರಿಗಣಿಸಿ ಸಂಬಧಪಟ್ಟ ತಾಂತ್ರಿಕ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ಬಿರುಕು ಉಂಟಾಗಿರುವ ಕಾರಣವನ್ನು ಪತ್ತೆಹಚ್ಚಿ, ಅಗತ್ಯವಿದ್ದರೆ ತಾಂತ್ರಿಕ ಪರೀಕ್ಷೆ ನಡೆಸಿ, ದೋಷಪೂರಿತ ಕಾಮಗಾರಿಯನ್ನು ಸರಿಪಡಿಸಿದ ನಂತರವೇ ಸೇತುವೆಯನ್ನು ಸಾರ್ವಜನಿಕರ ಸಂಚಾರಕ್ಕೆ ಮುಕ್ತಗೊಳಿಸಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಜನರ ಸುರಕ್ಷತೆಗಿಂತ ಕಾಮಗಾರಿ ಪೂರ್ಣಗೊಳಿಸುವುದಕ್ಕೆ ಆದ್ಯತೆ ನೀಡಬಾರದು. ಕೋಟ್ಯಂತರ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ ಸೇತುವೆಯ ಗುಣಮಟ್ಟದಲ್ಲಿ ಯಾವುದೇ ರಾಜಿ ಇರಬಾರದು. ಬಿರುಕು ಕಾಣಿಸಿಕೊಂಡಿರುವ ಭಾಗವನ್ನು ಮುಚ್ಚಿಹಾಕುವ ಬದಲು ಅದರ ಕಾರಣವನ್ನು ಪತ್ತೆಹಚ್ಚಿ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ

ರಾಮನಾಥಪುರ ನೂತನ ಸೇತುವೆ ಕಾಮಗಾರಿ ಮುಕ್ತಾಯದ ಹಂತ ತಲುಪಿದೆ. ಸೇತುವೆಗೆ ರಸ್ತೆ ನಿರ್ಮಾಣ ಕಾಮಗಾರಿ ಮಾತ್ರ ಬಾಕಿ ಇದ್ದು, ಮಳೆಗಾಲದ ಹಿನ್ನೆಲೆಯಲ್ಲಿ ಸದ್ಯ ಡಾಂಬರೀಕರಣ ಮಾಡಲಾಗಿಲ್ಲ. ಸೇತುವೆಯ ತಡೆಗೋಡೆ ಪಿಲ್ಲರ್‌ನಲ್ಲಿ ಬಿರುಕು ಕಾಣಿಸಿಕೊಂಡಿರುವ ವಿಷಯ ನನ್ನ ಗಮನಕ್ಕೆ ಬಂದಿಲ್ಲ. ಈ ಬಗ್ಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಲಾಗುವುದು. ಪರಿಶೀಲನೆಯ ನಂತರ ಅಗತ್ಯವಿರುವ ಮುಂದಿನ ಕ್ರಮ ಕೈಗೊಳ್ಳಲಾಗುವುದು.

– ರಾಜು, ಕೆಆರ್‌ಡಿಸಿಎಲ್ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಮೈಸೂರು.

ಗುಡುಗು ಸಹಿತ ಭಾರಿ ಮಳೆ ಮುನ್ಸೂಚನೆ

• ಪ್ರಜೋದಯ ವರದಿ



ಬೆಂಗಳೂರು: ರಾಜ್ಯದಲ್ಲಿ ಮುಂಗಾರು ಚುರುಕುಗೊಂಡಿದ್ದು, ಇನ್ನೆರಡು ದಿನ ಹಲವು ಜಿಲ್ಲೆಗಳಲ್ಲಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕರಾವಳಿ ಕರ್ನಾಟಕ, ಉತ್ತರ ಒಳನಾಡು ಹಾಗೂ ದಕ್ಷಿಣ ಒಳನಾಡಿನ ಹಲವು ಜಿಲ್ಲೆಗಳಿಗೆ ಮತ್ತು ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳ ಒಂದೆರಡು ಕಡೆಗಳಲ್ಲಿ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆ ಇದೆ. ಈ ವೇಳೆ ಗಂಟೆಗೆ 40ರಿಂದ 50 ಕಿ.ಮೀ ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆಯೂ ಇದೆ.

ಉತ್ತರ ಒಳನಾಡಿನಲ್ಲಿ ಗದಗ, ಹಾವೇರಿ ಮತ್ತು ಕೊಪ್ಪಳ ಜಿಲ್ಲೆಗಳ ಒಂದೆರಡು ಕಡೆಗಳಲ್ಲಿ ಭಾರಿ ಮಳೆಯ ಮುನ್ಸೂಚನೆ ಇದೆ. ಬಾಗಲಕೋಟೆ, ಬೆಳಗಾವಿ, ಬೀದರ್, ಧಾರವಾಡ, ಕಲಬುರಗಿ, ರಾಯಚೂರು, ವಿಜಯಪುರ ಹಾಗೂ ಯಾದಗಿರಿ ಜಿಲ್ಲೆಗಳ ಹಲವು ಕಡೆಗಳಲ್ಲಿ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ.

ದಕ್ಷಿಣ ಒಳನಾಡಿನ ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಗಳ ಒಂದೆರಡು ಕಡೆಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆ ಇದೆ. ಬಳ್ಳಾರಿ, ಚಾಮರಾಜನಗರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಹಾಸನ, ಕೊಡಗು, ಮಂಡ್ಯ, ಮೈಸೂರು, ರಾಮನಗರ, ಶಿವಮೊಗ್ಗ, ತುಮಕೂರು ಹಾಗೂ ವಿಜಯನಗರ ಜಿಲ್ಲೆಗಳ ಹಲವು ಕಡೆಗಳಲ್ಲಿ ಗುಡುಗು ಸಹಿತ ಸಾಧಾರಣ ಮಳೆಯಾಗುವ ಮುನ್ಸೂಚನೆ ಇದೆ.

ಸೆಪ್ಟೆಂಬರ್ 22ರಂದು ಕರಾವಳಿ ಕರ್ನಾಟಕದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಒಂದೆರಡು ಕಡೆ ಭಾರಿ ಮಳೆಯಾಗುವ ಸಾಧ್ಯತೆ ಮುಂದುವರಿಯಲಿದೆ.

ದಕ್ಷಿಣ ಒಳನಾಡಿನ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಹಾಸನ, ಕೋಲಾರ, ಮೈಸೂರು ಮತ್ತು ರಾಮನಗರ ಜಿಲ್ಲೆಗಳಲ್ಲಿ ಒಂದೆರಡು ಕಡೆ ಭಾರಿ ಮಳೆಯಾಗುವ ಮುನ್ಸೂಚನೆ ಇದೆ.

ಮನೆಗೆ ನುಗ್ಗಿ ಹಲ್ಲೆ ಮಾಡಿದ ಅಪರಾಧಿಗೆ ಶಿಕ್ಷೆ

• ಪ್ರಜೋದಯ ವರದಿ

ಹಾಸನ: ಅಡಿಕೆ ಸಸಿಗಳನ್ನು ನಾಶಪಡಿಸಿರುವುದನ್ನು ಖಂಡಿಸಿ ದೂರು ದಾಖಲಿಸಿದ್ದಕ್ಕೆ ಮನೆಗೆ ನುಗ್ಗಿ ವ್ಯಕ್ತಿ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ ಅಪರಾಧಿಗೆ ಮೂರು ವರ್ಷಗಳ ಕಾರಾಗೃಹ ಶಿಕ್ಷೆ ಹಾಗು 40 ಸಾವಿರ ರೂ. ದಂಡ ವಿಧಿಸಿ ಜಿಲ್ಲಾ ನ್ಯಾಯಾಲಯ ತೀರ್ಪು ಪ್ರಕಟಿಸಿದೆ.

ಸಕಲೇಶಪುರ ತಾಲ್ಲೂಕು ಹಾನುಬಾಳ್ ಹೋಬಳಿ ಹಾದಿಗೆ ಗ್ರಾಮದ ಪೃಥ್ವಿರಾಜ್ ಅಪರಾಧಿ. 2017ರ ಜು.1ರಂದು ಆದಿತ್ಯ ಎಂಬುವವರ ಮನೆಗೆ ನುಗ್ಗಿ ನನ್ನ ವಿರುದ್ಧ ಪೊಲೀಸ್ ಠಾಣೆಗೆ ದೂರು ನೀಡುತ್ತೀಯಾ ಎಂದು ಹಲ್ಲೆ ನಡೆಸಿದ್ದ. ನನ್ನ ತೋಟದಲ್ಲಿನ ಅಡಿಕೆ ಸಸಿಗಳನ್ನು ಕಿತ್ತಿದ್ದಕ್ಕೆ ಪ್ರಕರಣ ದಾಖಲಿಸಿದ್ದೇನೆಂದು ಹೇಳಿದರೂ ಕೇಳದ ಪೃಥ್ವಿರಾಜ್ ಆಕ್ರೋಶದಲ್ಲಿ ಕೊರಳಪಟ್ಟಿ ಹಿಡಿದು ಎಳೆದಾಡಿ, ಗಾರೆ ತುಂಡಿನಿಂದ ಎಡಕಣ್ಣಿಗೆ ಹೊಡೆದಿದ್ದ. ಗಂಭೀರ ಗಾಯಗೊಂಡಿದ್ದ ವ್ಯಕ್ತಿ ಆಸ್ಪತ್ರೆಗೆ ದಾಖಲಾಗಿದ್ದರು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ದೊಡ್ಡಗೌಡ ಅವರು, ಅಪರಾಧಿಗೆ 3 ವರ್ಷ ಸಾದಾ ಕಾರಾಗೃಹ ಶಿಕ್ಷೆ ಮತ್ತು 40 ಸಾವಿರ ರೂ. ದಂಡ ವಿಧಿಸಿ ತೀರ್ಪು ಪ್ರಕಟಿಸಿದ್ದಾರೆ. ಸರ್ಕಾರದ ಪರವಾಗಿ ಯು. ವಿನಯ ರಾಣಿ ವಾದ ಮಂಡಿಸಿದ್ದರು.

1440 ಹಳ್ಳಿಗಳನ್ನು ಕಸ್ತೂರಿ ರಂಗನ್ ವರದಿಯಿಂದ ಕೈಬಿಡಲು ಸಲಹೆ

• ಪ್ರಜೋದಯ ವರದಿ

ಬೆಂಗಳೂರು: ಕಸ್ತೂರಿ ರಂಗನ್ ವರದಿಯಲ್ಲಿ ನಮೂದಿಸಿರುವ 20,668 ಚದರ ಕಿ.ಮೀ. ಪರಿಸರ ಸೂಕ್ಷ್ಮ ಪ್ರದೇಶದ ಪೈಕಿ 16,000 ಚದರ ಕಿ.ಮೀ ಈಗಾ ಗಲೇ ಹುಲಿ ಸಂರಕ್ಷಿತ ಪ್ರದೇಶ, ಅಭಯಾರಣ್ಯ, ಮೀಸಲು ಅರಣ್ಯ ಹೀಗೆ ಒಂದಲ್ಲಾ ಒಂದು ರೀತಿಯಲ್ಲಿ ಶೇ.80ರಷ್ಟು ಸಂರಕ್ಷಿ ತವಾಗಿದೆ. ಇದರ ಹೊರತಾಗಿ 10 ಜಿಲ್ಲೆಗಳ 34 ತಾಲ್ಲೂಕಿನ 1,449 ಹಳ್ಳಿಗಳು ಸೂಕ್ಷ್ಮ ಪ್ರದೇ ಶದಲ್ಲಿವೆ. ಅವರಿಗೆ ನ್ಯಾಯ ಸಿಗಬೇಕು ಎಂದರೆ ಅಷ್ಟು ಪ್ರದೇಶ ಬಿಟ್ಟು ಬಿಡುವಂತೆ ಕೇಳಬೇಕೆಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ಅವರು ಸಲಹೆ ನೀಡಿದ್ದಾರೆ.

ವಿಧಾನಸಭೆಯಲ್ಲಿ ಸೋಮವಾರ ಕಸ್ತೂರಿ ರಂಗನ್ ವರದಿ ಕುರಿತ ಚರ್ಚೆಯ ವೇಳೆ ಮಧ್ಯ ಪ್ರವೇಶಿಸಿ ಮಾತನಾಡಿದ ಅವರು, ಅರಣ್ಯ ಇಲಾಖೆಯ ಅಧಿಕಾರಿಗಳನ್ನು ದೂಷಿಸುವುದರಿಂದ ಸಮಸ್ಯೆ ಪರಿಹಾರ ಆಗುವುದಿಲ್ಲ. ಅರಣ್ಯ ಸಂರಕ್ಷಣೆಗೆ ರಾಜ್ಯದ ಕಾಯಿದೆ ಮತ್ತು ಕೇಂದ್ರದ ಕಾಯಿದೆ ಇದೆ. ಅದನ್ನು ಪಾಲಿಸಬೇಕಾಗುತ್ತದೆ. ಇಲ್ಲವೇ ಕೇಂದ್ರ, ಸರ್ಕಾರ ಮತ್ತು ರಾಜ್ಯ ಸರ್ಕಾರ ಕಾಯಿದೆಗೆ ತಿದ್ದುಪಡಿ ತರಬೇಕಾಗುತ್ತದೆ ಎಂದರು.

ಒಂದೊಮ್ಮೆ ನ್ಯಾಯಲಯದ ಆದೇಶದಂತೆ ಈ ಅಧಿಸೂಚನೆಯನ್ನೇ ಅಂತಿಮಗೊಳಿಸಿದರೆ ಕಷ್ಟವಾಗುತ್ತದೆ. ಹೀಗಾಗಿ ಕೇಂದ್ರಕ್ಕೆ ನಿಯೋಗ ತೆಗೆದುಕೊಂಡು ಹೋಗುವ ಬಗ್ಗೆ ಹಾಗೂ ಒಮ್ಮತದಿಂದ ಶಾಶ್ವತ ಪರಿಹಾರ ಕಂಡುಕೊಳ್ಳಲು ಈ ಸದನ ನಿರ್ಣಯಿಸ ಬೇಕಾಗುತ್ತದೆ ಎಂದರು.

ಕೇರಳದಲ್ಲಿ ಸುಮಾರು 13 ಸಾವಿರ ಚದರ ಕಿ.ಮೀ. ಪರಿಸರ ಸೂಕ್ಷ್ಮ ಪ್ರದೇಶ ಇತ್ತು. ಇದನ್ನು 9,900 ಚ.ಕಿ.ಮೀ. ಇಳಿಸಲಾಗಿದೆ. ಅದೇ ರೀತಿ ಸಭೆ ಮಾಡಿ ಸಮೀಕ್ಷೆ ಮಾಡಬೇಕು. ಹಲವು ನದಿಗಳ ಮೂಲವಾದ ಪಶ್ಚಿಮ ಘಟ್ಟ 8ನೇ ಜೀವವೈವಿಧ್ಯ ತಾಣವಾಗಿದೆ. ಮಳೆಯ ಮಾರುತ ತಡೆದು ದೇಶವ್ಯಾಪ್ತಿ ಮಳೆ ಸುರಿಸಲು ನೆರವಾಗುತ್ತದೆ. ಹೀಗಾಗಿ ಅದನ್ನು ಸಂರಕ್ಷಿಸಬೇಕು. ಇಷ್ಟು ದಿನ ಅದು ಉಳಿದಿದ್ದರೆ ಅಲ್ಲಿನ ನಿವಾಸಿಗಳಿಂದ ಎಂದರು.

ನೇಪಾಳದ ದುರಂತ ನಮ್ಮ ಕಣ್ಣ ಮುಂದಿದೆ. ಜಾಗತಿಕ ತಾಪಮಾನ ಏರುತ್ತಿದೆ. ಇದನ್ನೂ ಗಮನಹರಿಸಬೇಕು. ಕೇಂದ್ರ ಅಧಿಸೂಚನೆ ಹೊರಡಿಸಿದ್ದು, ಅದಕ್ಕೂ ಉತ್ತರ ದಾಯಿತ್ವ ಇದೆ. ಹೀಗಾಗಿ ಆ ಪ್ರದೇಶಕ್ಕೆ ವಿಶೇಷ ಪ್ಯಾಕೇಜ್ ಘೋಷಿಸಬೇಕು. ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಮಸ್ಯೆ ಪರಿಹರಿಸಬೇಕು. ದೊಡ್ಡ ಒತ್ತುವರಿದಾರರಿಗೆ ಅವಕಾಶ ನೀಡಬಾರದು. ಯಾವುದೇ ರಾಜಕೀಯ ಬೆರೆಸದೆ, ಪರಿಸರ ಪ್ರಕೃತಿ ಸಂರಕ್ಷಿಸಬೇಕು ಎಂದರು.

ಕಸ್ತೂರಿ ರಂಗನ್ ವರದಿಗೆ ಸಂಬಂಧಿಸಿದಂತೆ ರಾಜ್ಯಗಳ ಸಲಹೆ ಪರಿಶೀಲಿಸಲು ನೇಮಕವಾದ ಸಂಜಯ ಕುಮಾರ್ ಸಮಿತಿ, ಪಶ್ಚಿಮಘಟ್ಟದ ಬಾಧಿತ ಗ್ರಾಮಗಳಿಗೆ ಭೇಟಿ ನೀಡಿ ಜನರ ಅಭಿಪ್ರಾಯವನ್ನೇ ಪಡೆಯಲಿಲ್ಲ. ನಾನು ಅರಣ್ಯ ಸಚಿವನಾಗಿದ್ದಾಗ ಸಂಜಯ್ ಕುಮಾರ್ ನನ್ನನ್ನು ಭೇಟಿ ಮಾಡಿದ್ದರು. ನಾನು ಗ್ರಾಮ ಪಂಚಾಯತಿಗಳಿಗೆ ಹೋಗಿ, ಜನವಸತಿ ಪ್ರದೇಶಕ್ಕೆ ಭೇಟಿ ನೀಡಿ ಅಭಿಪ್ರಾಯ ಪಡೆಯಲು ಸಲಹೆ ನೀಡಿದ್ದೆ. ಆದರೆ ಅವರು ತಮ್ಮ ಕರ್ತವ್ಯ ಮಾಡಲಿಲ್ಲ ಎಂದರು.

ಹಾಸನದಲ್ಲೂ ನಾಟಕ ತರಬೇತಿ ಸಂಸ್ಥೆ ಸ್ಥಾಪನೆಯಾಗಲಿ

» ಮೊದಲನೇ ಪುಟದಿಂದ

1994-95ರ ಅವಧಿಯಲ್ಲಿ ಕನ್ನಡಪರ ಹಾಗು ರೈತ ಸಂಘಟನೆಗಳು ಬಲಿಷ್ಠವಾಗಿದ್ದವು. ಸರ್ಕಾರವನ್ನೇ ಬದಲಿಸುವ ಛಾತಿ ಸಂಘಟನೆಗಳಲ್ಲಿತ್ತು. ನಮ್ಮ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಿದರೆ ಶ್ರಮಕ್ಕೆ ಪ್ರತಿಫಲ ಸಿಗುತ್ತದೆಂಬುದಕ್ಕೆ ಶಿವಾನಂದ ತಗಡೂರು ಸಾಕ್ಷಿ ಎಂದರು.

ಕೆಯೂಡಬ್ಲ್ಯೂಜೆ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ ಅವರು ಮಾತನಾಡಿ, ಶಿವಾನಂದ ತಗಡೂರು ಅವರ ನೇತೃತ್ವದಲ್ಲಿ ರಾಜ್ಯದ ಪತ್ರಕರ್ತರಿಗೆ ಅನೇಕ ರೀತಿಯ ಅನುಕೂಲ ಆಗುತ್ತಿದೆ. ಸಂಘಟನೆ ವಿಚಾರದಲ್ಲಿ ಮಾತ್ರ ನಾವು ಕೆಲವು ಮಾತುಗಳನ್ನಾಡಬಹುದು. ಅದು ಕೆಲವರಿಗೆ ಇರಿಸು ಮುರುಸು ತರಬಹುದು. ಆದರೆ ಶಿವಾನಂದ್ ಅವರು ಎಲ್ಲವನ್ನೂ ಸಹಿಸಿಕೊಂಡು ಪ್ರಾಮಾಣಿಕ ಕೆಲಸ ಮಾಡುತ್ತಿದ್ದಾರೆಂದು ಪ್ರಶಂಸಿದರು.

ಸಂಘದ ಮಾಜಿ ಜಿಲ್ಲಾಧ್ಯಕ್ಷ ಬಾಳ್ಳುಗೋಪಾಲ್ ಅವರು ಮಾತನಾಡಿ, ಬಾಗೂರು-ನವಿಲೆ ಹೋರಾಟದ ಮೂಲಕ ಪತ್ರಿಕೋದ್ಯಮಕ್ಕೆ ಬಂದ ಶಿವಾನಂದ ತಗಡೂರು, ಇಷ್ಟು ಎತ್ತರಕ್ಕೆ ಬೆಳೆಯಲು ಅವರ ಕರ್ತವ್ಯ, ಗುರಿ ಕಾರಣ. ಯಾವುದೇ ಸಾಧನೆಗೆ ಛಲ ಬೇಕು, ದೃಢ ನಿರ್ಧಾರ ಬೇಕು. ಹಾಗೆಯೇ ತ್ಯಾಗ ಗುಣವೂ ಇರಬೇಕು. ಅದೆಲ್ಲವೂ ಶಿವಾನಂದ ಅವರಲ್ಲಿದೆ. ಸೋಲೇ ಗೆಲುವಿನ ಮೆಟ್ಟಿಲು ಎಂದುಕೊಂಡು ತಾಳ್ಮೆಯಿಂದ ಕೆಲಸ ಮಾಡಿದ್ದರ ಪರಿಣಾಮ ಇಂದು ರಾಜ್ಯ ಮಟ್ಟದಲ್ಲೂ ಬೆಳೆದಿದ್ದಾರೆ. ಈ ಮೂಲಕ ನಮ್ಮೆಲ್ಲರಿಗೂ ಗೌರವ ತಂದುಕೊಟ್ಟಿದ್ದಾರೆಂದು ಮೆಚ್ಚುಗೆ ವ್ಯಕ್ತಪಡಿಸಿದರು.

ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಕೆಪಿಎಸ್ ಪ್ರಮೋದ್ ಅವರು ಮಾತನಾಡಿ, ರಂಗಭೂಮಿಯ ಮೂಲಕ ಸಾಮಾಜಿಕ ಕಳಕಳಿಯ ವಿಚಾರಗಳನ್ನು ಜನರಿಗೆ ತಲುಪಿಸುವುದರ ಜೊತೆಗೆ ನಾಟಕ ಪ್ರದರ್ಶನ, ನಾಟಕೋತ್ಸವ ಹಾಗು ವಿವಿಧ ಕಲಾ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವ ಮೂಲಕ ರಂಗಭೂಮಿಯ ಬೆಳವಣಿಗೆಗೆ ಶಿವಾನಂದ ತಗಡೂರು ಕೊಡುಗೆ ನೀಡಿದ್ದಾರೆಂದರು.

ಮತ್ತೊಬ್ಬ ಮಾಜಿ ಅಧ್ಯಕ್ಷ ಕೆ.ಆರ್.ಮಂಜುನಾಥ್ ಅವರು ಮಾತನಾಡಿ, ತಗಡೂರು ರಾಜ್ಯ ಮಟ್ಟದಲ್ಲಿ ಛಾಪು ಮೂಡಿಸಿದ್ದಾರೆ. ಬಾಗೂರು ನವಿಲೆ ಚಳವಳಿಯನ್ನು ರಾಷ್ಟ್ರ ಮಟ್ಟಕ್ಕೆ ತಲುಪಿಸಿದರು. ಅದರಲ್ಲಿ ಯಶಸ್ಸು ಕಂಡರು. ಅವರು ತಂಡ ಕಟ್ಟಿಕೊಂಡು ಅಭಿನಯಿಸಿರುವ ನಾಟಕಗಳು ಅಪಾರ ಜನಮನ್ನಣೆ ಗಳಿಸಿವೆ. ರಾಜ್ಯ ಮಟ್ಟದಲ್ಲಿ ಹೆಸರು ಮಾಡಿವೆ. ಈ ಪ್ರಶಸ್ತಿ ಮೊದಲೇ ಬರಬೇಕಿತ್ತು. ಮೂರನೇ ಬಾರಿಗೆ ಕೆಯೂಡಬ್ಲ್ಯೂಜೆ ಅಧ್ಯಕ್ಷರಾಗುವುದು ಸಾಮಾನ್ಯ ಅಲ್ಲ ಎಂದರು.

ರಾಷ್ಟ್ರೀಯ ಮಂಡಳಿ ಸದಸ್ಯ ರವಿ ನಾಕಲಗೂಡು ಅವರು ಮಾತನಾಡಿ, ಯೋಗ್ಯರಿಗೆ ಯೋಗ್ಯ ಪ್ರಶಸ್ತಿ ಸಂದಿದೆ. ಕೋವಿಡ್ ಸಂದರ್ಭದಲ್ಲಿ ಅವರ ಕೆಲಸ ಶ್ಲಾಘನೀಯ ಎಂದರು. ಮಾಜಿ ಅಧ್ಯಕ್ಷರಾದ ಬಿ.ಆರ್.ಉದಯ್ ಕುಮಾರ್, ಕೆ.ಹೆಚ್.ವೇಣುಕುಮಾರ್, ಕಾರ್ಯದರ್ಶಿ ಕೆ.ಎಂ.ಹರೀಶ್, ಸಾಂಸ್ಕೃತಿಕ ಸಮಿತಿ ಸಂಚಾಲಕ ಚಲಂ ಹಾಡ್ಲಹಳ್ಳಿ, ಚನ್ನರಾಯಪಟ್ಟಣ ತಾ.ಪತ್ರಕರ್ತರ ಸಂಘದ ಅಧ್ಯಕ್ಷ ದಯಾನಂದ್ ಶೆಟ್ಟಿಹಳ್ಳಿ, ಅರಸೀಕೆರೆಯ ಟಿ.ಆನಂದ್, ಆಲೂರಿನ ಆದಿಲ್, ಬೇಲೂರಿನ ಬಿ.ಬಿ.ಶಿವರಾಜ್, ಸಕಲೇಶಪುರದ ಕಾಂತರಾಜ್ ಹೊನ್ನೇಕೋಡಿ, ಮಲ್ನಾಡ್ ಮೆಹಬೂಬ್, ಹೆತ್ತೂರು ನಾಗರಾಜ್, ಆಲೂರು ಹರೀಶ್ ಮೊದಲಾದವರು ಮಾತನಾಡಿದರು.

ಸಂಘದ ಉಪಾಧ್ಯಕ್ಷ ಜಿ.ಪ್ರಕಾಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯದರ್ಶಿ ಬಿ.ಆರ್.ಬೊಮ್ಮೇಗೌಡ ನಿರೂಪಿಸಿದರು. ಪ್ರಧಾನ ಕಾರ್ಯದರ್ಶಿ ಕೆ.ಜಿ.ಸುರೇಶ್ ಸ್ವಾಗತಿಸಿದರು. ಖಜಾಂಚಿ ಪ್ರಕಾಶ್ ಬೆಳವಾಡಿ ವಂದಿಸಿದರು. ಕಾರ್ಯದರ್ಶಿ ಖುಷ್ವಂತ್ ಹಾಗು ಪತ್ರಕರ್ತರು ಹಾಜರಿದ್ದರು.

ಪತ್ರಕರ್ತರ ಕ್ಷೇಮಾಭಿವೃದ್ಧಿ ನಿಧಿಗೆ 10 ಲ.ರೂ. ಸಂಗ್ರಹ

• ಪ್ರಜೋದಯ ವರದಿ

ಬೇಲೂರು: ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಪತ್ರಕರ್ತರ ಕ್ಷೇಮಾಭಿವೃದ್ಧಿಗಾಗಿ ಸ್ಥಾಪಿಸುತ್ತಿರುವ ನಿಧಿಗೆ 10 ಲಕ್ಷ ರೂ. ಸಂಗ್ರಹವಾಗಿದ್ದು, ಶೀಘ್ರದಲ್ಲೇ ಈ ಹಣವನ್ನು ಠೇವಣಿ ಮಾಡಿ ಅಗತ್ಯ ಸಂದರ್ಭದಲ್ಲಿ ಪತ್ರಕರ್ತರು ಹಾಗೂ ಅವರ ಕುಟುಂಬಗಳಿಗೆ ನೆರವಾಗುವ ಉದ್ದೇಶ ಹೊಂದಲಾಗಿದೆ ಎಂದು ಸಂಘದ ಅಧ್ಯಕ್ಷ ಬಿ.ಬಿ.ಶಿವರಾಜು ಅವರು ತಿಳಿಸಿದರು.

ಪಟ್ಟಣದಲ್ಲಿ ಪತ್ರಕರ್ತರ ಕ್ಷೇಮಾಭಿವೃದ್ಧಿ ನಿಧಿಗೆ 1,11,111 ರೂ. ಕೊಡುಗೆ ನೀಡಿದ ಗ್ರಾನೈಟ್ ಉದ್ಯಮಿ ರಾಜಶೇಖರ್ ಅವರಿಗೆ ಕೃತಜ್ಞತೆ ಸಲ್ಲಿಸಿ ಮಾತನಾಡಿದ ಅವರು, ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ರಾಜ್ಯ ಉಪಾಧ್ಯಕ್ಷ ಹಾಗೂ ಮಾರ್ಗದರ್ಶಕರಾದ ಹೆಚ್.ಬಿ. ಮದನಗೌಡ, ಬೇಲೂರು ತಾಲ್ಲೂಕು ಉಸ್ತುವಾರಿ, ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಕೆ.ಪಿ.ಎಸ್.ಪ್ರಮೋದ್ ಹಾಗೂ ಜಿಲ್ಲಾಧ್ಯಕ್ಷ ಜೆ.ಆರ್.ಕೆಂಚೇಗೌಡ ಅವರ ಮಾರ್ಗದರ್ಶನದಿಂದ ಕ್ಷೇಮಾಭಿವೃದ್ಧಿ ನಿಧಿಯನ್ನು ರೂಪಿಸುವ ಕನಸು ನನಸಾಗಿದೆ ಎಂದರು.

ಈ ಹಿಂದೆ ಮಾಜಿ ಶಾಸಕ ಕೆ.ಎಸ್. ಲಿಂಗೇಶ್ ಅವರು 2 ಲಕ್ಷ ರೂ., ಹೆಚ್ ಡಿಸಿಸಿ ಬ್ಯಾಂಕ್ ನಿರ್ದೇಶಕ ಎಂ.ಎ. ನಾಗರಾಜು 2 ಲಕ್ಷ ರೂ., ಗ್ರಾನೈಟ್ ಉದ್ಯಮಿ ರಾಜಶೇಖರ್ 1,11,111 ಲಕ್ಷ ರೂ.ಹಾಗೂ ಮಾಜಿ ಸಚಿವ ಬಿ.ಶಿವರಾಂ 1 ಲಕ್ಷ ರೂ. ಸೇರಿ ವಿವಿಧ ದಾನಿಗಳು ನೀಡಿದ ಕೊಡುಗೆ ಹಾಗೂ ಪತ್ರಕರ್ತರ ದಿನಾಚರಣೆ, ಪತ್ರಿಕಾ ಗೋಷ್ಠಿ ಸೇರಿ ವಿವಿಧ ಕಾರ್ಯಕ್ರಮಗಳಿಂದ ಉಳಿದ ಹಣವನ್ನು ಕ್ರೋಢೀಕರಿಸಿ ಒಟ್ಟು 10 ಲಕ್ಷ ರೂ. ನಿಧಿ ಸಂಗ್ರಹಿಸಲಾಗಿದೆ ಎಂದು ತಿಳಿಸಿದರು.

ಈ ಹಣವನ್ನು ಶೀಘ್ರದಲ್ಲೇ ಠೇವಣಿ ಇಟ್ಟು, ಅದರಿಂದ ಬರುವ ಆದಾಯವನ್ನು ಪತ್ರಕರ್ತರು ಹಾಗು ಅವರ ಕುಟುಂಬದ ಸದಸ್ಯರು ಅನಾರೋಗ್ಯಕ್ಕೆ ಒಳಗಾದ ಸಂದರ್ಭದಲ್ಲಿ, ಮಕ್ಕಳ ವಿದ್ಯಾಭ್ಯಾಸ ಸೇರಿ ತುರ್ತು ಅಗತ್ಯಗಳಿಗೆ ಬಳಸುವ ಉದ್ದೇಶವಿದೆ. ನಿಧಿಯನ್ನು ಪಾರದರ್ಶಕವಾಗಿ ಮತ್ತು ನಿಯಮಾನುಸಾರ ನಿರ್ವಹಿಸಲಾಗುವುದೆಂದು ಹೇಳಿದರು.

ಗ್ರಾನೈಟ್ ರಾಜಶೇಖರ್ ಅವರು ಮಾತನಾಡಿ, ಪತ್ರಕರ್ತರ ದಿನಾಚರಣೆ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಬಿ.ಬಿ.ಶಿವರಾಜು ಅವರು ಪತ್ರಕರ್ತರ ಕ್ಷೇಮಾಭಿವೃದ್ಧಿ ನಿಧಿಗಾಗಿ ಸಹಾಯ ಮಾಡುವಂತೆ ಮನವಿ ಮಾಡಿದ್ದರು. ಪ್ರತಿವರ್ಷ ನಡೆಯುವ ದಿನಾಚರಣೆಗೆ ನೀಡುವ ನೆರವು ಖರ್ಚಾಗಿ ಹೋಗುತ್ತದೆ. ಆದರೆ ಪತ್ರಕರ್ತರ ಕ್ಷೇಮಾಭಿವೃದ್ಧಿ ನಿಧಿಯಾಗಿ ಹಣವನ್ನು ಠೇವಣಿ ಮಾಡಿದರೆ ಅದರ ಬಡ್ಡಿಯಿಂದ ಸಂಕಷ್ಟದಲ್ಲಿರುವ ಪತ್ರಕರ್ತರ ಕುಟುಂಬಗಳಿಗೆ, ಅನಾರೋಗ್ಯ ಸಂದರ್ಭಗಳಲ್ಲಿ ಹಾಗೂ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವು ನೀಡಬಹುದೆಂಬ ಉದ್ದೇಶದಿಂದ 1,11,111 ಲಕ್ಷ ರೂ. ನೀಡುವುದಾಗಿ ಅಂದು ವಾಗ್ದಾನ ಮಾಡಿದ್ದೆ. ಅದರಂತೆ ಇಂದು ಹಣವನ್ನು ಸಂಘಕ್ಕೆ ಹಸ್ತಾಂತರಿಸುತ್ತಿದ್ದೇನೆ ಎಂದರು.

ನೀಡಿರುವ ಹಣ ಯಾವುದೇ ರೀತಿಯಲ್ಲಿ ದುರುಪಯೋಗವಾಗದೆ, ನಿಜವಾದ ಅಗತ್ಯ ವಿರುವ ಪತ್ರಕರ್ತರಿಗೆ ಸದುಪಯೋಗವಾಗಬೇಕು. ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುವ ಪತ್ರಕರ್ತರ ಕ್ಷೇಮಾಭಿವೃದ್ಧಿಗೆ ಈ ನಿಧಿ ಬಳಕೆಯಾಗಲಿ ಎಂದು ಆಶಿಸಿದರು.

ಪತ್ರಕರ್ತರಾದ ಬಿ.ಎನ್.ಗಣೇಶ್, ಮಲ್ಲೇಶ್, ಬಿ.ಆರ್.ಲೋಹಿತ್, ಎಸ್.ಕೆ.ನಾಗೇಶ್, ಸುನೀಲ್ ಮತ್ತಿತರರು ಉಪಸ್ಥಿತರಿದ್ದರು.

ಲಕ್ಷ್ಮಿ ವೆಂಕಟರಮಣಸ್ವಾಮಿ ರಾಜಗೋಪುರ ಉದ್ಘಾಟನೆ

» ಮೊದಲನೇ ಪುಟದಿಂದ

ಯಕ್ಕೆ ಸಂಬಂಧಿಸಿ ಹಲವು ಅಭಿ ವೃದ್ಧಿ ಕಾಮಗಾರಿಗಳು ನಡೆಯುತ್ತಿದ್ದು, ಈಗಾಗಲೇ ಪೂರ್ಣಗೊಂಡಿ ರುವ ರಾಜಗೋಪುರ, ಯಾತ್ರಿ ನಿವಾಸ ಹಾಗು ದಾಸೋಹ ಮಂದಿರ ವನ್ನು ಲೋಕಾರ್ಪಣೆ ಮಾಡಲು ಒಮ್ಮತದ ತೀರ್ಮಾನ ಕೈಗೊಳ್ಳಲಾಗಿದೆ ಎಂದರು.

ರಾಜ ಗೋಪುರ ಲೋಕಾರ್ಪಣೆ ದೇವಾಲಯದ ಸಂಪ್ರದಾಯದಂತೆ ಹಾಗು ಧಾರ್ಮಿಕ ವಿಧಿ ವಿಧಾನಗ ಳಿಂದ ನ.15 ರಂದು ನಡೆಯಲಿದ್ದು, 16 ರಂದು ಧಾರ್ಮಿಕ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಈ ಸಮಾರಂಭದಲ್ಲಿ ಮುಜರಾಯಿ ಸಚಿವ ಬಸಂತಪ್ಪ ಸೇರಿ ದೇವಾಲಯದ ಅಭಿವೃದ್ಧಿ ಸಮಿತಿ ಹಾಗು ಗ್ರಾಮಸ್ಥರು ತೀರ್ಮಾ ನಿಸಿ ಮಠಾಧೀಶರು ಹಾಗು ಇತರ ಗಣ್ಯರನ್ನು ಸಮಾರಂಭಕ್ಕೆ ಆಹ್ವಾನಿಸ ಲಿದ್ದಾರೆಂದು ಹೇಳಿದರು.

ಎರಡು ದಿನಗಳ ಕಾಲ ನಡೆಯುವ ಧಾರ್ಮಿಕ ಸಮಾರಂಭದಲ್ಲಿ ಪಾಲ್ಗೊ ಳ್ಳುವ ಭಕ್ತಾದಿಗಳಿಗೆ ನಿರಂತರ ದಾಸೋಹ ವ್ಯವಸ್ಥೆ ಹಮ್ಮಿಕೊಳ್ಳಲಾಗಿದೆ. ಅಲ್ಲದೆ ಇದೇ ಸಂದರ್ಭದಲ್ಲಿ ಇತರೆ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಲಾಗು ವುದೆಂದು ಸಚಿವರು ತಿಳಿಸಿದರು.

ಸಂಪ್ರದಾಯದಂತೆ ಸ್ವಾಗತ

ಸಚಿವರಾದ ಬಳಿಕ ಮೊದಲ ಬಾರಿಗೆ ದೇವಾಲಯಕ್ಕೆ ಆಗಮಿಸಿದ ಶಿವಲಿಂಗೇಗೌಡ ಅವರಿಗೆ ದೇವಾಲಯದ ಸಂಪ್ರದಾಯದಂತೆ ಮಂಗಳವಾದ್ಯ ಸಮೇತ ಪೂರ್ಣಕುಂಭ ಸ್ವಾಗತ ಕೋರಲಾಯಿತು. ಮಂಗಳಾರತಿ ಬಳಿಕ ತೀರ್ಥ ಪ್ರಸಾದ ಪಡೆದ ಸಚಿವರು ಉತ್ತಮ ಮಳೆ ಬೆಳೆಯಾಗಿ ರಾಜ್ಯದ ಜನತೆ ಸಮೃದ್ಧಿಯಾಗಿ ಜೀವನ ನಡೆಸುವಂತಾಗಲಿ ಎಂದು ಲಕ್ಷ್ಮಿವೆಂಕಟರಮಣ ಸ್ವಾಮಿಯಲ್ಲಿ ಪ್ರಾರ್ಥಿಸುವುದಾಗಿ ಹೇಳಿದರು.

ತಹಶೀಲ್ದಾರ್ ಅಶೋಕ್, ಗ್ರಾಮಸ್ಥರಾದ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಗಿರೀಶ್, ರೇಣುಕಾಸ್ವಾಮಿ, ರಂಗಸ್ವಾಮಿ, ಅಮ್ಮನಹಟ್ಟಿ ಹರೀಶ್, ಮಾಜಿ ಸದಸ್ಯ ಈಶ್ವರ್ ಇತರರು ಉಪಸ್ಥಿತರಿದ್ದರು.

ಸರ್ಕಾರ ದಿವಾಳಿಯಾಗಿದ್ದರೆ 10 ಎಕರೆ ಜಮೀನು ಕೊಡುವೆ

» ಮೊದಲನೇ ಪುಟದಿಂದ

ಪ್ರದೇಶದಲ್ಲಿ 17 ಟಿಎಂಸಿ ನೀರು ಹರಿದಿದೆ. ಆದರೂ ಕೆರೆ-ಕಟ್ಟೆಗಳು ಭರ್ತಿಯಾಗದಿರುವುದು ಏಕೆ ಎಂಬುದನ್ನು ಸರ್ಕಾರ ಸ್ಪಷ್ಟಪಡಿಸಬೇಕು. ನಾಲೆಗಳಲ್ಲಿ ಗಿಡಗಂಟಿ, ಹೂಳು ತುಂಬಿಕೊಂಡಿದ್ದು ನೀರು ಸರಾಗವಾಗಿ ಹರಿಯದ ಸ್ಥಿತಿ ನಿರ್ಮಾಣವಾಗಿದೆ. ಹೇಮಾವತಿ ಜಲಾಶಯದಿಂದ ನಾಲೆಗಳಿಗೆ ನೀರು ಹರಿಸಲಾಗುತ್ತಿದ್ದರೂ ಜಿಲ್ಲೆಯ ಹಲವು ಕೆರೆ-ಕಟ್ಟೆಗಳು ಇನ್ನೂ ಭರ್ತಿಯಾಗಿಲ್ಲ. ಏತ ನೀರಾವರಿ ಯೋಜನೆಗಳ ಯಂತ್ರೋಪಕರಣಗಳು ಕೆಟ್ಟುಹೋಗಿದ್ದು, ದುರಸ್ತಿ ಮಾಡದ ಕಾರಣ ಯೋಜನೆಗಳು ನಿಷ್ಪ್ರಯೋಜಕವಾಗಿವೆ. ಅದರಿಂದ ಆಯಾ ಯೋಜನೆಗಳ ವ್ಯಾಪ್ತಿಯ ನೂರಾರು ಕೆರೆಗಳಿಗೆ ನೀರು ತಲುಪುತ್ತಿಲ್ಲವೆಂದು ದೂರಿದರು.

ತಟ್ಟೆಕೆರೆ ಏತ ನೀರಾವರಿ ಯೋಜನೆ ಕೆಟ್ಟುಹೋಗಿದೆ. ಕಾಮಸಮುದ್ರ ಯೋಜನೆ ಪೂರ್ಣಗೊಳಿಸಲು ಅಗತ್ಯ ಹಣ ನೀಡುತ್ತಿಲ್ಲ. ಮಲ್ಲಪ್ಪನಹಳ್ಳಿ ನಾಲೆಯಲ್ಲಿ ಗಿಡಗಂಟಿ, ಮರಗಿಡ ಬೆಳೆದಿದ್ದರೂ ಸ್ವಚ್ಛಗೊಳಿಸಿಲ್ಲ. ಹೀಗಾಗಿ ಸ್ವಂತ ಹಣದಲ್ಲಿ ನಾಲೆ ದುರಸ್ತಿ ಹಾಗು ಸ್ವಚ್ಛತಾ ಕಾರ್ಯ ಮಾಡಿಸುತ್ತಿದ್ದೇನೆಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸೋಮನಹಳ್ಳಿ ನಾಗರಾಜು, ಉಪಾಧ್ಯಕ್ಷ ರಾಂಪುರ ಶೇಖರಪ್ಪ, ನಿರ್ದೇಶಕ ಹೊಸೂರು ಗಂಗಾಧರ್, ಗಂಡಸಿಮಂಜಣ್ಣ, ಚಂದ್ರಶೇಖರ್ ಹಾಜರಿದ್ದರು.

ಕ್ಯಾಂಟರ್ ಡಿಕ್ಕಿ : ಬೈಕ್ ಸವಾರ ಸಾವು

• ಪ್ರಜೋದಯ ವರದಿ

ಹಾಸನ: ಕ್ಯಾಂಟರ್ ಡಿಕ್ಕಿಯಾಗಿ ಬೈಕ್ ಸವಾರ ಮೃತಪಟ್ಟು ಮತ್ತೊಬ್ಬ ಗಂಭೀರ ಗಾಯಗೊಂಡಿರುವ ಘಟನೆ ತಾಲ್ಲೂಕಿನ ಕೋಣನಕಂಡಿ ಕ್ರಾಸ್ ಸಮೀಪ ನಡೆದಿದೆ.

ಅರಕಲಗೂಡು ತಾಲ್ಲೂಕು ಅಬ್ಬೂರು ಮಾಚಗೌಡನಹಳ್ಳಿಯ ಎ.ಸಿ.ಧನುಷ್ ಆಚಾರ್ಯ ಮೃತರು. ಹಿಂಬದಿ ಸವಾರ ಎಂ.ಎಸ್.ಆದಿತ್ಯ ಗಾಯಗೊಂಡಿದ್ದು ಹಿಮ್ಸ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಭಾನುವಾರ ಮಧ್ಯಾಹ್ನ ಹಾಸನದಿಂದ ಇಬ್ಬರೂ ಸ್ಕೂಟಿಯಲ್ಲಿ ಊರಿಗೆ ಹೊರಟಿದ್ದರು. ಈ ವೇಳೆ ಎದುರುಗಡೆಯಿಂದ ವೇಗವಾಗಿ ಬಂದ ಕ್ಯಾಂಟರ್ ಡಿಕ್ಕಿಯಾಗಿದೆ. ಅಪಘಾತದ ರಭಸಕ್ಕೆ ತೀವ್ರ ರಕ್ತಸ್ರಾವವಾಗಿ ಧನುಷ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗೊರೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿರ್ಲಕ್ಷ್ಯದ ಚಾಲನೆಯಿಂದ ಬೈಕ್ ಸವಾರ ಸಾವು

• ಪ್ರಜೋದಯ ವರದಿ

ಅರಸೀಕೆರೆ: ನಿರ್ಲಕ್ಷ್ಯದ ಚಾಲನೆಯಿಂದ ಹಂಪ್ಸ್ ಹತ್ತಿಸುವಾಗ ನಿಯಂತ್ರಣ ತಪ್ಪಿ ಬೈಕ್ ಮೇಲಿಂದ ಬಿದ್ದ ಸವಾರ ಮೃತಪಟ್ಟಿರುವ ಘಟನೆ ನಗರ ಹೊರವಲಯದ ಕೇಕ್ ವರ್ಲ್ಡ್ ಬೇಕರಿ ಸಮೀಪ ನಡೆದಿದೆ.

ವಿಜಯನಗರ ಜಿಲ್ಲೆ ಚಿನಾಸಿರಲಂ ಗ್ರಾಮದ ನೆಲ್ಲಿ ಸುರೇಶ್ ಮೃತರು. ದಟ್ಟ (ಹಾಸಿಗೆ ಹೊಲೆಯುವ ವೃತ್ತಿ)ದ ಕೆಲಸ ಮಾಡಿಕೊಂಡಿಕೊಂಡಿದ್ದ ಸುರೇಶ್ ಕಡೂರಿನಿಂದ ಅರಸೀಕೆರೆಗೆ ಬರುತ್ತಿದ್ದಾಗ ಅತಿವೇಗ ಮತ್ತು ಅಜಾಗರೂಕ ಚಾಲನೆಯಿಂದ ಹಂಪ್ಸ್ ಹಾರಿಸಿ ರಸ್ತೆ ಮೇಲೆ ಬಿದ್ದಿದ್ದಾರೆ. ತಲೆಗೆ ಬಲವಾದ ಪೆಟ್ಟು ಬಿದ್ದಿದ್ದರಿಂದ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸ್ವಂತ ಖರ್ಚಿನಲ್ಲಿ ನಾಲೆ ಸ್ವಚ್ಛತೆಗೆ ಮುಂದಾದ ರೇವಣ್ಣ

» ಮೊದಲನೇ ಪುಟದಿಂದ

ಗೊಳಿಸಿ ಲಭ್ಯವಿರುವ ನೀರನ್ನು ಕೆರೆಗಳಿಗೆ ಸಮರ್ಪಕವಾಗಿ ಹರಿಸಬೇಕಾಗಿದೆ ಎಂದು ರೈತರು ಹೇಳಿದರು.

ರೇವಣ್ಣ ಅವರು ಸ್ಥಳದಲ್ಲೇ ನಿಂತು ಸ್ವಚ್ಛತಾ ಕಾರ್ಯದ ಮೇಲ್ವಿಚಾರಣೆ ನಡೆಸುತ್ತಿರುವುದಕ್ಕೆ ಸ್ಥಳೀಯ ರೈತರು ಮೆಚ್ಚುಗೆ ವ್ಯಕ್ತಪಡಿಸಿದ್ದು, ಸರ್ಕಾರ ಕೂಡ ನಾಲೆಗಳ ದುರಸ್ತಿ ಹಾಗೂ ಸ್ವಚ್ಛತೆಗೆ ಅಗತ್ಯ ಅನುದಾನ ಬಿಡುಗಡೆ ಮಾಡಬೇಕೆಂದು ರೈತರು ಒತ್ತಾಯಿಸಿದ್ದಾರೆ.

ಜಲಾಶಯ ಬರಿದಾಗುವ ಆತಂಕ

ಭೀಕರ ಬರದಿಂದಾಗಿ ಈ ಬಾರಿ ಹೇಮಾವತಿ ಜಲಾಶಯ ಬೇಗ ಬರಿದಾಗುವ ಆತಂಕ ಕಾಡುತ್ತಿದೆ. 37.103 ಟಿಎಂಸಿ ನೀರು ಸಂಗ್ರಹ ಸಾಮರ್ಥ್ಯದ ಹೇಮಾವತಿ ಜಲಾಶಯದಲ್ಲಿ ಪ್ರಸ್ತುತ 16.106 ಟಿಎಂಸಿ ನೀರಿದೆ. 950 ಕ್ಯೂಸೆಕ್ ಒಳಹರಿವಿದ್ದು, ನದಿಗೆ 3800 ಕ್ಯೂಸೆಕ್, ಎಡದಂಡೆ ನಾಲೆಗೆ 4000 ಕ್ಯೂಸೆಕ್, ಬಲದಂಡೆ ನಾಲೆಗೆ 400 ಕ್ಯೂಸೆಕ್ ನೀರು ಹರಿಸಲಾಗುತ್ತಿದೆ. ಡೆಡ್ ಸ್ಟೋರೇಜ್ 4 ಟಿಎಂಸಿ ನೀರನ್ನು ಯಾವುದಕ್ಕು ಬಳಸುವಂತಿಲ್ಲ. ಈ ಲೆಕ್ಕಾಚಾರದ ಪ್ರಕಾರ ಉಳಿಯುವುದು ಕೇವಲ 12 ಟಿಎಂಸಿ ಮಾತ್ರ. ಇಷ್ಟು ಕಡಿಮೆ ನೀರಿನಲ್ಲಿ ಮಳೆಗಾಲದ ವರೆಗೆ ರೈತರನ್ನು ಉಳಿಸಿಕೊಳ್ಳುವುದು ಅನಿವಾರ್ಯವಾಗಿದೆ. ಈ ನಡುವೆ ಕಾವೇರಿ ನದಿ ಮೂಲಕ ತಮಿಳುನಾಡಿಗೆ ನೀರು ಹರಿಸಲೇಬೇಕೆಂಬ ಆದೇಶ ಇರುವ ಹಿನ್ನಲೆ ಯಲ್ಲಿ ನದಿಗೆ ನೀರಿನ ಹರಿವು ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ. ಈ ಹಿನ್ನಲೆಯಲ್ಲಿ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ನಾಲೆ ಸ್ವಚ್ಛತೆ ಮೂಲಕ ರೈತರಿಗೆ ನೆರವಾಗುತ್ತಿದ್ದಾರೆ.

ನಾಳೆ ಹಾಸನ, ಮಗ್ಗೆ, ಕಂದಲಿ ಭಾಗದಲ್ಲಿ ವಿದ್ಯುತ್ ವ್ಯತ್ಯಯ

• ಪ್ರಜೋದಯ ವರದಿ

ಹಾಸನ: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದಿಂದ ಹಾಸನ, ಮಗ್ಗೆ, ಕಂದಲಿ, ಬಾಳ್ಳುಪೇಟೆ, ಸಕಲೇಶಪುರ, ಹಾನುಬಾಳು ಮತ್ತು ಅರೇಹಳ್ಳಿ ವಿ.ವಿ. ಕೇಂದ್ರ ಹಾಗೂ 66 ಕೆ.ವಿ. ಮಾರ್ಗಗಳಲ್ಲಿ ತ್ರೈಮಾಸಿಕ/ತುರ್ತು ನಿರ್ವಹಣಾ ಕೆಲಸ ಹಮ್ಮಿಕೊಂಡಿರುವುದರಿಂದ ಸೆ.23 ರಂದು ಬೆಳಿಗ್ಗೆ 9 ರಿಂದ ಸಂಜೆ 6 ಗಂಟೆಯವರೆಗೆ ಹಾಸನ ವಿ.ವಿ ಕೇಂದ್ರದಿಂದ ವಿದ್ಯುತ್ ಸರಬರಾಜಾಗುವ ಸಂತೆಪೇಟೆ ಸರ್ಕಲ್, ಸಿದ್ದಯ್ಯನಗರ, ಗಾಂಧಿ ಬಜಾರ್, ತಣ್ಣೀರುಹಳ್ಳ, ವಿಜಯನಗರ, ಕೆ.ಹೆಚ್.ಬಿ.ಶ್ರೀನಗರ, ಎನ್.ಆರ್. ವೃತ್ತ, ಹಾಸನಾಂಬ ದೇವಾಲಯ ಸುತ್ತಮುತ್ತ, ಹುಣಸಿನಕೆರೆ, ಮೈಕ್ರೊವೇವ್, ಬಿಟ್ಟಗೋಡನಹಳ್ಳಿ, ಮೆಡಿಕಲ್ ಕಾಲೇಜು, ಡಿ.ಸಿ.ಕಚೇರಿ, ಎಸ್.ಪಿ. ಕಚೇರಿ, ಆಜಾದ್ ರೋಡ್, ವಲ್ಲಭಾಯ್ ರೋಡ್, ನಗರ ಸಭೆ ಕಾರ್ಯಾಲಯ, ಕಟ್ಟಿನಕೆರೆ ಮಾರ್ಕೆಟ್, ದೇವೇಗೌಡ ನಗರ, ಹನುಮಂತಪುರ, ಅಗಿಲೆ, ಎರೆಬೋರೆಕಾವಲು, ತಟ್ಟೆಕೆರೆ, ಮಾರಿಗುಡಿಕೊಪ್ಪಲು, ಚನ್ನಪಟ್ಟಣ, ಹೊಸಕೊಪ್ಪಲು, ದೇವಮ್ಮ ಬಡಾವಣೆ, ಮಾರ್ಗನಹಳ್ಳಿ, ಬೈಲಹಳ್ಳಿ, ಬಸವೇಶ್ವರನಗರ, ಹೊಯ್ಸಳ ರೆಸಾರ್ಟ್ ವಿದ್ಯುತ್ ವ್ಯತ್ಯಯವಾಗಲಿದೆ.

ಮಗ್ಗೆ ವಿ.ವಿ. ಕೇಂದ್ರದಿಂದ ವಿದ್ಯುತ್ ಸರಬರಾಜಾಗುವ ಕಾರಗೋಡು, ಮಗ್ಗೆ, ಚನ್ನಾಪುರ, ಗಂಗಾರ, ಕಣದಹಳ್ಳಿ, ಪಾಳ್ಯ, ಕಂದಲಿ ವಿ.ವಿ.ಕೇಂದ್ರದಿಂದ ವಿದ್ಯುತ್ ಸರಬರಾಜಾಗುವ ಆಲೂರು ಟೌನ್, ಗುಡ್ಡೇನಹಳ್ಳಿ, ಹುಣಸವಳ್ಳಿ, ಪಾಳ್ಯ, ಬೈರಾಪುರ, ಕಂದಲಿ, ಶೆಟ್ಟಿಹಳ್ಳಿ, ಶಂಕರನಹಳ್ಳಿ, ಅಗಲಹಳ್ಳಿ, ಕಣತೂರು, ಸಕಲೇಶಪುರ ವಿ.ವಿ. ಕೇಂದ್ರದಿಂದ ವಿದ್ಯುತ್ ಸರಬರಾಜಾಗುವ ಹಾರ್ಲೆ, ಶುಕ್ರವಾರಸಂತೆ, ಮಳಲಿ, ಸಕಲೇಶಪುರ, ಉದಯವಾರ, ಆನೆಮಹಲ್ ಮತ್ತು ಬೆಳಗೋಡು, ಅರೇ ಹಳ್ಳಿ ವಿ.ವಿ. ಕೇಂದ್ರದಿಂದ ವಿದ್ಯುತ್ ಸರಬರಾಜಾಗುವ ಮಲಸಾವರ, ಅರೇಹಳ್ಳಿ, ಲಕ್ಕುಂದ, ಕೆಸ ಗೋಡು, ಮಾಲೆಗೆರೆ, ಅನುಘಟ್ಟ ಮತ್ತು ಬಾವಿಕಟ್ಟೆ, ಹಾನುಬಾಳು ವಿ.ವಿ. ಕೇಂದ್ರದಿಂದ ವಿದ್ಯುತ್ ಸರಬ ರಾಜಾಗುವ ದೇವಲದಕೆರೆ, ಹುರುಡಿ, ವೆಂಕಟಹಳ್ಳಿ, ಕಾಡುಮನೆ ಸುತ್ತಮುತ್ತಲಿನ ಗ್ರಾಮಗಳ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

814 ಉಪನ್ಯಾಸಕರ ಹುದ್ದೆ ಭರ್ತಿಗೆ ಅಧಿಸೂಚನೆ

• ಪ್ರಜೋದಯ ವರದಿ

ಬೆಂಗಳೂರು: ರಾಜ್ಯದ ಸರ್ಕಾರಿ ಪದವಿ ಪೂರ್ವ (ಪಿಯು) ಕಾಲೇಜುಗಳಲ್ಲಿ ಖಾಲಿ ಇರುವ 814 ಉಪನ್ಯಾಸಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಅನುಮತಿ ನೀಡಿ ಅಧಿಸೂಚನೆ ಹೊರಡಿಸಿದೆ.

ಈ ಹಿಂದೆ ನೀಡಲಾಗಿದ್ದ ಅನುಮತಿಯನ್ನು ಮರು ವರ್ಗೀಕರಿಸಿ ಕಲ್ಯಾಣ ಕರ್ನಾಟಕ ಭಾಗಕ್ಕೆ 36 ಹುದ್ದೆಗಳು ಹಾಗು ಉಳಿಕೆ ಮೂಲ ವೃಂದಕ್ಕೆ 778 ಹುದ್ದೆ ಸೇರಿ 814 ಹುದ್ದೆಗಳಿಗೆ ವಿಷಯವಾರು ನೇಮಕಾತಿ ಕೈಗೊಳ್ಳಲು ಆದೇಶಿಸಲಾಗಿದೆ.

ಕೆಇಎ ಮೂಲಕ ಪರೀಕ್ಷೆ ಮತ್ತು ಆಯ್ಕೆ ಪ್ರಕ್ರಿಯೆ ಸರ್ಕಾರದ ತಿದ್ದುಪಡಿ ನಿಯಮಗಳ ಅನ್ವಯ, 814 ಉಪನ್ಯಾಸಕರ ಹುದ್ದೆಗಳ ನೇರ ನೇಮಕಾತಿಗೆ ಸ್ಪರ್ಧಾತ್ಮಕ ಪರೀಕ್ಷೆ ನಡೆಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರವನ್ನು ಆಯ್ಕೆ ಪ್ರಾಧಿಕಾರವನ್ನಾಗಿ ನೇಮಿಸಿ ಆದೇಶಿಸಲಾಗಿದೆ.

ಕೇದಿಗೆ ಮಠದ ಸ್ವಾಮೀಜಿಗೆ ಪಾದಪೂಜೆ

ಮಾಡಾಳು: ಗ್ರಾಮದ ಆರಾಧ್ಯ ದೇವತೆ ಶ್ರೀ ಸ್ವರ್ಣಗೌರಿ ದೇವಿ ದೇವಾಲಯದಲ್ಲಿ ನೂರಾರು ಭಕ್ತರ ಸಮ್ಮುಖದಲ್ಲಿ ಕೋಳಗುಂದ ಕೇದಿಗೆ ಮಠದ ಶ್ರೀ ಜಯಚಂದ್ರ ಶೇಖರ ಸ್ವಾಮೀಜಿ ಅವರ ಪಾದ ಪೂಜೆ ಶ್ರದ್ಧಾ ಭಕ್ತಿಯಿಂದ ನೆರವೇರಿತು.

ಅರಸೀಕೆರೆ ತಾಲ್ಲೂಕಿನ ಕಣಕಟ್ಟೆ ಹೋಬಳಿ ಮಾಡಾಳು ಗ್ರಾಮದ ಮೂಲಸ್ಥಾನ ಸ್ವರ್ಣ ಗೌರಮ್ಮ ದೇವಿ ನೂತನ ಶಿಲಾ ದೇವಾಲಯದಲ್ಲಿ 8ನೇ ದಿನವಾದ ಸೋಮವಾರ ಬೆಳಿಗ್ಗೆ 11 ಗಂಟೆಯಲ್ಲಿ ಆಗಮಿಸಿದ ಸ್ವಾಮೀಜಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿದರು. ದೇವಾಲಯದ ಪದ್ಧತಿಯಂತೆ ಶ್ರೀಗಳವರ ಪಾದಪೂಜೆ, ಧಾರ್ಮಿಕ ವಿಧಿ ವಿಧಾನ ಶಾಸ್ತ್ರೋಕ್ತವಾಗಿ ನಡೆಯಿತು. ಹಾಸನ ಶಾಸಕ ಹೆಚ್.ಪಿ. ಸ್ವರೂಪ್ ಅವರು ತಮ್ಮ ಪತ್ನಿ ಶ್ವೇತಾ ಅವರೊಂದಿಗೆ ಪೂಜೆ ಸಲ್ಲಿಸಿದರು. ಶ್ವೇತಾ ಅವರು ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ತಲೆ ಮೇಲೆ ದುಗ್ಗಳದ ಬಟ್ಟಲು ಹೊತ್ತು ಹರಕೆ ತೀರಿ ಸಿದರು. ಮಹಿಳಾ ಭಕ್ತರು ದೇವಾಲಯ ಮುಂಭಾಗ ಇರುವ ಅಗ್ನಿಕುಂಡದಲ್ಲಿ ಕರ್ಪೂರ ಸಲ್ಲಿಸಿ ಪ್ರಾರ್ಥಿಸಿದರು. ಅರಸೀಕೆರೆ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್ ಅಧ್ಯಕ್ಷ ಎಸ್.ಎಂ. ಗಂಗಾಧರ್ ಮತ್ತಿತರರಿದ್ದರು.

ಕರ್ನಾಟಕ ಸರ್ಕಾರ

ಧಾರ್ಮಿಕ ದತ್ತಿ ಇಲಾಖೆ

ಕಾರ್ಯನಿರ್ವಾಹಕ ಅಧಿಕಾರಿಯವರ ಕಾರ್ಯಾಲಯ

ಶ್ರೀ ಚನ್ನಕೇಶವ ಸ್ವಾಮಿ ದೇವಸ್ಥಾನ, ಬೇಲೂರು

ದೂರವಾಣಿ ಸಂಖ್ಯೆ : 08177-222218 ದಿನಾಂಕ:18/09/2026

ಇ-ಟೆಂಡರ್/ಹರಾಜು ಪ್ರಕಟಣೆ

ಬೇಲೂರು ಶ್ರೀ ಚನ್ನಕೇಶವ ಸ್ವಾಮಿ ದೇವಸ್ಥಾನದ ಈ ಕೆಳಕಂಡ ವಿವಿಧ ವಹಿವಾಟುಗಳ ನಿರ್ವಹಣೆಗಾಗಿ ಇ-ಹರಾಜು ಕರೆಯಲಾಗಿದೆ. ಆಸಕ್ತರು ಷರತ್ತಿಗೊಳಪಟ್ಟು ಭಾಗವಹಿಸಲು ಕೋರಿದೆ.

ವೆಬ್ ಸೈಟ್ ವಿಳಾಸ: (www.KPPP.karnataka.gov.in)

ಕ್ರಸಂ	ಇ-ಹರಾಜು ವಿವರ	ಅವಧಿ	ಇ-ಹರಾಜು ಆರಂಭ ದಿನಾಂಕ	ಇ.ಎಂ.ಡಿ. ಮೊತ್ತ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಇ.ಎಂ.ಡಿ. ಮೊತ್ತ	ಇ-ಹರಾಜಿನಲ್ಲಿ ದರ ನಮೂದಿಸಲು ಅಂತಿಮ ದಿನಾಂಕ ಮತ್ತು ಸಮಯ
1	ಶ್ರೀ ಚನ್ನಕೇಶವ ಸ್ವಾಮಿ ದೇವಸ್ಥಾನದಲ್ಲಿ ಶಿಲ್ಪಕಲೆಗಳ ಭಾವಚಿತ್ರಗಳು ಮತ್ತು ಇತಿಹಾಸ ಪುಸ್ತಕ ಮಾರಾಟದ ಉಸ್ತುವಾರಿ	01/10/2026 ರಿಂದ 31/03/2028	18/09/2026	ದಿ:25/09/2026 ರೂ. 3,00,000/-	28/09/2026ರ ಸಂಜೆ 3.00 ಗಂಟೆವರೆಗೆ
2	ಶ್ರೀ ಚನ್ನಕೇಶವ ಸ್ವಾಮಿ ದೇವಾಲಯದಲ್ಲಿ ಲಾಡು ಪ್ರಸಾದ ಮತ್ತು ಕಲ್ಲುಸಕ್ಕರೆ ಮಾರಾಟದ ಉಸ್ತುವಾರಿ	01/10/2026 ರಿಂದ 31/03/2028	18/09/2026	ದಿ: 25/09/2026 ರೂ. 7,50,000/-	28/09/2026ರ ಸಂಜೆ 4.00 ಗಂಟೆವರೆಗೆ
3	ಶ್ರೀ ಚನ್ನಕೇಶವ ಸ್ವಾಮಿ ದೇವಸ್ಥಾನದ ವಾಣಿಜ್ಯ ಮಳಿಗೆಯಲ್ಲಿ ಪೂಜಾ ಸಾಮಾಗ್ರಿ ಮಾರಾಟ ಹಾಗು ಲಗೇಜು ಉಸ್ತುವಾರಿ ನಿರ್ವಹಣೆ	01/10/2026 ರಿಂದ 31/03/2028	18/09/2026	ದಿ: 25/09/2026 ರೂ. 2,00,000/-	28/09/2026 ಸಂಜೆ 5.00 ಗಂಟೆವರೆಗೆ

ವಿ.ಸೂ:-ಆಸಕ್ತರು ಇ-ಹರಾಜಿಗೆ ಸಂಬಂಧಿಸಿದಂತೆ ಇರುವ ಷರತ್ತುಗಳ ಬಗ್ಗೆ ಮತ್ತು ಹೆಚ್ಚಿನ ಮಾಹಿತಿಯನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿರುತ್ತದೆ. ಇ-ಹರಾಜನ್ನು ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿದೆ.

ಸಹಿ/-
ಕಾರ್ಯನಿರ್ವಾಹಕ ಅಧಿಕಾರಿಗಳು
ಶ್ರೀ ಚನ್ನಕೇಶವ ಸ್ವಾಮಿ ದೇವಸ್ಥಾನ
ಬೇಲೂರು.

ಟಿ.ಎನ್.ಸೀತಾರಾಂ ಅವರ ಮುಂದಿನ ಅಧ್ಯಾಯ ವೆಬ್ ಸರಣಿ ಲೋಕಾರ್ಪಣೆ

• ಪ್ರಜೋದಯ ವರದಿ

ಹಾಸನ: ಖ್ಯಾತ ನಟ, ನಿರ್ದೇಶಕ, ಸಾಹಿತಿ ಟಿ.ಎನ್.ಸೀತಾರಾಂ ಸಾರಥ್ಯದ ಮೊದಲ ಯೂಟ್ಯೂಬ್ ವೆಬ್ ಸರಣಿ ಮುಂದಿನ ಅಧ್ಯಾಯ ಲೋಕಾರ್ಪಣೆ ಸಮಾರಂಭ ಇತ್ತೀಚೆಗೆ ನಗರದ ಗಾಂಧಿ ಭವನದಲ್ಲಿ ನೂರಾರು ಅಭಿಮಾನಿಗಳ ಸಮ್ಮುಖದಲ್ಲಿ ನಡೆಯಿತು.

ನಿರ್ದೇಶಕ ಟಿ.ಎನ್.ಸೀತಾರಾಂ ಅವರು ಮಾತನಾಡಿ, ತಮ್ಮ ಮಾಯಾಮೃಗದಿಂದ ಈವರೆಗಿನ ಧಾರಾವಾಹಿಗಳ ಪ್ರಮುಖ ಪಾತ್ರಗಳಾದ ಜಾನಕಿ, ಮಾಧವಿ ಪಟೇಲ್, ಶಾಸ್ತ್ರಿಗಳು, ಶಂಕರಮೂರ್ತಿ ಮೊದಲಾದ ಪಾತ್ರಗಳ ಇಂದಿನ ಸ್ಥಿತಿ ಏನಾಗಿರಬಹುದು ಎನ್ನುವ ಕುತೂಹಲಕರ ಕಥಾ ಹಂದರದೊಂದಿಗೆ ಈ ವೆಬ್ ಸರಣಿ ಆರಂಭಿಸಲಾಗಿದೆ ಎಂದರು.

ಮೊದಲು ಮಗಳು ಜಾನಕಿಯ ಪಾತ್ರವನ್ನು ಕೈಗೆತ್ತಿಕೊಳ್ಳಲಾಗಿದ್ದು, 16 ಎಪಿಸೋಡ್‌ಗಳ ಮೂರು ಸೀಸನ್‌ಗಳಲ್ಲಿ ಮುಂದಿನ ಅಧ್ಯಾಯ ಬರಲಿದೆ. ಸೆ. 22ರಿಂದ ಸಂಜೆ 8 ರಿಂದ 8.30ರ ವರೆಗೆ ಭೂಮಿಕಾ ಟಾಕೀಸ್ ಯೂಟ್ಯೂಬ್ ಚಾನೆಲ್‌ನಲ್ಲಿ ಅರ್ಧ ಗಂಟೆಗಳ ಕಾಲ ಎಪಿಸೋಡ್ ಪ್ರಸಾರವಾಗಲಿದ್ದು, 24 ಗಂಟೆಗಳ ಕಾಲವಷ್ಟೇ ಅದು ಯೂಟ್ಯೂಬ್‌ನಲ್ಲಿ ಲಭ್ಯವಿರುತ್ತದೆ. ಮುಂದಿನ ಎಪಿಸೋಡ್ ಬಂದ ನಂತರ ಹಿಂದಿನ ಎಪಿಸೋಡ್ ವೀಕ್ಷಣೆಗೆ ದೊರಕುವುದಿಲ್ಲ ಎಂದರು.

ತಾವು ಯೂಟ್ಯೂಬ್ ಮೂಲಕ ನಿರ್ದೇಶನಕ್ಕೆ ಮರಳಲು ಕಾರಣವಾಗಿರುವ ಬಗ್ಗೆ ಮಾತನಾಡಿದ ಅವರು, ಈಗ ಮುಖ್ಯವಾಹಿನಿ ಮನರಂಜನೆ ಚಾನೆಲ್‌ಗಳು ಅವರು ನೀಡುವ ಶ್ರೀಮಂತ ಕುಟುಂಬಗಳ ನಡುವಿನ ಹಗೆತನ, ವ್ಯವಹಾರದ ಕತೆಗಳನ್ನು ಧಾರಾವಾಹಿ ಮಾಡಬೇಕೆಂದು ಬಯಸುತ್ತವೆ. ಆದರೆ ಮಧ್ಯಮ, ಕೆಳ ಮಧ್ಯಮ ವರ್ಗದಲ್ಲಿ ಹುಟ್ಟಿ, ಬೆಳೆದು, ಬದುಕು ಕಂಡಿರುವ ನನಗೆ ಅನುಭವ ಇಲ್ಲದ ಬದುಕಿನ ಕತೆಗಳನ್ನು ನಿರ್ದೇಶನ ಮಾಡಲು ಸಾಧ್ಯವಿಲ್ಲ. ಹೀಗಾಗಿ ಅಂತಹ ಅವಕಾಶಗಳನ್ನು ಬಿಟ್ಟು ಮುಂದಿನ ಅಧ್ಯಾಯವನ್ನು ಯೂಟ್ಯೂಬ್‌ನಲ್ಲಿ ಬಿಡುಗಡೆ ಮಾಡುತ್ತಿದ್ದೇವೆ ಎಂದರು.

ಕಾರ್ಯಕ್ರಮವನ್ನು ಸ್ಕಾಲರ್ಸ್ ಇಂಟರ್ ನ್ಯಾಷನಲ್ ಶಾಲೆಯ ಆಡಳಿತಾಧಿಕಾರಿ ಡಾ.ಹೆಚ್.ಎನ್.ಚಂದ್ರಶೇಖರ್ ಉದ್ಘಾಟಿಸಿದರು. ನಿರ್ಮಾಣ ಸಂಸ್ಥೆಯ ರಾಮಚಂದ್ರ, ದೇಗೂರು, ಸರಣಿಯ ಕಲಾವಿದರಾದ ಹನುಮಂತೇಗೌಡ, ಸುಧಾ ಬೆಳವಾಡಿ, ಅರ್ಜುನ್ ಸಾಮರ್ಥ್ಯ, ಚಂದನ್ ಶಂಕರ್, ಡಿ.ಸಿ.ಕೃಷ್ಣಮೂರ್ತಿ ಮಾತನಾಡಿದರು. ಸಂಕಲನಕಾರ ರಾಧೇಶ್, ಸಹಾಯಕ ನಿರ್ದೇಶಕ ಪ್ರದೀಪ್ ಇದ್ದರು.

ಪ್ರಥಮ ಎಪಿಸೋಡ್ ಬಿಡುಗಡೆ ನಂತರ ಅಭಿಮಾನಿಗಳ ಜತೆಗಿನ ಸಂವಾದದಲ್ಲಿ ಟಿ.ಎನ್.ಎಸ್. ಹಾಗು ಕಲಾವಿದರು ಉತ್ಸಾಹದಿಂದ ಪಾಲ್ಗೊಂಡರು. ಪತ್ರಕರ್ತ ಹೆತ್ತೂರು ನಾಗರಾಜ್ ಸ್ವಾಗತಿಸಿದರು. ಪತ್ರಕರ್ತ, ನಿರ್ದೇಶಕ ಮಂಜು ಬನವಾಸೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ.ಅನುಪಮಾ ಪ್ರಾರ್ಥಿಸಿದರು, ಕು.ರಕ್ಷಿತಾ ಭರತನಾಟ್ಯ ಪ್ರದರ್ಶಿಸಿದರು. ಪೆನ್ಷನ್ ಮೊಹಲ್ಲಾ ಕುಮಾರ್ ತಂಡದವರು ಭಾವಗೀತೆಗಳನ್ನು ಹಾಡಿದರು. ಚಂದನಾ ವೆಂಕಟೇಶ್, ಜಾವಗಲ್ ಪ್ರಸನ್ನ ನಿರೂಪಿಸಿದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019